ಮಾನವಿಕ ಕರ್ಣಾಟಕ

ಸಂಪುಟ ೧೪ ಸಂಚಿಕೆ ೧

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೩

ಲೇಖಕರಿಗೆ ಸೂಚನೆಗಳು

೧ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಸ್ವತಂತ್ರ ಅಥವಾ ಅನುವಾದಿತ ಲೇಖನಗಳನ್ನು 'ಮಾನವಿಕ ಕರ್ಣಾಟಕ' ದಲ್ಲಿ ಪ್ರಕಟಿಸಲಾಗುವುದು. ಲೇಖನ ಅನುವಾದವಾಗಿದ್ದರೆ ಮೂಲ ಲೇಖಕರ ಮತ್ತು ಲೇಖನದ ಹೆಸರುಗಳನ್ನೂ ಲೇಖನದ ಆಕರವನ್ನೂ ಸೂಚಿಸಬೇಕಲ್ಲದೆ ಮೂಲ ಲೇಖಕರ ಅಥವಾ ಪ್ರಕಾಶಕರ ಸಮ್ಮತಿಯನ್ನೂ ಲೇಖನದೊಂದಿಗೆ ಕಳುಹಿಸಬೇಕು.

೨ ಲೇಖನವನ್ನು ಕಾಗದದ ಒಂದೇ ಬದಿಯಲ್ಲಿ ಸ್ಪಷ್ಟವಾಗಿ ಬರೆದಿರಬೇಕು ; ಅಥವಾ ಟೈಪು ಮಾಡಿರಬೇಕು. ಲೇಖಕರು ತಮ್ಮ ಲೇಖನದೊಂದಿಗೆ ತಮ್ಮ ಸಂಕ್ಷಿಪ್ತ ಪರಿಚಯವನ್ನು ಕಳುಹಿಸಿಕೊಡಬೇಕು.

೩ ಲೇಖನಕ್ಕೆ ಅವಶ್ಯಕವಾದ ಚಿತ್ರಗಳಿದ್ದರೆ ಅದನ್ನು ಚಿತ್ರಕಾರರಿಂದ ಇಂಡಿಯನ್ ಇಂಕಿನಲ್ಲಿ ಬರೆಸಿ ಕಳುಹಿಸಿಕೊಡಬೇಕು. ಇದು ಸಾಧ್ಯವಾಗದಿದ್ದರೆ ಯಾವುದಾದರೂ ಪ್ರಕಟಿತ ಪುಸ್ತಕದಲ್ಲಿರುವ ಚಿತ್ರಗಳನ್ನು ಸೂಚಿಸಬಹುದು ; ಅವುಗಳಲ್ಲಿ ಬದಲಾವಣೆಗಳೇನಾದರೂ ಅವಶ್ಯವಿದ್ದರೆ ಅವನ್ನೂ ಸೂಚಿಸಬೇಕು.

೪ ಸ್ವೀಕೃತವಾಗದ ಲೇಖನವನ್ನು ಹಿಂದಕ್ಕೆ ಪಡೆಯಬಯಸುವವರು ಈ ಬಗ್ಗೆ ತಿಳಿಸಬೇಕಲ್ಲದೆ ಇದಕ್ಕೆ ಸಾಕಷ್ಟು ಅಂಚೆ ಚೀಟಿ ಕಳುಹಿಸಿಕೊಡಬೇಕು.

೫ ಅಚ್ಚಾದ ಲೇಖನದ ೨೫ ಪ್ರತಿಗಳನ್ನು ಅದರ ಲೇಖಕರಿಗೆ ಒದಗಿಸಲಾಗುವುದು. ಹೆಚ್ಚು ಪ್ರತಿಗಳು ಬೇಕಾಗಿದ್ದರೆ ಮೊದಲೇ ತಿಳಿಸಬೇಕು. ಅದಕ್ಕೆ ತಗಲುವ ವೆಚ್ಚವನ್ನು ಲೇಖಕರೇ ವಹಿಸಿಕೊಳ್ಳಬೇಕು.

೬ ಪತ್ರಿಕೆಯಲ್ಲಿ ಪ್ರಕಟವಾಗುವ ಲೇಖನಗಳಿಗೆ ಸಂಬಂಧಿಸಿದಂತೆ ವಾಚಕರಿಂದ ಬರುವ ವಿಚಾರ ಪ್ರಚೋದಕವಾದ ಪತ್ರಗಳಿಗೆ ಸ್ವಾಗತವುಂಟು. ಇವುಗಳನ್ನು ಪ್ರಕಟಿಸುವ, ಬಿಡುವ ಅಥವಾ ಸೂಕ್ತ ಬದಲಾವಣೆಯೊಂದಿಗೆ ಪ್ರಕಟಿಸುವ ಸ್ವಾತಂತ್ರ್ಯ ಸಂಪಾದಕರಿಗೆ ಸೇರಿದೆ.

೭ ಮಾನವಿಕ ವಿಷಯಗಳಿಗೆ ಸಂಬಂಧಿಸಿದ ಕನ್ನಡ ಅಥವಾ ಇಂಗ್ಲಿಷ್ ಪುಸ್ತಕಗಳನ್ನು ವಿಮರ್ಶೆಗಾಗಿ ಕಳುಹಿಸಬಯಸುವವರು ಅವುಗಳ ಎರಡೆರಡು ಪ್ರತಿ ಕಳುಹಿಸಿಕೊಡಬೇಕು.

೮ ಲೇಖನಗಳನ್ನೂ ವಿಮರ್ಶೆಗಾಗಿ ಪುಸ್ತಕಗಳನ್ನೂ ಕಳುಹಿಸುವವರು ಸಂಪಾದಕರು, ಮಾನವಿಕ ಕರ್ಣಾಟಕ, ಪ್ರಸಾರಾಂಗ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬ ಎಂಬ ವಿಳಾಸಕ್ಕೆ ಕಳುಹಿಸಬೇಕು.

ಮಾನವಿಕ ಕರ್ಣಾಟಕ

ಸಂಪುಟ ೧೪ ಸಂಚಿಕೆ ೧

೫೩

ನವಂಬರ್ ಸಂಚಿಕೆ

ಮೈಸೂರು
ಮೈಸೂರು ವಿಶ್ವವಿದ್ಯಾನಿಲಯ
೧೯೮೩

MANAVIKA KARNATAKA, Kannada quarterly of the University of Mysore, Volume 14, Number 1, November 1983. Edited by Dr. B. R. Gopal and Dr. C. M. Muniramappa.

ಪ್ರಧಾನ ಸಂಪಾದಕರು

ಡಾ. ಹಾ. ಮಾ. ನಾಯಕ

ಸಂಪಾದಕರು

ಡಾ. ಬಾ. ರಾ. ಗೋಪಾಲ್

ಡಾ. ಸಿ. ಎಂ. ಮುನಿರಾಮಪ್ಪ

ಪ್ರಕಾಶಕರು

ಕೆ. ಟಿ. ವೀರಪ್ಪ

ನಿರ್ದೇಶಕರು, ಪ್ರಸಾರಾಂಗ, ಮೈಸೂರು ವಿಶ್ವವಿದ್ಯಾನಿಲಯ, ಮೈಸೂರು

ಮುದ್ರಕರು

ಶ್ರೀಲಕ್ಷ್ಮೀ ಮುದ್ರಣಾಲಯ, ರವೆ ಬೀದಿ, 2 ನೇ ಕ್ರಾಸ್, ಮೈಸೂರು - 1

ವಿಷಯ ಸೂಚಿ

ಈ ಸಂಚಿಕೆಯ ಲೇಖಕರು

೧.	ಕೆ. ಎಸ್. ರಾಮಕೃಷ್ಣರಾವ್	ತತ್ವಶಾಸ್ತ್ರ ಅಧ್ಯಾಪಕರು (ನಿವೃತ್ತ) ೩೬, ಮೊದಲನೆಯ ಮುಖ್ಯ ರಸ್ತೆ, ಜಯಲಕ್ಷ್ಮೀ ಪುರಂ, ಮೈಸೂರು-೫೭೦ ೦೧೨
೨.	ಬಿ. ಆರ್. ಅನಂತನ್	ಅಧ್ಯಾಪಕ, ವಾಣಿಜ್ಯ ವಿಭಾಗ, ಮಾನಸ ಗಂಗೋತ್ರಿ, ಮೈಸೂರು ವಿಶ್ವವಿದ್ಯಾನಿಲಯ ಮೈಸೂರು-೫೭೦ ೦೦೬
೩.	ಡಿ. ಎಂ. ಬಸವರಾಜ	ಅಧ್ಯಾಪಕ, ಆಚಾರ್ಯ ತುಳಸಿ ನ್ಯಾಷನಲ್ ಕಾಲೇಜ್ ಆಫ್ ಕಾಮರ್ಸ್, ಶಿವಮೊಗ್ಗ
೪.	ಕೆ. ಯಶೋಧರ	ಅಧ್ಯಾಪಕಿ, ಶಿಕ್ಷಣ ವಿಭಾಗ, ಮಾನಸ ಗಂಗೋತ್ರಿ, ಮೈಸೂರು-೫೭೦ ೦೦೬
೫.	ಎಚ್. ಆರ್. ರಘುನಾಥ ಭಟ್	ಅಧ್ಯಾಪಕ, ಇತಿಹಾಸ ವಿಭಾಗ, ಮಾನಸ ಗಂಗೋತ್ರಿ, ಮೈಸೂರು
೬.	ಅಂಬಳಿಕೆ ಹಿರಿಯಣ್ಣ	ಅಧ್ಯಾಪಕ, ಜನಪದ ವಿಭಾಗ, ಕನ್ನಡ ಅಧ್ಯಯನ ಸಂಸ್ಥೆ, ಮಾನಸಗಂಗೋತ್ರಿ, ಮೈಸೂರು-೫೭೦ ೦೦೬

ಕೆ. ಎಸ್. ರಾಮಕೃಷ್ಣರಾವ್

ಫ್ರಾನ್ಸಿಸ್ ಬೇಕನ್ ಮತ್ತು ಡೇಕಾರ್ಟ್

I ಫ್ರಾನ್ಸಿಸ್ ಬೇಕನ್ (1561-1626)

1561 ನೇ ಇಸವಿಯಲ್ಲಿ ಜನಿಸಿದ ಬೇಕನ್‌ನ ಜೀವನ ಕ್ರಮ ರೂಪುಗೊಳ್ಳಲು ಅಂದು ಅತ್ಯಂತ ಶಕ್ತಿಶಾಲಿ ರಾಷ್ಟ್ರವೆನಿಸಿದ್ದ ಎಲಿಜಬೆತ್ ರಾಣಿಯ ಕಾಲದ ಇಂಗ್ಲೆಂಡ್ ದೇಶವೇ ಕಾರಣವೆನ್ನಬಹುದು. ಆತನ ತಂದೆ ನಿಕೊಲಸ್ ಬೇಕನ್ ಕೂಡ ಇಂಗ್ಲೆಂಡಿನ ರಾಜಕೀಯ ಜಗತ್ತಿನಲ್ಲಿ ಒಬ್ಬ ಪ್ರಭಾವಿತ ವ್ಯಕ್ತಿಯಾಗಿದ್ದನು. ಚಿಕ್ಕ ವಯಸ್ಸಿನಲ್ಲಿ ಫ್ರಾನ್ಸಿಸ್ ಬೇಕನ್‌ನು ಹಿಂದಿನ ಕಾಲದ ಪಠ್ಯ ವಿಷಯಗಳನ್ನು, ಪಾಠಕ್ರಮಗಳನ್ನು ಮತ್ತು ಅರಿಸ್ಟಾಟಲ್ ನಿರೂಪಿಸಿದ ತರ್ಕಶಾಸ್ತ್ರ ಹಾಗೂ ವಿಜ್ಞಾನ ಪದ್ಧತಿಗಳನ್ನು ನಿರ್ಲಕ್ಷಿಸಲು ಪ್ರಾರಂಭಿಸಿದನು. ಹಾಗೂ ತತ್ವಶಾಸ್ತ್ರವನ್ನು ಇನ್ನೂ ಉತ್ತಮವಾದ ದಾರಿಯಲ್ಲಿ ವ್ಯವಸ್ಥಿತಗೊಳಿಸಬೇಕೆಂದು ಆಗಿನಿಂದಲೇ ಅಪೇಕ್ಷಿಸುತ್ತಿದ್ದನು. ತತ್ವಶಾಸ್ತ್ರವನ್ನು ಧರ್ಮ ಮಂದಿರಗಳ ಮತ್ತು ಧರ್ಮ ಗುರುಗಳ ಹತೋಟಿಯಿಂದ ತಪ್ಪಿಸಿ ಅದರ ಸ್ವತಂತ್ರತೆಯು ಮಾನವ ಕಲ್ಯಾಣಕ್ಕೆ ವಿನಿಯೋಗವಾಗಬೇಕೆಂದು ಆಶಿಸಿದನು. ಚಿಕ್ಕ ವಯಸ್ಸಿನಲ್ಲಿಯೇ ತಂದೆಯನ್ನು ಕಳೆದುಕೊಂಡು ಬೇರೆಯವರ ಆಶ್ರಯ, ಹಂಗಿಲ್ಲದೆ ಬೆಳೆದ ಬೇಕನ್ ತನ್ನ ವ್ಯಕ್ತಿತ್ವವನ್ನು, ಅಂತಸ್ತನ್ನು ಹೇಗೆ ಬೆಳೆಸಿಕೊಳ್ಳಬೇಕೆಂಬುದನ್ನು ತಾನೇ ಕಲಿತುಕೊಳ್ಳುವಂತಾಯಿತು. ತನ್ನ ವಾಕ್ ಚಾತುರ್ಯ, ಆಧುನಿಕ ವಿಚಾರ ಸರಣಿ, ಪ್ರೇಕ್ಷಕರನ್ನು ಮುಗ್ಧಗೊಳಿಸುವ ಸ್ಪಷ್ಟವಾದ ವಿಚಾರ, ವಾದಗಳಿಂದಾಗಿ ಆತನು ಇಂಗ್ಲೆಂಡಿನ ರಾಜಕೀಯದಲ್ಲಿ ತನ್ನದೇ ಆದ ಉನ್ನತ ಸ್ಥಾನವನ್ನು ಗಳಿಸಿದನು. ಆತನ ಶುದ್ಧ ರಾಜಕೀಯ ಮತ್ತು ಅಪಾರ ಜ್ಞಾನ, ಅತನು ಸಾಮಾನ್ಯವಾಗಿ ಎಲ್ಲಾ ಸಮಿತಿ-ಸಂಘಗಳಲ್ಲೂ ಸ್ಥಾನ ಗಳಿಸುವಂತೆ ಸಹಕರಿಸಿದವು. ಪ್ಲೇಟೋನ ಆದರ್ಶ ರಾಜ್ಯ ರಕ್ಷಕನ ಗುಣಗಳೆಲ್ಲಾ ಬೇಕನ್‌ನಲ್ಲಿ ಇದ್ದುವೆಂದರೆ ಅತಿಶಯೋಕ್ತಿಯಾಗಲಾರದು.

ವಿಜ್ಞಾನದ ಸುಧಾರಣೆಯಲ್ಲಿ ಬೇಕನ್‌ನು ಆಧುನಿಕ ಸ್ಫೂರ್ತಿಯ ಪ್ರತಿನಿಧಿಗಳಲ್ಲಿ ಒಬ್ಬನಾಗಿದ್ದಾನೆ. ಹಿಂದಿನ ಕಾಲದ ಅಧಿಕಾರ ರೀತಿ, ಅರಿಸ್ಟಾಟಲನ ತತ್ವಚಿಂತನೆಯು ಸೇರಿದಂತೆ ಗ್ರೀಕ್ ತತ್ವಾಂಶಗಳು ಮತ್ತು ಧರ್ಮ ಸಂಪ್ರದಾಯದಿಂದ ಕೂಡಿದ ಮಧ್ಯ

ಕಾಲೀನ ತತ್ವಶಾಸ್ತ್ರ ಇವುಗಳಿಗೆ ಅವನು ವಿರುದ್ಧ. ಮನಸ್ಸಿನ ವಿಚಾರ ನಿಜವಸ್ತುಗಳಿಂದ ದೂರವಿರಬಾರದು, ಅದು ನಿಜವಸ್ತುಗಳು ಹೇಗಿವೆಯೋ ಅದೇ ರೀತಿಯಲ್ಲಿ ಅವುಗಳನ್ನು ಪ್ರತಿಬಿಂಬಿಸಬೇಕು ಎಂಬುದು ಅವನ ಸಿದ್ಧಾಂತ. ಈ ಸಿದ್ಧಾಂತವು ಪುರಾತನ ಸಿದ್ಧಾಂತಗಳಿಗೆ ಪೂರ್ಣ ವಿರುದ್ಧ. ಗತ ಕಾಲವು ಏನನ್ನು ಗಳಿಸಿಲ್ಲ. ಅಂದಿನ ಸಿದ್ಧಾಂತಗಳು ಮತ್ತು ಪದ್ಧತಿಗಳು ನೀಡಿದ ಪರಿಣಾಮಗಳೆಲ್ಲವೂ ತಪ್ಪು ಎಂದು ಅಭಿಪ್ರಾಯಪಟ್ಟ ಬೇಕನ್ ನಾವು ನಮ್ಮ ಜ್ಞಾನವನ್ನು ಮತ್ತೆ ಪ್ರಾರಂಭದಿಂದಲೇ ನಿರ್ಮಿಸಬೇಕು ಎಂದನು. ಇದಕ್ಕೆ ಪೂರ್ವಸಿದ್ಧತೆಯಾಗಿ ನಾವು ನಮ್ಮ ಮನಸ್ಸನ್ನು ಪೂರ್ವಪೀಡಿತ ಭಾವನೆಗಳಿಂದ ಮತ್ತು ಮೂಢನಂಬಿಕೆಗಳಿಂದ ವಿಮುಕ್ತಗೊಳಿಸಬೇಕು. ನಾವು ಅಭಿಪ್ರಾಯಗಳನ್ನು ಅನುಸರಿಸುವ ಅಥವಾ ಅನುಕರಿಸುವ ಬದಲು ನೈಜವಸ್ತುಗಳ ಬಳಿ ಹೋಗಬೇಕು. ಸೂಕ್ಷ್ಮವಾಗಿ ಹೇಳುವುದಾದರೆ ನಾವು ಸ್ವತಂತ್ರವಾಗಿ ವಿಚಾರ ಮಾಡಬೇಕು. ಬೇಕನ್‌ನ ಪ್ರಕಾರ ಪ್ರಕೃತಿ ವಿಜ್ಞಾನವೇ ನಿಜವಾದ ಜ್ಞಾನದ ಮಾದರಿ. ನಾವು ಅನುಸರಿಸಬೇಕಾದ ಪದ್ಧತಿ ವಿಗಮನ ಪದ್ಧತಿ. ಶೋಧನೆಯು ಕಲಿಯೇ ನಮ್ಮ ಗುರಿಯಾಗಿರಬೇಕು. ಈ ವಿಷಯಗಳನ್ನು ಕೂಲಂಕಷವಾಗಿ ಇವನು ಬರೆದ 'ನೋವಂ ಆರ್ಗನಂ', ಅಡ್ವಾನ್ಸ್‌ಮೆಂಟ್ ಆಫ್ ಲರ್ನಿಂಗ್, ನ್ಯೂ ಅಟ್ಲಾಂಟಿಸ್, ಗ್ರಂಥಗಳಲ್ಲಿ ಪ್ರತಿಪಾದಿಸಿದ್ದಾನೆ. ಇವನು ಸುಪ್ರಸಿದ್ಧವಾದ ಅನೇಕ ಪ್ರಬಂಧಗಳನ್ನು ಬರೆದಿದ್ದಾನೆ. ಈ ಪ್ರಬಂಧಗಳು ತತ್ವ ದೃಷ್ಟಿಯಿಂದ ಅಷ್ಟು ಮುಖ್ಯವಲ್ಲದಿದ್ದರೂ, ವಿಜ್ಞಾನ ಮಾರ್ಗವನ್ನೂ ಅದರ ಮೇಲ್ಮೆಯನ್ನೂ ಅದರಿಂದ ಸಮಾಜಕ್ಕೆ ಆಗಬಹುದಾದ ಸೌಖ್ಯ ಸೌಲಭ್ಯಗಳನ್ನು ಸಾರುವುದೇ ಇವನ ತತ್ವ ಗ್ರಂಥಗಳ ಉದ್ದೇಶ. ಜ್ಞಾನದಲ್ಲೆಲ್ಲಾ ವಿಜ್ಞಾನಕ್ಕಿಂತಲೂ ಉತ್ತಮವಾದ ಜ್ಞಾನವಿಲ್ಲ. ಮೇಲಾಗಿ ಅದೊಂದು ಬಲ, ಶಕ್ತಿ. ಇಂಥ ಬಲಯುತವಾದ ಜ್ಞಾನವೇ ನಿಜವಾದ ಜ್ಞಾನ. ಇಂಥ ಜ್ಞಾನದಿಂದ ಪ್ರಕೃತಿಯನ್ನು ಗೆದ್ದು ಮಾನವ ಜೀವನವನ್ನು ಪುನರ್ರಚಿಸುವುದು ಪರಮ ಪುರುಷಾರ್ಥ. ಹಾಗೆ ರಚಿಸಿದ ವೈಜ್ಞಾನಿಕ ಸಮಾಜವನ್ನು 'ನ್ಯೂ ಅಟ್ಲಾಂಟಿಸ್' ಎಂಬ ತನ್ನ ಪುಸ್ತಕದಲ್ಲಿ ಚಿತ್ರಿಸಿರುತ್ತಾನೆ. ಇದರಲ್ಲಿ ಎಲ್ಲರೂ ವೈಜ್ಞಾನಿಕರು, ಎಲ್ಲರೂ ಯಾಂತ್ರಿಕರು, ತಾತ್ವಿಕರು ಆ ರಾಜ್ಯದ ಮುಖಂಡರು. ಇವನ ತಾತ್ವಿಕ ವಿಚಾರ ಸರಣಿ ಲಾಕ್, ಹ್ಯೂಂ, ಬರ್ಟ್ರಂಡ್‌ರಸಲ್, ವಿಲಿಯಂ ಜೇಮ್ಸ್, ಜಾನ್‌ಡ್ಯೂಯಿ ಮುಂತಾದವರ ದರ್ಶನಗಳಲ್ಲಿ ಕಾಣಬಹುದು.

ಹಿಂದಿನ 2500 ವರ್ಷಗಳಲ್ಲಿ ಪಡೆದ ಸಾಧನೆ ಅತ್ಯಲ್ಪ. ಈ ಪರಿಸ್ಥಿತಿ ಉಂಟಾಗಲು ನಮ್ಮ ಪೂರ್ವಜರು ಸರಿಯಾದ ಒಂದು ಪದ್ಧತಿಯನ್ನು ಅನುಸರಿಸದಿದ್ದುದೇ ಕಾರಣ. ಅವರಲ್ಲಿ ಕೆಲವರು ಪ್ರತಿಪಾದನಾ ಪದ್ಧತಿಯನ್ನು ಅನುಸರಿಸಿದರು. ಆದರೆ ತಮ್ಮ ಪ್ರತಿಪಾದನೆಯಲ್ಲಿ ಅವರು ಅನುಸರಿಸಿದ ನಿಯಮಗಳು ಅಥವಾ ತತ್ವಗಳು ತೀವ್ರ ಪರಿಶೀಲನೆ ಇಲ್ಲದೆ ಆತುರದ ತೀರ್ಮಾನ ಮತ್ತು ಮೂಢನಂಬಿಕೆಗಳಿಂದ ಕೂಡಿದ್ದು ಅವರ ವಿವರಣೆ ದೋಷಪೂರಿತವಾದುವು. ಇನ್ನು ಕೆಲವು ಚಿಂತಕರು ಇಂದ್ರಿಯಾನು

ಭವದ ಸಹಾಯದಿಂದ ಪ್ರಪಂಚವನ್ನು ವೀಕ್ಷಿಸಿದರು. ಆದರೆ ಜ್ಞಾನವು ಕೇವಲ ಇಂದ್ರಿಯಾನುಭವಗಳನ್ನು ಆಶ್ರಯಿಸಿದರೆ ಅದು ಸಮಂಜಸವಾಗಲಾರದು. ತಮ್ಮ ಇಂದ್ರಿಯಾನುಭವಗಳನ್ನು ಸಮಂಜಸವಾದ ವಿಚಾರ ಕ್ರಮದಿಂದ ವ್ಯವಸ್ಥಿತಗೊಳಿಸದಿದ್ದರೆ ಅವು ಸಾಮಾನ್ಯವಾಗಿ ದೋಷಪೂರಿತವಾಗಿಯೇ ಉಳಿಯುತ್ತವೆ. ನಮ್ಮ ಪೂರ್ವಿಕರಲ್ಲಿ ಮತ್ತೆ ಕೆಲವರು ಜ್ಞಾನವೇ ಸಾಧ್ಯವಿಲ್ಲವೆಂಬ ನಿರಾಶ ಪ್ರವೃತ್ತಿಯನ್ನು ಬೆಳಸಿಕೊಂಡರು. ಇಂತಹ ಪ್ರವೃತ್ತಿಯು ಒಂದು ರೀತಿಯ ಶಾಸ್ತ್ರಾಂಧತೆಯನ್ನು ಅತೃಪ್ತಿಯನ್ನು ಸೂಚಿಸುತ್ತದೆ. ಆದುದರಿಂದಲೇ ನಾವು ಜ್ಞಾನವನ್ನು ಮತ್ತೆ ಹೊಸದಾಗಿ ಪ್ರಾರಂಭಿಸಬೇಕು ಎನ್ನುತ್ತಾನೆ ಬೇಕನ್. ವಿಜ್ಞಾನ, ಕಲೆ ಮೊದಲಾದ ಎಲ್ಲ ರೀತಿಯ ಜ್ಞಾನ ವಿಭಾಗಗಳನ್ನು ಹೊಸದಾದ, ಗಟ್ಟಿ ಮುಟ್ಟಾದ, ಸಂಶಯ ರಹಿತವಾದ ಹಾಗೂ ಮೂಢನಂಬಿಕೆಗಳಿಂದ ಹೊರತಾದ ಅಸ್ತಿಭಾರದ ಮೇಲೆ ಕಟ್ಟಬೇಕೆಂದು ಅವನು ಅಭಿಪ್ರಾಯಪಟ್ಟನು. ಈ ಮಹತ್ವಾಕಾಂಕ್ಷೆಯಿಂದ ಒಡಗೂಡಿದ ಆತನ ಸಾಹಸ ಕಾರ್ಯವನ್ನು 'ಯಥಾಸ್ಥಾಪನೆ' The Great Installation ಎಂದು ಕರೆಯುತ್ತಾನೆ. ಪ್ರಕೃತಿ ವಿಜ್ಞಾನದಲ್ಲಿ ವ್ಯವಸ್ಥಿತವಾದ ಮತ್ತು ನಿರ್ದಿಷ್ಟವಾದ ಅವಲೋಕನ ಮತ್ತು ಪ್ರಯೋಗಗಳ ಪ್ರಾಮುಖ್ಯತೆಯನ್ನು ಮನಗಂಡ ಬೇಕನ್ ಅವುಗಳಿಗೆ ತಕ್ಕ ಸ್ಥಾನವನ್ನು ಕೊಡಬೇಕೆಂದು ಆಶಿಸಿದನು.

ವಿಗಮನ ಪದ್ಧತಿ

ವಿಜ್ಞಾನ ಮತ್ತು ತತ್ವಶಾಸ್ತ್ರಗಳು ಫಲಪ್ರದವಾಗದಿರಲು ಅವುಗಳಲ್ಲಿ ನಿರ್ದಿಷ್ಟ ಪದ್ಧತಿಯೊಂದರ ಅಭಾವವೇ ಕಾರಣವೆಂದು ಬೇಕನ್ನನ ಅಭಿಪ್ರಾಯ. ನಮ್ಮ ತಿಳುವಳಿಕೆಯನ್ನು ಅದರಷ್ಟಕ್ಕೆ ಬಿಟ್ಟರೆ ಅದು ಸಾಕಷ್ಟು ಸಾಮರ್ಥ್ಯವನ್ನು ಗಳಿಸಲಾರದಾದ್ದರಿಂದ ಜ್ಞಾನ ಸಂಪಾದಿಸಲು ಒಂದು ಹೊಸ ಮಾರ್ಗವನ್ನು ನಿರ್ಮಿಸಿಕೊಳ್ಳಬೇಕು. ನಮ್ಮ ಮನಸ್ಸಿಗೆ ನೆರವಾಗುವ ಹೊಸದೊಂದು ಉಪಕರಣವನ್ನು ರಚಿಸಿಕೊಳ್ಳಬೇಕೆಂದು ಆತನ ಅಭಿಪ್ರಾಯ. ನಮ್ಮ ಬೆಳವಣಿಗೆಗೆ ಮೂಲವಾಗಿರುವ ವಿಚಾರಶಕ್ತಿಯನ್ನು ವಿಶ್ಲೇಷಿಸಿ ಅದರ ಸಾಮರ್ಥ್ಯವನ್ನು, ದುರ್ಬಲತೆಯನ್ನು ನಾವು ತಿಳಿದುಕೊಳ್ಳಬೇಕಾದರೆ ಹಿಂದಿನವರು ಅನುಸರಿಸಿದ್ದ ತರ್ಕಪದ್ಧತಿಯನ್ನು ರೂಪಿಸಬೇಕೆಂದು ಆತನು ಆಶಿಸಿದನು. ಅಂತೆಯೇ ವೈಜ್ಞಾನಿಕ ಸಂಶೋಧನೆಯಲ್ಲಿ ಸಹಕಾರಿಯಾಗುವ ವಿಗಮನ ಪದ್ಧತಿಯನ್ನು ಆತನು ಪ್ರಪ್ರಥಮವಾಗಿ ಕೊಡುತ್ತಾನೆ. ಆದುದರಿಂದಲೇ ಬೇಕನ್ನನನ್ನು ಈ ವಿಗಮನ ತರ್ಕಪದ್ಧತಿಗೆ ಆದ್ಯಪುರುಷ ಎಂಬುದಾಗಿ ಸರ್ವರೂ ಹೇಳುತ್ತಾರೆ. ಅರಿಸ್ಟಾಟಲನ ಕಾಲದಿಂದ ಅನುಸರಿಸಲ್ಪಟ್ಟ ವಿಗಮನ ಪದ್ಧತಿಯು ವಾಸ್ತವಿಕ ಸತ್ಯ ಶೋಧನೆಯಲ್ಲಿ ವಿಫಲವಾಗಿದೆ. ಆ ಪದ್ಧತಿಯು ನೀಡುವ ನಿರ್ಣಯ ತಪ್ಪು ಕಲ್ಪನೆಗಳ ಆಧಾರಗಳನ್ನು ಹೊಂದಿದ ದೋಷಪೂರಿತ ನಿರ್ಣಯಗಳಾಗಿವೆ.

ಬೇಕನ್‌ನು ತನ್ನ ಹೊಸ ಪದ್ಧತಿಯಾದ ವಿಗಮನವನ್ನು ವಿವರಿಸುವ ಮೊದಲು ನಮ್ಮ ಮನಸ್ಸಿನಲ್ಲಿ ಬೇರೂರಿದ ತಪ್ಪು ಕಲ್ಪನೆಗಳನ್ನು, ಪೂರ್ವಗ್ರಹ ಪೀಡನೆಗಳನ್ನು ಮತ್ತು ಅಂಧ ಶ್ರದ್ಧೆಗಳನ್ನು ವಿವರಿಸಿ ಮೊದಲು ನಮ್ಮ ಮನಸ್ಸನ್ನು ಇವುಗಳಿಂದ ಸ್ವತಂತ್ರಗೊಳಿಸಬೇಕೆನ್ನುತ್ತಾನೆ. ಅವನ ಪ್ರಕಾರ ಅಂತಹ ಪೂರ್ವಗ್ರಹ ಪೀಡನೆಗಳ ಸಂಖ್ಯೆ ನಾಲ್ಕು. ಇವುಗಳನ್ನು ಬೇಕನ್ ಅಂಧ ವಿಶ್ವಾಸಗಳೆಂದು (Idols) ಕರೆಯುತ್ತಾನೆ. ಅವು ಯಾವುವೆಂದರೆ : —

1) ಜಾತಿ ಮತ್ತು ವರ್ಗಮೂಲವಾದ ಅಂಧ ವಿಶ್ವಾಸ (Idol of the Tribe)
2) ವ್ಯಕ್ತಿ ಮೂಲವಾದ ಅಂಧ ವಿಶ್ವಾಸ (Idol of the Cave)
3) ವ್ಯವಹಾರರೂಢವಾದ ಅಂಧ ವಿಶ್ವಾಸ (Idol of the Market)
4) ಮತ ಅಥವಾ ಧರ್ಮ ಮೂಲವಾದ ಅಂಧ ವಿಶ್ವಾಸ (Idol of the Theatre)

1) ತಾವು ಉತ್ತಮ ಜಾತಿಗೆ ಸೇರಿದವರೆಂದು ಅಥವಾ ಉತ್ತಮ ಮನೆತನಕ್ಕೆ ಸೇರಿದವರೆಂದು ಅಥವಾ ಉತ್ತಮ ಕಸಬುದಾರರೆಂದು ಜನರು ಸಹಜವಾಗಿ ತಮ್ಮ ಜಾತಿ ಅಥವಾ ವರ್ಗಕ್ಕೆ ಅನುಸಾರವಾಗಿ ಒಂದು ವಿಶಿಷ್ಟ ಪ್ರಕೃತಿಯನ್ನೇ ಹೊಂದಿರುವುದು ವರ್ಗಕ್ಕೆ ಸಂಬಂಧಿಸಿದ ಅಂಧ ವಿಶ್ವಾಸವಾಗಿದೆ. ಇದರಿಂದ ಗುಂಪುಗಳಲ್ಲಿ ಕೀಳರಿಮೆ ಅಥವಾ ಮೇಲರಿಮೆಗಳು ಹುಟ್ಟಿಕೊಂಡಿವೆ.

2) ಪ್ರತಿಯೊಬ್ಬ ವ್ಯಕ್ತಿಯೂ ತನಗೆ ಸಹಜವೆನಿಸುವ ರೀತಿಯಲ್ಲಿರುವ ಅಂಧ ವಿಶ್ವಾಸವು ವ್ಯಕ್ತಿ ಮೂಲವಾದುದಾಗಿದೆ. ತಾನು ಉತ್ತಮ, ಬುದ್ಧಿವಂತ, ಇತರರಿಗಿಂತ ಸಮರ್ಥ ಎಂಬ ಭಾವನೆಗಳು ಮತ್ತು ತಾನು ಮಾಡುವ ಕೆಲಸವೇ ಸರಿಯಾದದ್ದು ಎನ್ನುವ ನಂಬಿಕೆ, ವಿಚಾರಕ್ಕೆ ಹೊರತಾಗಿದ್ದರೆ ಅದು ವ್ಯಕ್ತಿ ಮೂಲ ಅಂಧ ವಿಶ್ವಾಸವಾಗುತ್ತದೆ. ಈ ಅಂಧ ವಿಶ್ವಾಸವು ಆತನ ನಡತೆ ಮತ್ತು ವ್ಯವಹಾರಗಳಲ್ಲಿ ಕಂಡುಬರುತ್ತವೆ. ಜನರು ಸಾಮಾನ್ಯವಾಗಿ ತಮಗೆ ಪ್ರಿಯವೆನಿಸುವ ವ್ಯವಹಾರಗಳಲ್ಲಿ ತೊಡಗುತ್ತಾರೆ. ಕೆಲವರಿಗೆ ಸಂಗೀತದಲ್ಲಿ ಆಸಕ್ತಿಯಿದ್ದರೆ, ಕೆಲವರಿಗೆ ವ್ಯಾಪಾರದಲ್ಲಿ, ಮತ್ತೆ ಕೆಲವರಿಗೆ ಜ್ಯೋತಿಷ್ಯದಲ್ಲಿ ಆಸಕ್ತಿ ಇರುತ್ತದೆ.

3) ನಮ್ಮ ಸಾಮಾಜಿಕ ವ್ಯವಹಾರದಲ್ಲಿ ನಾವು ಬಹು ಸಡಿಲ ರೀತಿಯಲ್ಲಿ ಹಲವಾರು ತೀರ್ಮಾನಗಳನ್ನು ನಾಣ್ಣುಡಿಗಳಂತೆ ಬಳಸಿಕೊಂಡು ಅವುಗಳಲ್ಲಿ ಸತ್ಯಾಂಶವಿದೆ ಎಂಬ ವಿಶ್ವಾಸವನ್ನು ಹೊಂದಿರುತ್ತೇವೆ. ಇಂತಹವುಗಳೇ ವ್ಯವಹಾರರೂಢವಾದ ಅಂಧ ವಿಶ್ವಾಸಗಳಾಗಿವೆ. ಉದಾಹರಣೆಗೆ : ಅದೃಷ್ಟವು ಮುಟ್ಠಾಳರಿಗೆ ಮಾತ್ರ ಅನುಕೂಲವಾಗಿರುತ್ತದೆ. ಕಳ್ಳನನ್ನು ನಂಬಿದರೂ ಕುಳ್ಳನನ್ನು ನಂಬಬಾರದು. ಭಾರ್ಯಾ ರೂಪವತೀ ಶತ್ರುಃ ಮುಂತಾದ ನಾಣ್ಣುಡಿಗಳ ಹಿಂದೆ ಯಾವ ನಿರ್ದಿಷ್ಟ ತರ್ಕವಿಲ್ಲದಿದ್ದರೂ ಅವು

ಗಳನ್ನು ನಿಜವೆಂದು ನಂಬಿ ನಾವು ನಮ್ಮ ವಿಚಾರ ಸ್ವಾತಂತ್ರ್ಯವನ್ನು ಕಳೆದುಕೊಳ್ಳುತ್ತೇವೆ.

4) ಇದೇ ರೀತಿ ವಿವಿಧ ಧರ್ಮ ಮತ್ತು ಮತಾನುಯಾಯಿಗಳಿಂದ ಹಾಗೂ ಅವರ ಧಾರ್ಮಿಕ ನಂಬಿಕೆಗಳಿಂದ ಹುಟ್ಟುವ ಅಂಧ ವಿಶ್ವಾಸಗಳು ಕೂಡ ನಮ್ಮ ವಿಚಾರವನ್ನು ಕುಂಠಿತಗೊಳಿಸುತ್ತವೆ. ಉದಾಹರಣೆಗೆ : ಕ್ರಿಶ್ಚಿಯನ್ ಆಗದೆ ಯಾರಿಗೂ ಮುಕ್ತಿಯಿಲ್ಲ, ಎಂಬ ಕ್ರಿಶ್ಚಿಯನ್ನರ ವಿಶ್ವಾಸ, ದೇವರು ಈ ಪ್ರಪಂಚವನ್ನು ತನ್ನ ಸಾಮರ್ಥ್ಯದಿಂದ ಸೃಷ್ಟಿಸಿದ್ದಾನೆ, ದೇವರನ್ನು ಪೂಜಿಸದಿದ್ದರೆ ನಮಗೆ ಮುಕ್ತಿಯಿಲ್ಲ ಇನ್ನೂ ಮುಂತಾದ ನಂಬಿಕೆಗಳು ಧರ್ಮಮೂಲವಾದ ಅಂಧ ವಿಶ್ವಾಸಗಳಾಗಿವೆ. ಇಂಥಹವುಗಳೆಲ್ಲವರ ಬಗ್ಗೆ ನಾವು ಜಾಗರೂಕರಾಗಿರಬೇಕೆಂದು ಬೇಕನ್ ಎಚ್ಚರಿಸುತ್ತಾನೆ. ಶುದ್ಧವಾದ ಜ್ಞಾನ ಸ್ಥಾಪಿತವಾಗಬೇಕಾದರೆ ಮೊದಲು ನಮ್ಮ ಮನಸ್ಸನ್ನು ಇಂತಹ ಅಂಧ ವಿಶ್ವಾಸಗಳಿಂದ ಬಿಡುಗಡೆಗೊಳಿಸಿ ಸ್ವಚ್ಛಗೊಳಿಸಬೇಕಾಗಿದೆ.

ಪ್ರಕೃತಿಯಲ್ಲಿರುವ ನಿಯಮಗಳನ್ನು ಅಥವಾ ತತ್ವಗಳನ್ನು ಶೋಧಿಸಿ ಅವುಗಳ ಸಹಾಯದಿಂದ ಮತ್ತು ನಮ್ಮ ಪ್ರಯತ್ನದಿಂದ ಪ್ರಕೃತಿಯನ್ನು ಗೆಲ್ಲುವುದೇ ನಮ್ಮ ಜ್ಞಾನದ ಗುರಿಯಾಗಿದೆ. ಈ ಗುರಿಯನ್ನು ಸಾಧಿಸಬೇಕಾದರೆ ಮೊದಲು ನಾವು ಪ್ರಕೃತಿಯನ್ನು ತಿಳಿಯಬೇಕು. ಕಾರ್ಯಗಳನ್ನು ಸಾಧಿಸಬೇಕಾದರೆ ಮೊದಲು ನಾವು ಕಾರಣಗಳನ್ನು ತಿಳಿದಿರಬೇಕು. ನಿಗಮನ ಪದ್ಧತಿಯು ಈ ಕೆಲಸವನ್ನು ಮಾಡಲು ಅಸಮರ್ಥವಾಗಿದೆ. ನಿಗಮನವು ಪ್ರಮೇಯಗಳಿಂದ ಕೂಡಿದೆ, ಪ್ರಮೇಯಗಳು ಪದಗಳಿಂದ ಕೂಡಿವೆ, ಈ ಪದಗಳು ಕೇವಲ ಕಲ್ಪನೆಯ ಚಿನ್ಹೆಗಳಾಗಿವೆ. ಈ ಕಲ್ಪನೆಗಳು ಅಸ್ಪಷ್ಟವಾಗಿದ್ದರೆ ಅಥವಾ ಅಜಾಗರೂಕತೆಯಿಂದ ಕಲ್ಪಿಸಲ್ಪಟ್ಟವುಗಳಾಗಿದ್ದರೆ ಅವುಗಳ ಆಧಾರದಿಂದ ಪಡೆದ ಜ್ಞಾನವು ನಿಶ್ಚಿತವಾಗಿರಲು ಸಾಧ್ಯವೇ ಇಲ್ಲ. ಒಂದು ವೇಳೆ ನಿಗಮನ ಪ್ರಮೇಯಗಳು ಇಂದ್ರಿಯಾನುಭವದ ಆಧಾರವನ್ನು ಪಡೆದಿದ್ದರೂ ಅವು ಅಸ್ಪಷ್ಟ; ಇಂದ್ರಿಯಾನುಭವ ದುಡುಕಿನ ತೀರ್ಮಾನಗಳಿಂದ ಕೂಡಿದೆ. ಆದುದರಿಂದ ವಿಗಮನ ಪದ್ಧತಿಯೊಂದೇ ಸರಿಯಾದ ಮಾರ್ಗ. ಇಲ್ಲಿ ನಾವು ನಿಧಾನವಾಗಿ, ಹಂತ ಹಂತವಾಗಿ ಮತ್ತು ವ್ಯವಸ್ಥಿತವಾಗಿ ಇಂದ್ರಿಯಾನುಭವಗಳಿಂದ ಉನ್ನತ ಮಟ್ಟದ ಸಾಮಾನ್ಯ ಪ್ರಮೇಯಗಳತ್ತ ಏರುತ್ತಾ ಹೋಗಿ ಕೊನೆಯಲ್ಲಿ ಸಂಪೂರ್ಣ ಹಾಗೂ ಸ್ಪಷ್ಟವಾದ ಸಿದ್ಧಿತತ್ವದ ನಿರೂಪಣೆಯನ್ನು ತಲುಪುತ್ತೇವೆ. ಜ್ಞಾನಗಳಿಕೆಯ ನಮ್ಮ ಪ್ರಯತ್ನದಲ್ಲಿ ನಾವು ನಮ್ಮ ಇಂದ್ರಿಯಾನುಭವಗಳನ್ನು ವಿಚಾರದ ವಿಭಾಗದೊಂದಿಗೆ ಒಂದುಗೂಡಿಸಬೇಕು.

ವಿಗಮನವು ವಸ್ತುಗಳ ಮತ್ತು ಗುಣಗಳ ನಿಜಸ್ಥಿತಿಯನ್ನೂ ಅಂದರೆ ಅವು ಪಾಲಿಸುವ ನಿಯಮಗಳನ್ನು ಕಂಡುಹಿಡಿಯುವ ಗುರಿಯನ್ನು ಹೊಂದಿದೆ. ನಿಯಮ ಸಹಿತವಾಗಿ ವಾಸ್ತವಿಕ ಪ್ರಪಂಚದ ಆಗು ಹೋಗುಗಳನ್ನು ಅರಿಯುವುದೇ ನಿಜವಾದ ಜ್ಞಾನ. ಆದರೆ ವಿಜ್ಞಾನ ಅಥವಾ ವಿಗಮನವು ಶೋಧಿಸುವ ನಿಯಮಗಳು ಕೇವಲ ಕಲ್ಪನೆಗಳಾಗಿ

ರವೆ ಪ್ರಪಂಚದ ವಸ್ತುಗಳನ್ನು ನಿರ್ದೇಶಿಸುವ ಮತ್ತು ನಿರ್ಧರಿಸುವ ಸೂತ್ರಗಳಾಗಿವೆ. ಈ ನಿಯಮಗಳಿಗೆ ಅನುಸಾರವಾಗಿ ವರ್ತಿಸುವ ವಿಶಿಷ್ಟ ವಸ್ತುಗಳಿಗೆ ಹೊರತಾಗಿ ಮತ್ತಾವ ಸತ್ಯವೂ ಪ್ರಕೃತಿಯಲ್ಲಿಲ್ಲ ಎಂಬುದು ಬೇಕನ್‌ನ ಅಭಿಪ್ರಾಯ. ಪ್ರಕೃತಿಯ ಪ್ರಮುಖ ನಿಯಮಗಳನ್ನು ಸ್ಪಷ್ಟವಾಗಿ ತಿಳಿದವನು ಅವುಗಳ ಕೆಳಗೆ ಬರುವ ಎಲ್ಲ ವಸ್ತುಗಳನ್ನು ಮತ್ತು ಪ್ರಕೃತಿಯ ಒಕ್ಕೂಟವನ್ನು ತಿಳಿದವನಾಗುತ್ತಾನೆ. ಬೇಕನ್‌ನ ಅಭಿಪ್ರಾಯದಲ್ಲಿ ಈ ನಿಯಮಗಳನ್ನು ಅಥವಾ ಮೂಲ ಕಾರಣಗಳನ್ನು ಶೋಧಿಸುವುದೇ ಅಧ್ಯಾತ್ಮ ಶಾಸ್ತ್ರವಾಗಿದೆ. ಅಗೋಚರನಾದ ಈ ನಿಯಮಗಳನ್ನು ವಿಗಮನದ ರೀತಿಯಲ್ಲಿ ಕಂಡು ಹಿಡಿಯುವ ಕ್ರಿಯೆಯನ್ನು ಬೇಕನ್ ಇಂದ್ರಜಾಲ (Magic) ಎಂದು ಕರೆಯುತ್ತಾನೆ. ಹಾಗೂ ನಿಯಮ ರೂಪದ ಈ ಸಮಗ್ರ ಜ್ಞಾನವನ್ನು ವಾಸ್ತವಿಕ ಜೀವನದ ಆಗುಹೋಗುಗಳಲ್ಲಿ ಪ್ರಾಯೋಗಿಕವಾಗಿ ಬಳಸುವ ರೀತಿಯನ್ನು ಆತನು ಪ್ರಾಯೋಗಿಕ ಭೌತ ಶಾಸ್ತ್ರ ಅಥವಾ ಗತಿ ವಿಜ್ಞಾನ (Practical Physics) ಎಂದು ಕರೆಯುತ್ತಾನೆ. ವಿಜ್ಞಾನದ ಈ ಎರಡು ಅವಿಭಾಜ್ಯ ಭಾಗಗಳು ಇಂದಿನ ಯುಗದ ವಿವಿಧ ಕಲಾ ಶಾಸ್ತ್ರಗಳ ಮೂಲವಾಗಿವೆ.

ನಿಯಮಗಳನ್ನು ಶೋಧಿಸುವಲ್ಲಿ ವಿಜ್ಞಾನವು ಮೂರು ವಿಧದ ಕಾರ್ಯ ವಿಧಾನಗಳನ್ನು ಅನುಸರಿಸುತ್ತದೆ ಎಂದು ಬೇಕನ್ ಅಭಿಪ್ರಾಯಪಡುತ್ತಾನೆ: —

(1) ಪ್ರಕೃತಿಯ ಗುಣ ಅಥವಾ ನಿಯಮ ಹೇಗಿರುತ್ತದೆ ಎಂದರೆ ನಿಯಮವನ್ನು ಕೊಟ್ಟಾಗ ಅದಕ್ಕೆ ಸಂಬಂಧಿಸಿದ ಕಾರ್ಯ ಅಥವಾ ಅನಿವಾರ್ಯವಾಗಿ ಬಂದೇ ಬರುತ್ತದೆ. ಒಂದು ಗುಣ ಅಥವಾ ಕ್ರಿಯೆ ಇದ್ದಾಗಲೆಲ್ಲಾ ಅವರ ಹಿನ್ನೆಲೆಯಾಗಿ ಅದಕ್ಕೆ ಸಂಬಂಧಿಸಿದ ನಿಯಮವಿದ್ದೇ ಇರುತ್ತದೆ. ಈ ನಿಯಮವು ವಿಶಿಷ್ಟಗಳಲ್ಲಿ ಸಾಂಗತ್ಯವನ್ನು ಹೊಂದಿದ್ದು ಸಾರ್ವತ್ರಿಕತೆಯನ್ನು ತೋರಿಸುತ್ತದೆ. ಬೇಕನ್ ಹೇಳುವ ಈ ಕಾರ್ಯ ವಿಧಾನವು ಮುಂದೆ ಜೆ. ಎಸ್. ಮಿಲ್ ನಿರೂಪಿಸುವ ಅನ್ವಯ ಪದ್ಧತಿಯನ್ನು ಹೋಲುತ್ತದೆ. ಅದರ ಪ್ರಕಾರ ಕಾರಣದ ಅಂಶವಿದ್ದಾಗಲ್ಲೆಲ್ಲಾ ಕಾರ್ಯದ ಅಂಶ ಬಂದೇ ಬರುತ್ತದೆ.

(2) ನಿಯಮ ಅಥವಾ ಕಾರಣಗಳು ಹೇಗಿರುತ್ತವೆ ಎಂದರೆ ಅವುಗಳನ್ನು ನಿಷೇಧಿಸಿದರೆ ಅಥವಾ ತೆಗೆದುಹಾಕಿದರೆ ಅದಕ್ಕನುಗುಣವಾದ ಗುಣ ಅಥವಾ ಕಾರ್ಯವು ಇಲ್ಲದಾಗುತ್ತದೆ. ಅಂದರೆ ನಿಯಮವಿಲ್ಲದಾಗ ಅದಕ್ಕನುಗುಣವಾದ ಕಾರ್ಯವು ಇರುವುದಿಲ್ಲ. ಈ ಕಾರ್ಯ ವಿಧಾನವು ಕಾರಣದ ಅಂಶದ ಅಭಾವವಿದ್ದಾಗ ಕಾರ್ಯದ ಅಂಶವು ಉಂಟಾಗುವುದಿಲ್ಲ, ಎಂಬ ಜೆ. ಎಸ್. ಮಿಲ್‌ನ ವ್ಯತಿರೇಖ ಪದ್ಧತಿಯನ್ನು ಹೋಲುತ್ತದೆ.

(3) ಈ ಕಾರ್ಯ ವಿಧಾನದ ಪ್ರಕಾರ ವಸ್ತುಗಳ ಪ್ರಮಾಣದಲ್ಲಿ ಏನೇ ವ್ಯತ್ಯಾಸವಾದರೂ ಅದು ಕಾರ್ಯದಲ್ಲಿ ಕಂಡುಬರುತ್ತದೆ. ಹಾಗೆಯೇ ಕಾರ್ಯದಲ್ಲಿ ಏನು ವ್ಯತ್ಯಾಸವಾಯಿತೋ ಅದು ಕಾರಣದಲ್ಲೂ ಕಂಡುಬರಬೇಕು. ಅಂದರೆ ಈ ವಾಸ್ತವಿಕ ಪ್ರಪಂಚ

ಏನೂ ಬದಲಾವಣೆಗಳುಂಟಾದರೂ ಆದರ ಪ್ರಮಾಣ ಒಂದೇ ಆಗಿರುತ್ತದೆ. ಈ ಕಾರ್ಯ ವಿಧಾನವು ಜೆ. ಎಸ್. ಮಿಲ್‌ನ ಸಹವರ್ತನಾ ಪದ್ಧತಿಯನ್ನು ಹೋಲುತ್ತವೆ.

ಬೇಕನ್ ಈ ಮೂರು ಕಾರ್ಯ ವಿಧಾನವನ್ನು ಕ್ರಮವಾಗಿ : —

(1) Table of Essence or Presence ಕಾರಣದ ಇರುವಿಕೆಯ (ಭಾವಾತ್ಮಕ) ರೂಪ

(2) Table of Deviation ಕಾರಣ ಇಲ್ಲದಿರುವಿಕೆ (ಅಭಾವಾತ್ಮಕ) ರೂಪ

(3) Table of Degrees ಕಾರ್ಯ-ಕಾರಣದ ಸಹಪರಿವರ್ತನಾ ರೂಪ ಎಂದು ಕರೆದಿದ್ದಾನೆ.

ತತ್ವಶಾಸ್ತ್ರ ಮತ್ತು ಅದರ ಕಾರ್ಯ

ಬೇಕನ್ ಪ್ರಕೃತಿಯ ವಿವರಣೆಯ ಬಗ್ಗೆ ಯಾವುದೇ ಸಂಪೂರ್ಣ ಸಿದ್ಧಾಂತವನ್ನು ಕೊಟ್ಟಿಲ್ಲ. ಹೊಸ ಸಾಧನೆಗಳಿಗೆ ಮಾರ್ಗವನ್ನು ಕಂಡುಹಿಡಿಯುವುದೇ ಆತನ ಮುಖ್ಯ ಉದ್ದೇಶವಾಗಿದ್ದಿತು. ಅಂತೆಯೇ ನಮ್ಮ ಜ್ಞಾನಕ್ಷೇತ್ರವನ್ನು ಆತನು ಮೂರು ವಿಧಗಳಾಗಿ ವಿಂಗಡಿಸಿ ಅವು ಹೇಗೆ ಒಂದನ್ನೊಂದು ಅವಲಂಬಿಸಿವೆ ಎಂಬುದನ್ನು ವಿವರಿಸುತ್ತಾನೆ. ಇತಿಹಾಸ, ಕಲೆ ಮತ್ತು ತತ್ವಶಾಸ್ತ್ರಗಳೇ ಅವನು ಸೂಚಿಸುವ ಜ್ಞಾನದ ಮೂರು ವರ್ಗಗಳು. ಇವು ಕ್ರಮವಾಗಿ ಸ್ಮೃತಿ ಶಕ್ತಿ, ಕಲ್ಪನಾ ಶಕ್ತಿ ಮತ್ತು ವಿಚಾರ ಶಕ್ತಿಗಳ ಆಧಾರವನ್ನು ಹೊಂದಿವೆ.

ತತ್ವಶಾಸ್ತ್ರವು ವಿಚಾರಶಕ್ತಿಯ ಕಾರ್ಯವಾಗಿದೆ. ಇಂದ್ರಿಯಾನುಭವಗಳ ಮೂಲಕ ಪಡೆದ ಕಲ್ಪನೆಗಳನ್ನು ವ್ಯವಸ್ಥಿತಗೊಳಿಸಿ ಪ್ರಕೃತಿಯ ನಿಯಮಗಳಿಗನುಸಾರವಾಗಿ ಸಂಯೋಜಿಸುವ ಅಥವಾ ವಿಭಜಿಸುವ ಕಾರ್ಯವನ್ನು ತತ್ವಶಾಸ್ತ್ರ ಕೈಗೊಳ್ಳುತ್ತದೆ. ಇಷ್ಟಲ್ಲದೆ ಪಾರಮಾರ್ಥಿಕ ವಿದ್ಯೆ, ನೈಸರ್ಗಿಕ ದೇವತಾವಾದ, ಆಧ್ಯಾತ್ಮ ಶಾಸ್ತ್ರ, ಭೌತ ಶಾಸ್ತ್ರ, ಗಣಿತ ಶಾಸ್ತ್ರ, ಮನಶ್ಶಾಸ್ತ್ರ, ನೀತಿಶ್ಶಾಸ್ತ್ರ ಮತ್ತು ಇಂದ್ರಿಯಜಾಲಗಳನ್ನು ತತ್ವಶಾಸ್ತ್ರವು ಒಳಗೊಂಡಿದೆ. ಆದರೆ ಸಾಮಾಜಿಕ ಶಾಸ್ತ್ರ, ರಾಜಕೀಯ ತತ್ವಶಾಸ್ತ್ರ ಮತ್ತು ಮಾನವೀಯ ತತ್ವಶಾಸ್ತ್ರಗಳು ಬೇಕನ್‌ನ ಪ್ರಕಾರ ತತ್ವಶಾಸ್ತ್ರದ ಅತ್ಯಂತ ಪ್ರಮುಖ ವಿಭಾಗಗಳಾಗಿವೆ. ಮಾನವೀಯ ಶಾಸ್ತ್ರದಲ್ಲಿ ಮನುಷ್ಯನನ್ನು ಒಬ್ಬ ವಿಶಿಷ್ಟ ವ್ಯಕ್ತಿಯೆಂದು ಪರಿಗಣಿಸಲಾಗಿದ್ದು ಆತನ ಇಚ್ಛೆ, ಸ್ವತಂತ್ರ ವಿಚಾರ ಮತ್ತು ವ್ಯಕ್ತಿತ್ವವನ್ನು ಪರಿಗಣಿಸಲಾಗುತ್ತದೆ. ಸಾಮಾಜಿಕ ಮತ್ತು ರಾಜಕೀಯ ತತ್ವಶಾಸ್ತ್ರಗಳಲ್ಲಿ ಆ ವ್ಯಕ್ತಿಯು ಒಬ್ಬ ಸಮಾಜ ಜೀವಿಯಾಗಿ ಪರಿಗಣಿಸಲ್ಪಟ್ಟು ಸಮಾಜದೊಡನೆ ಆತನಿಗಿರುವ ಅನಿವಾರ್ಯ ಸಂಬಂಧವನ್ನು ನಿರೂಪಿಸುತ್ತವೆ. ಮಾನವೀಯ ತತ್ವಶಾಸ್ತ್ರವು ಶರೀರ ಮತ್ತು ಮನಸ್ಸುಗಳ ಸಂಬಂಧ, ಶಾರೀರಿಕ ತೊಂದರೆಗಳಿಂದ ಮನಸ್ಸಿನಲ್ಲಿ ಉಂಟಾಗುವ

ಪರಿಣಾಮ, ಕನಸುಗಳ ವಿವರಣೆ ಮುಂತಾದ ಮನಶ್ಶಾಸ್ತ್ರ ವಿಭಾಗಗಳನ್ನು ಒಳಗೊಂಡಿರುತ್ತದೆ.

ಬೇಕನ್‌ನ ಅಭಿಪ್ರಾಯದಂತೆ ಮಾನವನ ಆತ್ಮವು ಒಂದು ಕಡೆ ವಿಚಾರಶೀಲ ಭಾಗದಿಂದ ಕೂಡಿದ್ದರೆ ಮತ್ತೊಂದು ಕಡೆ ವಿಚಾರರಹಿತವಾದ ಕೀಳು ಭಾವನೆಯ ಭಾಗದಿಂದಲೂ ಕೂಡಿದೆ. ವಿಚಾರಶೀಲ ಭಾಗಕ್ಕೆ ಸೇರಿದ ಸಮಸ್ಯೆಗಳೆಲ್ಲವನ್ನು ಧರ್ಮದ ಕ್ಷೇತ್ರದೊಳಗೆ ತರಬೇಕು. ಸೂಕ್ಷ್ಮಗ್ರಾಹಿಯಾದ ಆತ್ಮ ಬೇಕನ್‌ನ ಪ್ರಕಾರ ಮೂರ್ತಿಮಂಥವೂ ಹೌದು. ತಿಳುವಳಿಕೆ, ವಿಚಾರ, ಕಲ್ಪನಾಶಕ್ತಿ, ಸ್ಮೃತಿ, ಆಕಾಂಕ್ಷೆ ಹಾಗೂ ತರ್ಕಶಾಸ್ತ್ರ ಮತ್ತು ನೀತಿಶಾಸ್ತ್ರಗಳಿಗೆ ಸಂಬಂಧಿಸಿದ ವಿಷಯಗಳೆಲ್ಲವೂ ಆತ್ಮದ ಈ ಶಕ್ತಿಗೆ ಒಳಪಟ್ಟಿವೆ. ಬೇಕನ್‌ನ ಪ್ರಕಾರ ಎಲ್ಲಾ ವಸ್ತುಗಳಲ್ಲಿಯೂ (ನಿರ್ಜೀವ ವಸ್ತುಗಳೂ ಸೇರಿದಂತೆ) ಪ್ರಜ್ಞಾಶಕ್ತಿಯಿದ್ದು ಅವುಗಳು ಕೂಡ ಅಪೇಕ್ಷೆ ಮತ್ತು ಅನಪೇಕ್ಷೆಗಳನ್ನು ಪಡೆದಿವೆ. ಉದಾಹರಣೆಗೆ: ಒಂದು ತೊಟ್ಟು ನೀರು ಮತ್ತೊಂದು ತೊಟ್ಟು ನೀರಿನೊಂದಿಗೆ ಬೆರೆಯುತ್ತದೆ; ಅಯಸ್ಕಾಂತವು ಕಬ್ಬಿಣವನ್ನು ಆಕರ್ಷಿಸುತ್ತದೆ; ಒಂದು ವಸ್ತುವು ತನ್ನ ಪಕ್ಕದಲ್ಲಿ ಮತ್ತೊಂದು ವಸ್ತು ಇರುವುದನ್ನು ಅನುಭವಿಸುತ್ತದೆ. ಆದರೆ ಮಾನವನಲ್ಲಿ ಈ ಪ್ರಜ್ಞಾಶಕ್ತಿಯು ಗಮನಾರ್ಹವಾಗಿ ಬೆಳವಣಿಗೆಯನ್ನು ಹೊಂದಿ ಆತನ ಮನಸ್ಸಿನಲ್ಲಿ ಆತನ ಆತ್ಮದ ರೂಪುಗೊಳ್ಳುತ್ತದೆ. ಅನುಭವಗಳ ಸಹಾಯದಿಂದ ನೂತನ ಮಾರ್ಗಗಳನ್ನು ಶೋಧಿಸಿ ಪ್ರಾಯೋಗಿಕವಾಗಿ ನಮ್ಮ ಜೀವನವು ಹೆಚ್ಚು ಪರಿಪೂರ್ಣತೆಯನ್ನು ಪಡೆಯುವಂತೆ ಮಾಡುವ ಶಾಸ್ತ್ರವೇ ತತ್ವಶಾಸ್ತ್ರವಾಗಿದೆ. ಇಂತಹ ತತ್ವಶಾಸ್ತ್ರವು ಜ್ಞಾನಗೋಪುರದ ಕಳಸವಾಗಿದೆ. ಈ ತತ್ವಶಾಸ್ತ್ರವು ಒಣಚಿಂತನೆಯಾಗಿರದೆ ವಾಸ್ತವಿಕ ಜೀವನದಿಂದ ನಿರ್ಧರಿಸಲ್ಪಟ್ಟಂತಹ ಜೀವನ ಮಾರ್ಗವೇ ಆಗಿದೆ.

ಬೇಕನ್‌ನನ್ನು ಸುಲಭವಾಗಿ ಅನುಭವವಾದಿಗಳ ಗುಂಪಿಗೆ ಸೇರಿಸಬಹುದಾದರೂ ಆತನು ಅನುಭವವಾದವನ್ನು ಯಾವ ರೀತಿಯಿಂದಲೂ ಏಕರೂಪವಾಗಿ ನಿರೂಪಿಸಿಲ್ಲ. ಆತ್ಮಸಾಕ್ಷಾತ್ಕಾರ ಒಂದನ್ನು ಬಿಟ್ಟರೆ ಉಳಿದೆಲ್ಲಾ ಜ್ಞಾನಗಳು ಇಂದ್ರಿಯಾನುಭವದ ಮಾಧ್ಯಮದಿಂದಲೇ ಸಂಗ್ರಹಿಸಲ್ಪಡುವವಾಗಿವೆ. ಜ್ಞಾನೇಂದ್ರಿಯಗಳು ಒದಗಿಸಿದ ಇಂದ್ರಿಯಾನುಭವಗಳ ಆಧಾರದ ಮೇಲೆ ಮನಸ್ಸು ತಿಳುವಳಿಕೆಯನ್ನು ಪಡೆಯುತ್ತದೆ. ಆದರೆ ಈ ತಿಳುವಳಿಕೆಯು ಕೇವಲ ತಿಳುವಳಿಕೆಯ ಹಂತದಲ್ಲಿರದಂತೆ ಅದನ್ನು ಪ್ರಾಯೋಗಿಕವಾಗಿ ಬಳಸಿಕೊಳ್ಳುವುದು ಮತ್ತೂ ಮುಖ್ಯ. ಆದುದರಿಂದ ಬೇಕನ್ ಹೇಳುವಂತೆ ಜ್ಞಾನಕ್ಕೆ ಎರಡು ಮುಖಗಳು—"ವಿಚಾರ ಅಥವಾ ಸಿದ್ಧಾಂತ" "ಪ್ರಯೋಗ ಅವರ ಕಾರ್ಯರೂಪತೆ". ತತ್ವಶಾಸ್ತ್ರವು ಈ ಎರಡು ಅಂಶಗಳನ್ನು ಒಳಗೊಂಡಲ್ಲಿ ಮಾತ್ರ ಅದು ಸಂಪೂರ್ಣವಾಗುತ್ತದೆ ಮತ್ತು ಪ್ರಯೋಜನಕಾರಿಯೂ ಆಗುತ್ತದೆ.

II ಡೇಕಾರ್ಟ್ (1596–1650)

ಆಧುನಿಕ ತತ್ವಶಾಸ್ತ್ರವು ಕ್ರಿ.ಶ. 17 ನೇ ಶತಮಾನದಿಂದ ಪ್ರಾರಂಭವಾಗುತ್ತದೆ. ಡೇಕಾರ್ಟ್‌ನನ್ನು ಆಧುನಿಕ ತತ್ವಶಾಸ್ತ್ರದ ಜನಕನೆಂದು ಕರೆಯಲಾಗಿದೆ. ಈತನು ಆಧುನಿಕ ತತ್ವಶಾಸ್ತ್ರದ ಜನಕನೆಂದು ಕರೆಯಲಾಗಿದೆ. ಈತನು ಆಧುನಿಕ ತತ್ವಶಾಸ್ತ್ರವನ್ನು ಪ್ರಾರಂಭಿಸಿದುದೇ ಅಲ್ಲದೇ ಪಾಶ್ಚಿಮಾತ್ಯ ತತ್ವ ಕ್ಷೇತ್ರದಲ್ಲಿ "ವಿಚಾರವಾದ" (Rationalism) ಎಂಬ ಹೊಸ ಪಂಥದ ಸ್ಥಾಪನೆಗೆ ಕಾರಣನಾದನು. "ಮಾನವನು ಸಂಪೂರ್ಣ ಜ್ಞಾನವನ್ನು ಗಳಿಸುವುದು ಜೀವನದ ರೀತಿ ನೀತಿಗಳನ್ನೆಲ್ಲಾ ಅರಿಯುವುದು ಮತ್ತು ಎಲ್ಲ ರೀತಿಯ ಕಲೆಗಳ ಪರಿಜ್ಞಾನವನ್ನು ಪಡೆಯುವುದು ಮುಂತಾದುವುಗಳ ಸಂಯೋಜನೆಯೇ ತತ್ವಶಾಸ್ತ್ರ" ಎಂದು ಆತನ ಅಭಿಪ್ರಾಯ. ಪುರಾತನ ತತ್ವ ನಿರೂಪಣೆಗಳನ್ನು ತಳ್ಳಿ ಹಾಕಿದ ಡೇಕಾರ್ಟ್ ತನ್ನ ವಿಚಾರವಾದದ ಮೂಲಕ ಪ್ರಾಯೋಗಿಕ ತತ್ವ ನಿರೂಪಣೆ ಕೊಡಲು ಪ್ರಯತ್ನಿಸಿದನು. "ಗಣಿತ ಶಾಸ್ತ್ರದಲ್ಲಿರುವಂತೆ ನಿಶ್ಚಿತ ಜ್ಞಾನದ ತತ್ವ ನಿರೂಪಣೆಯನ್ನು ಕಂಡುಹಿಡಿಯುವುದೇ ಆತನ ಮುಖ್ಯ ಗುರಿಯಾಗಿತ್ತು." ವಿಚಾರವಾದದ ಪ್ರತಿಪಾದನೆಯಲ್ಲಿ ಡೇಕಾರ್ಟ್‌ನಲ್ಲದೆ ಮತ್ತೆರಡು ಹೆಸರುಗಳು ಪ್ರಾಮುಖ್ಯ ಸ್ಥಾನವನ್ನು ಗಳಿಸಿವೆ. ಇವರೇ ಡೇಕಾರ್ಟ್‌ಯ ಅನುಯಾಯಿಗಳಾದ ಸ್ಪಿನೋಜ ಮತ್ತು ಲೈಬ್ನೀಜ್. ಜ್ಞಾನಮೀಮಾಂಸೆಯ ವಿಷಯದಲ್ಲಿ ಈ ಮೂವರೂ ಏಕಾಭಿಪ್ರಾಯವನ್ನು ಹೊಂದಿದ್ದರೂ ಆಧ್ಯಾತ್ಮ ವಿಷಯದಲ್ಲಿ ಅವರಲ್ಲಿ ಭಿನ್ನಾಭಿಪ್ರಾಯವಿದ್ದಿತು. ಡೇಕಾರ್ಟ್‌ಯು ದ್ವೈತವಾದಿಯಾದರೆ, ಸ್ಪಿನೋಜನು ಅದ್ವೈತವಾದಿ ಮತ್ತು ಲೈಬ್ನೀಜ್‌ನು ಬಹುತತ್ವ ಅಥವಾ ವೈಶೇಷಿಕವಾದಿಯಾಗಿದ್ದನು.

ಜ್ಞಾನಮೀಮಾಂಸೆ

ಇಲ್ಲಿಯ ಅತ್ಯಂತ ಪ್ರಮುಖ ಪ್ರಶ್ನೆ ಜ್ಞಾನದ ಮೂಲವನ್ನು ಕುರಿತಾಗಿದೆ. ಅಂದರೆ ಜ್ಞಾನ ಯಾವ ಮೂಲದಿಂದ ಉತ್ಪನ್ನವಾಗುತ್ತದೆ ಎಂಬುವರ ಬಗ್ಗೆ ವಿಚಾರವಾದಕ್ಕೆ ಅತ್ಯಂತ ಆಸಕ್ತಿ. ಆಲೋಚನಾ ಯುಕ್ತವಾದ ವಿಚಾರವೇ ಜ್ಞಾನದ ಮೂಲ ಎಂದು ವಿಚಾರವಾದಿಗಳ ಅಭಿಮತ. ಸರ್ವಜ್ಞಾನಕ್ಕೂ ಆಧಾರವಾದ ವಿಚಾರವು ಇಂದ್ರಿಯಗಳಿಂದ ಸ್ವತಂತ್ರವಾಗಿದ್ದು ಕೆಲವು ವೇಳೆ ಇಂದ್ರಿಯಾನುಭವಗಳಿಗೆ ವಿರುದ್ಧವಾಗಿರುವವೆಂದು ಅವನ ಅಭಿಪ್ರಾಯ. ಎಲ್ಲಾ ರೀತಿಯ ಶ್ರೇಷ್ಠ ಜ್ಞಾನವು ಇಂದ್ರಿಯಗಳಿಂದ ಸ್ವತಂತ್ರವಾದ ವಿಚಾರದಿಂದ ಕೂಡಿದೆ ಎಂದು ಡೇಕಾರ್ಟ್ ವಾದ. ಈ ನಿರೂಪಣೆಯು ಜನ ಸಾಮಾನ್ಯರ ತಿಳುವಳಿಕೆಗೆ ಹಾಗೂ ಕೆಲವು ವೇಳೆ ವಿಜ್ಞಾನದ ತಿಳುವಳಿಕೆಗೂ ವಿರುದ್ಧವಾಗಿದೆ. ಸಾಮಾನ್ಯ ಜ್ಞಾನ ಮತ್ತು ವಿಜ್ಞಾನಗಳು ಇಂದ್ರಿಯಾನುಭವಗಳನ್ನವಲಂಬಿಸುವುದು ಸರ್ವವಿದಿತ. ಜನಸಾಮಾನ್ಯರು ತಮ್ಮ ಇಂದ್ರಿಯಾನುಭವಗಳನ್ನು ಯಾವ ಪರೀಕ್ಷೆಗೂ ಒಳಪಡಿಸದೇ ನೇರವಾಗಿ ಅಂಗೀಕರಿಸಿದರೆ ವಿಜ್ಞಾನವು

ತನ್ನದೇ ಆದ ವಿಶಿಷ್ಟ ರೀತಿಯಲ್ಲಿ ಅವುಗಳನ್ನು ಪರಿಶೀಲಿಸಿ ಉಪಕಲ್ಪನೆಗಳನ್ನು ನಿರ್ಮಿಸಿ, ಈ ಉಪಕಲ್ಪನೆಗಳನ್ನು ಪರೀಕ್ಷಿಸಿ ನಿಯಮಗಳನ್ನು ಶೋಧಿಸುತ್ತವೆ. ಆದರೆ ಡೇಕಾರ್ಟೆಗೆ ಮಾತ್ರ ಈ ಕ್ರಮ ತೃಪ್ತಿಕರವಾದ ಕ್ರಮವಲ್ಲ. ಡೇಕಾರ್ಟೆ ಇಂದ್ರಿಯ ಜ್ಞಾನದ ಮೌಲ್ಯವನ್ನು ಅಲ್ಲಗಳೆಯಲು ಮತ್ತು ವಿಚಾರ ಕ್ರಮವನ್ನು ಮಾತ್ರ ಒಪ್ಪಲು ಎರಡು ಕಾರಣಗಳಿವೆ.

ಮೊದಲನೆಯದಾಗಿ ಕೋಪರ್‌ನಿಕಸ್ ಮತ್ತು ಗೆಲಿಲಿಯೋರಿಗೆ ಮೊದಲು "ವಿಜ್ಞಾನಿಗಳು ಒಪ್ಪಿದ್ದ ಭೂಕೇಂದ್ರ ಸಿದ್ಧಾಂತವು ತಪ್ಪಾದುದು," ಎಂದು ಕೆಪ್ಲರ್ ಮತ್ತು ಗೆಲಿಲಿಯೋ ಸೇರಿ ಸಾಧಿಸಿದರು. ಕೋಪರ್‌ನಿಕಸ್‌ನ ಸೂರ್ಯ ಕೇಂದ್ರ ಸಿದ್ಧಾಂತದ ಸತ್ಯತೆಯು ಡೇಕಾರ್ಟೆಯ ಮೇಲೆ ತುಂಬಾ ಪರಿಣಾಮವನ್ನು ಬೀರಿತು. ಈ ಸೂರ್ಯ ಕೇಂದ್ರ ಸಿದ್ಧಾಂತವು ಭೂಕೇಂದ್ರ ಸಿದ್ಧಾಂತವನ್ನು ಅಲ್ಲಗಳೆಯುವುದೇ ಅಲ್ಲದೇ ಮುಂದಕ್ಕೆ ವಿಜ್ಞಾನದ ತಳಹದಿಯಾಯಿತು. ಇಂದ್ರಿಯ ಜ್ಞಾನದಿಂದ ರೂಪಿತವಾದ ಭೂಕೇಂದ್ರ ಸಿದ್ಧಾಂತವು ವಿಚಾರದ ಆಧಾರವನ್ನು ಪಡೆದ ಸೂರ್ಯ ಕೇಂದ್ರ ಸಿದ್ಧಾಂತವು ಅಲ್ಲಗಳೆಯುವುದನ್ನು ಡೇಕಾರ್ಟೆ ಪುಷ್ಟೀಕರಿಸುತ್ತಾನೆ.

ಡೇಕಾರ್ಟೆಯ ಮೇಲೆ ಅತ್ಯಂತ ಪ್ರಭಾವವನ್ನು ಬೀರಿದ ಮತ್ತೊಂದು ಅಂಶ ಗಣಿತ ಶಾಸ್ತ್ರವಾಗಿದೆ. ಗಣಿತ ಶಾಸ್ತ್ರದಲ್ಲಿ ಪರಿಣಿತನಾದ ಡೇಕಾರ್ಟೆ ಸ್ವತಃ "ಸಂಯೋಜಕ ರೇಖಾಗಣಿತ" ಎಂಬ ಹೊಸ ಗಣಿತದ ಪದ್ಧತಿಯನ್ನು ಶೋಧಿಸಿದನು. ಗಣಿತ ಶಾಸ್ತ್ರ ಮತ್ತು ತರ್ಕಶಾಸ್ತ್ರಗಳು ಮಾತ್ರ ಸತ್ಯವಾದ ಸಾಮಾನ್ಯ ಜ್ಞಾನವನ್ನು ನೀಡುವ ಅರ್ಹತೆಯನ್ನು ಪಡೆದಿವೆ ಎಂದು ಆತನ ಖಚಿತ ಅಭಿಪ್ರಾಯ. ಗಣಿತಶಾಸ್ತ್ರದಲ್ಲಿ ಹೇಗೆ ಜ್ಞಾನ ಸ್ಪಷ್ಟವಾಗಿ, ನಿರ್ದಿಷ್ಟವಾಗಿ ಮತ್ತು ಸಾರ್ವತ್ರಿಕವಾಗಿರುತ್ತದೆಯೋ ಅಂತಹುದೇ ನಿಶ್ಚಿತ ಜ್ಞಾನ ಎಲ್ಲ ವಿಭಾಗಗಳಲ್ಲೂ ಇರಬೇಕು ಎಂದು ಆತನ ಮಹತ್ವಾಕಾಂಕ್ಷೆ. ಎರಡು ಮತ್ತು ಎರಡು ಸೇರಿದರೆ ನಾಲ್ಕು ಆಗುತ್ತದೆ, ಒಂದು ತ್ರಿಕೋನದ ಮೂರು ಕೋನಗಳ ಮೊತ್ತ ಎರಡು ಸಮಕೋನಗಳಾಗಿವೆ. ಇವು ನಿಶ್ಚಿತ, ಸ್ಪಷ್ಟ, ಸಾರ್ವತ್ರಿಕ ಜ್ಞಾನ. ಇಂತಹ ನಿಶ್ಚಿತ ಜ್ಞಾನವು ಕೇವಲ ವಿಚಾರದಿಂದ ಮಾತ್ರ ಸಾಧ್ಯ ಮತ್ತು ಸಮಂಜಸ ಜ್ಞಾನವೆನ್ನುತ್ತಾನೆ. ಇಂದ್ರಿಯಾನುಭವದಿಂದ ಸಾಧ್ಯವಿಲ್ಲ ಎಂದು ಡೇಕಾರ್ಟೆಯ ಅಭಿಪ್ರಾಯ.

ಹುಟ್ಟು ಕಲ್ಪನಾ ಸಿದ್ಧಾಂತ

ವಿಚಾರದ ಮೂಲಕ ಹೇಗೆ ಜ್ಞಾನ ಲಭಿಸುತ್ತದೆ ಎಂಬ ಪ್ರಶ್ನೆಗೆ ಉತ್ತರವಾಗಿ ಡೇಕಾರ್ಟೆ ಮೂಲತಃ ಭಾವನೆಗಳ ಸಿದ್ಧಾಂತವನ್ನು ಮುಂದಿಡುತ್ತಾನೆ. ಪ್ರಾಣಿಗಳಲ್ಲೆಲ್ಲಾ ಅತ್ಯಂತ ಶ್ರೇಷ್ಠವಾದ ಮಾನವನು ಭಾವನೆಗಳನ್ನು ಮತ್ತು ಸ್ವಯಂ ಸತ್ಯ ಸಿದ್ಧಾಂತಗಳನ್ನು ಪಡೆದಿದ್ದಾನೆ. ಆತನ ಮನಸ್ಸು ವಿಚಾರಗಳ ಒಂದು ಸಮೂಹವಾಗಿದ್ದು ಅದರಲ್ಲಿ ಸ್ವಯಂಸತ್ಯ ನಿಯಮಗಳೆಲ್ಲವೂ ಅಡಕವಾಗಿವೆ. ನಮಗೆ ವಿವಾದಾ

ಸ್ಪದವಿಲ್ಲದ ಜ್ಞಾನ ಲಭಿಸಬೇಕಾದರೆ ನಾವು ವಿಚಾರವನ್ನು ಅವಲಂಬಿಸಬೇಕಲ್ಲದೆ ಇಂದ್ರಿಯ ಜ್ಞಾನವನ್ನವಲಂಬಿಸಲು ಸಾಧ್ಯವಿಲ್ಲ. ವಿಚಾರಾತ್ಮಕ ಸ್ವಯಂ ಸತ್ಯಗಳು ಹುಟ್ಟು ಭಾವನೆಗಳಾಗಿವೆ. ಇವುಗಳೆಲ್ಲವೂ ಮನುಷ್ಯನು ಹುಟ್ಟುವ ಮೊದಲೇ ಆತನ ಮನಸ್ಸಿನಲ್ಲಿ ತುಂಬಲ್ಪಟ್ಟಿವೆ. ಇಲ್ಲಿ ನಮ್ಮ ಜ್ಞಾನ ಕಾರಣದಿಂದ ಕಾರ್ಯದತ್ತ ಹೋಗುತ್ತದೆ. ಇವಕ್ಕೆ ವಿರುದ್ಧವಾಗಿ ಇಂದ್ರಿಯ ಜ್ಞಾನ ಮತ್ತು ವಿಜ್ಞಾನಗಳಲ್ಲಿ ನಮ್ಮ ಜ್ಞಾನವು ಕಾರ್ಯದಿಂದ ಕಾರಣದತ್ತ ಹರಿಯುವುದು. ಆದುದರಿಂದ ವಿಚಾರಯುಕ್ತ ಜ್ಞಾನವು ಅನುಭವಕ್ಕಿಂತ ಮೊದಲೇ ಬರುವ ಜ್ಞಾನವಾಗಿದ್ದು ಡೇಕಾರ್ಟೆ ಅದನ್ನು ಮಾತ್ರ ಸಮಂಜಸ ಜ್ಞಾನವೆನ್ನುತ್ತಾನೆ.

ನಮ್ಮ ಮನಸ್ಸಿನಲ್ಲಿ ಅಡಗಿರತಕ್ಕಂತ ವಿಚಾರಗಳು ಅಥವಾ ಕಲ್ಪನೆಗಳು ಕೇವಲ ಧ್ಯಾನದಿಂದ ಅರಿಯಲ್ಪಡಬೇಕಾಗಿವೆ. ಈ ಕಾರಣದಿಂದ ವಿಚಾರವಾದವನ್ನು "ಸ್ವಯಂ ಪ್ರಕಾಶಜ್ಞಾನ ಅಥವಾ ಅಂತಸ್ಸ್ಫೂರ್ತಿ ಜ್ಞಾನ" ಎನ್ನುತ್ತಾನೆ. ಹುಟ್ಟಿನೊಡನೆ ನಾವು ನಮ್ಮ ಮನಸ್ಸಿನಲ್ಲಿ ಪಡೆದಿರುವ ಕಲ್ಪನೆಗಳನ್ನು ಅಂತರ್ ದೃಷ್ಟಿಯಿಂದಲೇ ತಿಳಿಯಬೇಕಾಗಿದೆ. ಇಲ್ಲಿಯೂ ಕೂಡ ಬುದ್ಧಿಶಾಲಿಗಳಾದವರ ಧ್ಯಾನಾಸಕ್ತಿಯಿಂದ ಲಭಿಸಿದ ಜ್ಞಾನ ಮಾತ್ರ ಸಮಂಜಸ ಜ್ಞಾನವೆಂದು ಡೇಕಾರ್ಟ್ ಅಭಿಪ್ರಾಯ. ನಮ್ಮ ಮೂಲತಃ ಜ್ಞಾನಗಳು ದೇವರಿಂದಲೇ ನಮ್ಮ ಮನಸ್ಸಿನಲ್ಲಿ ತುಂಬಲ್ಪಟ್ಟಿರುವುದರಿಂದ ಅವು ನಿರ್ವಿವಾದವೂ, ಅನುಮಾನರಹಿತವೂ ಆಗಿವೆ. ಪ್ರಪಂಚ ಜ್ಞಾನವನ್ನು ಪಡೆಯಬೇಕಾದರೂ ನಾವು ಅಂತರ್ಯದ ಸ್ಫೂರ್ತಿಯಿಂದಲೇ ಅದನ್ನು ಪಡೆಯಬೇಕಾಗಿದೆ.

ಡೇಕಾರ್ಟೆಯ ಸಂಶಯ ಸಿದ್ಧಾಂತ

ವಿಚಾರದ ಅವ್ಯವಸ್ಥೆ ಇದ್ದುದರಿಂದ ಹಿಂದಿನ ತಾತ್ವಿಕರು ತತ್ವವಿಚಾರಗಳಲ್ಲಿ ಏಕಾಭಿಪ್ರಾಯವನ್ನು ಪಡೆಯಲು ಸಾಧ್ಯವಾಗಿರಲಿಲ್ಲ. ನಿಶ್ಚಿತ ಮತ್ತು ಸಾರ್ವತ್ರಿಕ ಜ್ಞಾನವಿಲ್ಲದೇ ಹೋದರೆ ತತ್ವಶಾಸ್ತ್ರವು ಅರ್ಥರಹಿತವಾಗುತ್ತದೆ. ಸಂಶಯರಹಿತವಾದ ಸತ್ಯದ ಶೋಧನೆಯನ್ನು ಡೇಕಾರ್ಟ್ ಸಂಶಯದಿಂದಲೇ ಪ್ರಾರಂಭಿಸುತ್ತಾನೆ. ನಾವು ಗಳಿಸುವ ಎಲ್ಲಾ ರೀತಿಯ ಜ್ಞಾನದ ಬಗ್ಗೆಯೂ ಸಂಶಯವನ್ನು ವ್ಯಕ್ತಪಡಿಸಬಹುದು. ಇಂದ್ರಿಯ ಜ್ಞಾನದಿಂದ ಗಣಿತ ಶಾಸ್ತ್ರದ ಜ್ಞಾನದವರೆಗೂ ನಾವು ತಪ್ಪು ಮಾಡುವ ಸಾಧ್ಯತೆಯಿದೆ. ಡೇಕಾರ್ಟ್ ಹೇಳಿದಂತೆ ನಾವು ಎಲ್ಲಾ ವಿಷಯಗಳ ಬಗ್ಗೆಯೂ ಸಂಶಯಪಡಬಹುದು. ಆದರೆ ನಾವು "ಸಂಶಯ ಪಡುತ್ತೇವೆ" "ಆಲೋಚಿಸುತ್ತೇವೆ" ಅಥವಾ "ಅನುಮಾನಿಸುತ್ತೇವೆ" ಎಂಬ ವಿಷಯದಲ್ಲಿ ಸಂಶಯಪಡುವುದಿಲ್ಲ. ಸಂಶಯವಿರುವಲ್ಲಿ ಸಂಶಯಪಡುವ ಚೈತನ್ಯ ಅಥವಾ ಮನಸ್ಸೊಂದು ಇರಲೇಬೇಕು. ಆದರೆ ನಮ್ಮ ಮನಸ್ಸಿನ ಇರವನ್ನು ಅದು ವ್ಯಕ್ತಪಡಿಸುವ ಸಂಶಯವೇ ಸೂಚಿಸುತ್ತದೆ. ಈ ರೀತಿ ಸಂಶಯದ ಸಹಾಯದಿಂದಲೇ ಡೇಕಾರ್ಟ್ ಮನಸ್ಸಿನ ಸತ್ಯತೆಯನ್ನು, ಅಸ್ತಿತ್ವವನ್ನು ಪ್ರತಿಪಾದಿಸುತ್ತಾನೆ.

"ನಾನು ಆಲೋಚಿಸುತ್ತೇನೆ, ಆದ್ದರಿಂದ ನಾನು ಇದ್ದೇನೆ" ಎನ್ನುವುದು ಆತನ ಸುಪ್ರಸಿದ್ಧ ಹೇಳಿಕೆ. (Cogitoergosum)

ಡೇಕಾರ್ಟಿಯ ಪ್ರಕಾರ ಮನಸ್ಸಿನ ಮುಖ್ಯ ಗುಣ ಆಲೋಚನೆ ಅಥವಾ ವಿಚಾರ. ಇದರಿಂದ ಮನಸ್ಸನ್ನು ಆಲೋಚನಾ ದ್ರವ್ಯವೆಂದು ಕರೆಯಲಾಗಿದೆ. ದ್ರವ್ಯವೆಂದರೆ ಸ್ವತಂತ್ರ ಅಸ್ತಿತ್ವವನ್ನು ಪಡೆದಿದ್ದು ಇತರ ಗುಣ ಅಥವಾ ಕರ್ಮಗಳಿಗೆ ಆಶ್ರಯವನ್ನೀಯುವ ಅಂಶವಾಗಿದೆ. ಮನಸ್ಸು ಪ್ರಪ್ರಥಮ ಸತ್ಯವಾಗಿದ್ದು ಉಳಿದ ವಿಷಯಗಳು ಈ ಮನಸ್ಸನ್ನು ಅವಲಂಬಿಸಿವೆಯೆಂದು ಡೇಕಾರ್ಟಿಯ ವಾದ. ಮನಸ್ಸಿನ ಸತ್ಯತೆಯ ಆಧಾರದಿಂದ ನಿಗಮನ ರೂಪದಲ್ಲಿ ಇತರ ವಸ್ತುಗಳ ಸತ್ಯತೆಯನ್ನು ತೀರ್ಮಾನ ರೂಪದಲ್ಲಿ ಪಡೆಯಬಹುದಾಗಿದೆ. ಈ ಕ್ರಮವನ್ನು 'ಆದರ್ಶವಾದ' ಅಥವಾ 'ಭಾವವಾದ' ಎಂದಿದ್ದಾರೆ. ಈ ವಾದಕ್ಕೆ ವಿರುದ್ಧವಾದುದು ವಾಸ್ತವವಾದ. ವಾಸ್ತವವಾದದ ಪ್ರಕಾರ ಪ್ರಾಪಂಚಿಕ ವಸ್ತುಗಳೆಲ್ಲವೂ ತಮ್ಮದೇ ಆದ ಸ್ವತಂತ್ರ ಇರವನ್ನು ಪಡೆದಿದ್ದು ಮನಸ್ಸನ್ನು ಯಾವ ರೀತಿಯಲ್ಲೂ ಅವಲಂಬಿಸಿಲ್ಲ. ಡೇಕಾರ್ಟ್ ಇವೆರಡು ವಾದಗಳ ಮುಖ್ಯಾಂಶವನ್ನು ಸಮನ್ವಯಗೊಳಿಸಿ ಮನಸ್ಸಿನ ಇರವನ್ನೂ, ಭೌತವಸ್ತುಗಳ ಇರವನ್ನು ಒಪ್ಪಿ ತನ್ನ ದ್ವೈತ ಸಿದ್ಧಾಂತವನ್ನು ರೂಪಿಸುತ್ತಾನೆ.

ದೇವರು ಮತ್ತು ಬಾಹ್ಯ ಜಗತ್ತು

ಪ್ರಾರಂಭದಲ್ಲಿ ಡೇಕಾರ್ಟ್ ತನ್ನ ಮನಸ್ಸು ಇದೆ ಎಂಬ ಅಂಶವನ್ನು ಮಾತ್ರ ಒಪ್ಪಿದ್ದು ಇತರ ವಿಷಯಗಳ ಬಗ್ಗೆ ಸಂಶಯಪಟ್ಟನು. ಆದರೆ ಅವನಲ್ಲಿ ವಿಜ್ಞಾನದ ಬಗೆ ಆಸಕ್ತಿ, ಅಭಿಮಾನ ಮತ್ತು ನಂಬಿಕೆ ಇದ್ದುದರಿಂದ ವಿಜ್ಞಾನದ ಬೆಳವಣಿಗೆಗೆ ಆಧಾರವಾದ ಬಾಹ್ಯ ವಸ್ತುಗಳ ಅಸ್ತಿತ್ವವನ್ನು ಅಂಗೀಕರಿಸುತ್ತಾನೆ. ಆದರೆ ಮೂಲತಃ ವಿಚಾರವಾದಿಯಾದ ಡೇಕಾರ್ಟ್ ವಸ್ತು ಸತ್ಯವನ್ನು ಮನಸ್ಸಿನ ಸತ್ಯದ ಆಧಾರವಿಲ್ಲದೆ ಸ್ಥಾಪಿಸುತ್ತಾನೆ. ಅಂತೆಯೇ ನಮ್ಮ ಮನಸ್ಸಿನಲ್ಲಿ ಮೂರು ರೀತಿಯ ಕಲ್ಪನೆಗಳಿರುವುದಾಗಿ ವಿವರಿಸಿ ಅವುಗಳ ಮೂಲಕ ದೇವರ, ಮನಸ್ಸಿನ ಮತ್ತು ಬಾಹ್ಯ ವಸ್ತುಗಳ ಅಸ್ತಿತ್ವವನ್ನು ವಿವರಿಸುತ್ತಾನೆ. ಅವನ ಪ್ರಕಾರ ನಮ್ಮ ಮನಸ್ಸಿನಲ್ಲಿರುವ ಕಲ್ಪನೆಗಳು:

(1) ಹುಟ್ಟಿನಿಂದಲೇ ಬಂದ ಮೂಲಕಲ್ಪನೆಗಳು
(2) ಇಂದ್ರಿಯಗಳ ಸಹಾಯದಿಂದ ನಿರ್ಮಿತವಾದ ಕಲ್ಪನೆಗಳು
(3) ನಮ್ಮ ಕಲ್ಪನಾಶಕ್ತಿಯಿಂದ ನಿರ್ಮಿಸಲ್ಪಟ್ಟ ಕಲ್ಪನೆಗಳು

ಈ ಕಲ್ಪನೆಗಳಲ್ಲೆಲ್ಲಾ ಅತ್ಯಂತ ಪ್ರಧಾನವಾದುದು ದೇವರ ಕಲ್ಪನೆ. ದೇವರು ಮೂಲ ದ್ರವ್ಯವಾಗಿದ್ದು ಆತನ ಮುಖ್ಯ ಗುಣಗಳು ಸರ್ವಜ್ಞತೆ, ಸರ್ವಶಕ್ತತೆ, ಪರಮೋತ್ಕೃಷ್ಟ ಸತ್ಯತೆ, ಸರ್ವಾಂತರ್ಯಾಮಿಯಾಗಿರುವಿಕೆಗಳಾಗಿವೆ. ಈ ಪ್ರಧಾನ ದ್ರವ್ಯದ ಮೂಲಕವೇ ಡೇಕಾರ್ಟ್ ಜಗತ್ತಿನ ಸತ್ಯವನ್ನು ನಿರೂಪಿಸುತ್ತಾನೆ.

ದೇವರ ಅಸ್ತಿತ್ವದ ಸಾಧನೆ ಡೇಕಾರ್ಟ್‌ಯ ದೃಷ್ಟಿಯಲ್ಲಿ ಬಹಳ ಸರಳ. ಮುಂದೆ ದೇವರ ಇರುವಿಕೆಯ ಬಗ್ಗೆ ಮಂಡಿಸಲಾದ ವಾದಗಳೊಂದರಲ್ಲಿ ಮುಖ್ಯವಾದ ಪರಿಪೂರ್ಣತಾ ವಾದವು ಡೇಕಾರ್ಟ್‌ಯ ವಿವರಣೆಯ ಸುಧಾರಿತ ರೂಪವಾಗಿವೆ. ಅವನ ಪ್ರಕಾರ ಮನಸ್ಸಿನಲ್ಲಿರುವ ಪ್ರತಿಯೊಂದು ಕಲ್ಪನೆಯು ಬಾಹ್ಯ ವಸ್ತುವಿಗೆ ಸರಿಹೊಂದುವಂತಿರಬೇಕು. ನಮ್ಮ ಮನಸ್ಸಿನಲ್ಲಿ ದೇವರ ಕಲ್ಪನೆ ಇದೆ, ಅಂದರೆ ಇತರ ಕಲ್ಪನೆಗಳಂತೆ ದೇವರ ಬಗ್ಗೆಯೂ ಮೂಲ ಕಲ್ಪನೆ ನಮ್ಮ ಮನಸ್ಸಿನಲ್ಲಿದೆ. ಈ ಕಲ್ಪನೆ ಇಂದ್ರಿಯಗಳ ಸಹಾಯದಿಂದಾಗಲೀ ಅಥವಾ ನಮ್ಮ ಕಾಲ್ಪನಿಕ ಶಕ್ತಿಯಿಂದಾಗಲಿ ಉಂಟಾಮದಲ್ಲ. ದೇವರು ಇರುವುದರಿಂದಲೇ ನಮ್ಮಲ್ಲಿ ಅವನ ಬಗ್ಗೆ ಕಲ್ಪನೆ ಇರಲು ಸಾಧ್ಯವಾಗಿದೆ. ಈ ದೇವರು ಸಕಲ ಕಲ್ಯಾಣ ಗುಣಗಳನ್ನು ಹೊಂದಿದ ಮೂಲ ದ್ರವ್ಯವಾಗಿದೆ. ಇಂತಹ ಗುಣಗಳಿಲ್ಲದಿದ್ದರೆ ಅವನು ಪರಿಪೂರ್ಣನಾಗುತ್ತಿರಲಿಲ್ಲ. ದೇವರು ಎಲ್ಲ ಸೃಷ್ಟಿಗೂ ಮೊದಲ ದ್ರವ್ಯವಾದುದರಿಂದ ಈ ಪ್ರಪಂಚಕ್ಕೂ, ಮಾನವನಿಗೂ ಮತ್ತು ಮಾನವನಲ್ಲಿರುವ ಸಕಲ ಕಲ್ಪನೆ ಮತ್ತು ಭಾವನೆಗಳಿಗೂ ಮೂಲವಾಗಿದ್ದಾನೆ. ಈ ದೃಷ್ಟಿಯಿಂದ ದೇವರು ಈ ಪ್ರಪಂಚದ ಹಾಗೂ ಎಲ್ಲಾ ಜೀವಿಗಳ ಸೃಷ್ಟಿಕರ್ತ. ದೇವರಿಲ್ಲದಿದ್ದರೆ ಮಾನವನು ಇರುತ್ತಿರಲಿಲ್ಲ. ದೇವರ ಬಗ್ಗೆ ಕಲ್ಪನೆಯೂ ಇರುತ್ತಿರಲಿಲ್ಲ. ಈ ದೇವರು ಅಶರೀರವಾದುದರಿಂದ ನಮ್ಮ ಇಂದ್ರಿಯಗಳಿಗೆ ಅಗೋಚರನು. ಆದರೆ ಅವನ ಸಂಪೂರ್ಣ ಅಸ್ತಿತ್ವವು ಅವನ ಬುದ್ಧಿಶಕ್ತಿ ಮತ್ತು ಅದಕ್ಕನುಗುಣವಾದ ನಿರ್ಧಾರಗಳಿಂದ ಕೂಡಿದೆ. ಅವನ ಬುದ್ಧಿಶಕ್ತಿಯು ಮಾನವನ ಬುದ್ಧಿಶಕ್ತಿಯಂತಿರದೆ ಪರಿಪೂರ್ಣವಾಗಿದೆ. ಈ ದೇವರು ಪವಿತ್ರವೂ, ನಿತ್ಯಪ್ರಕಾಶನೂ, ಪಾಪಕೃತ್ಯವನ್ನು ಮಾಡದವನು ಆಗಿದ್ದಾನೆ.

ಬಾಹ್ಯ ಪ್ರಪಂಚ

ನಮ್ಮ ಮನಸ್ಸಿನ ಹೊರಗೆ ಇತರ ಭೌತ ವಸ್ತುಗಳು ಇರುವುದನ್ನು ನಾವೆಲ್ಲಾ ಗಮನಿಸುತ್ತೇವೆ. ಅವುಗಳ ಅರಿವು ಸಾಮಾನ್ಯವಾಗಿ ಇಂದ್ರಿಯಾನುಭವದಿಂದ ಉಂಟಾಗುತ್ತದೆ. ಆದರೆ ಡೇಕಾರ್ಟ್ ಆ ವಸ್ತುಗಳ ಇರುವಿಕೆಯನ್ನು ನಮ್ಮ ಅನುಭವದ ಮೂಲಕ ಒಪ್ಪಿಕೊಳ್ಳಲು ಹಿಂಜರಿಯುತ್ತಾನೆ. ನಮ್ಮ ಇಂದ್ರಿಯಗಳು ನಮಗೆ ಸಮಂಜಸ ಜ್ಞಾನವನ್ನು ತಿಳಿಸಲು ಅಶಕ್ತವಾಗಿರುವುದೇ ಆತನ ಹಿಂಜರಿಯುವಿಕೆಗೆ ಕಾರಣ. ಆದುದರಿಂದ ಭೌತ ವಸ್ತುಗಳ ಇರವನ್ನು ನಿರೂಪಿಸಲು ಡೇಕಾರ್ಟ್ ದೇವರ ಸಹಾಯವನ್ನು ಅಪೇಕ್ಷಿಸುತ್ತಾನೆ. ಅವನ ಪ್ರಕಾರ ನಮ್ಮಲ್ಲಿರುವ ದೈವೀಕ ಪ್ರಜ್ಞೆಯು ಆ ವಸ್ತುಗಳನ್ನು ಅರಿಯಲು ಸಹಾಯಕವಾಗಿದೆ. ದೇವರು ನಮಗೆ ನೀಡಿರುವ ಬುದ್ಧಿಶಕ್ತಿಯು ನಮ್ಮ ಜ್ಞಾನದ ಸರಿ ತಪ್ಪುಗಳನ್ನು ತಿಳಿಯಲು ಸಹಾಯಕವಾಗಿದೆ. ದೇವರು ಸತ್ಯ ಸ್ವರೂಪನು, ನಿರ್ವಂಚಕನೂ ಆಗಿರುವುದರಿಂದ ಆತನು ನಮಗೆ ನೀಡಿದ ಜ್ಞಾನವು ತಪ್ಪಾಗಲು ಸಾಧ್ಯವಿಲ್ಲ.

ಮತ್ತೊಂದು ಕಡೆ ಅಸ್ತಿತ್ವವಿರುವ ಬಾಹ್ಯ ವಸ್ತುಗಳು ನಮ್ಮ ಆಲೋಚನೆ ಮತ್ತು ಕಲ್ಪನೆಗಳಿಂದ ಸ್ವತಂತ್ರವಾಗಿವೆ. ಅಂದರೆ ನಾವು ಅವುಗಳ ಒಗ್ಗೆ ಆಲೋಚಿಸದಿದ್ದರೂ ಆ ವಸ್ತುಗಳು ಇದ್ದೇ ಇರುತ್ತವೆ. ಇಂತಹ ಸ್ವತಂತ್ರ ಅಸ್ತಿತ್ವವುಳ್ಳ ವಸ್ತುಗಳನ್ನು ದ್ರವ್ಯವೆನ್ನುತ್ತೇವೆ. ಇಂತಹ ಅಸಂಖ್ಯಾತ ದ್ರವ್ಯಗಳ ಕಲ್ಪನೆ ನಮ್ಮ ಮನಸ್ಸಿನಲ್ಲಿವೆ. ಇವುಗಳಲ್ಲದೆ ಪರಮೋತ್ಕೃಷ್ಟ ದ್ರವ್ಯವಾದ ದೇವರ ಕಲ್ಪನೆಯು ನಮ್ಮಲ್ಲಿದೆ. ಪ್ರತಿಯೊಂದು ದ್ರವ್ಯವು ಒಂದು ವಿಶಿಷ್ಟ ಗುಣವನ್ನು ಪಡೆದಿರುತ್ತದೆ. ದೇವರ ಗುಣವು ನಿತ್ಯತೆ, ಸತ್ಯತೆ, ಅನಂತತೆ ಮತ್ತು ಜ್ಞಾನಗಳಾದರೆ ಮನಸ್ಸಿನ ಗುಣವು ಆಲೋಚನೆ ಮತ್ತು ಚೈತನ್ಯವಾಗಿವೆ; ಹಾಗೂ ಭೌತ ವಸ್ತುಗಳ ಗುಣವು ವಿಸ್ತೃತೆಯಾಗಿದೆ; ಪ್ರಾಪಂಚಿಕ ವಸ್ತುಗಳು ಜಡ. ಆದರೆ ಅವುಗಳ ಅಸ್ತಿತ್ವ ಮತ್ತು ಚಲನೆ ನಿಜವಾಗಿವೆ. ಹೊರ ಪ್ರಪಂಚವಲ್ಲಿ ಭೌತ ವಸ್ತುಗಳಿರದಿದ್ದರೆ ಅವುಗಳ ಕಲ್ಪನೆ ನಮ್ಮಲ್ಲಿ ಉಂಟಾಗಲು ಸಾಧ್ಯವಿರುತ್ತಿರಲಿಲ್ಲ. ದೇವರೇ ಆ ಕಲ್ಪನೆಗಳನ್ನೆಲ್ಲಾ ನಮ್ಮಲ್ಲಿ ತುಂಬಿರುವುದರಿಂದ ಅವಕ್ಕನುಗುಣವಾದ ವಸ್ತುಗಳು ಅಸ್ತಿತ್ವದಲ್ಲಿರಬೇಕು. ಹಾಗಿಲ್ಲದಿದ್ದರೆ ವಸ್ತುಗಳ ಕಲ್ಪನೆ ಕೃತಕ ಹಾಗೂ ಮಿಥ್ಯವಾಗಬೇಕಾಗುತ್ತದೆ, ಇಲ್ಲವೇ ದೇವರು ಮೋಸಗಾರನೆಂದು ತೀರ್ಮಾನಿಸಬೇಕಾಗುತ್ತದೆ. ಡೇಕಾರ್ಟೆಯು ಪ್ರಕಾರ ಜಡವಸ್ತುಗಳು ಅಥವಾ ಶರೀರ ಕ್ರಿಯಾತ್ಮಕವಾಗಬೇಕಾದರೆ ದೇವರ ಸಹಾಯ ಅಗತ್ಯ. ಪ್ರಪಂಚವು ಚಲನೆಯನ್ನು ಹೊಂದಲು ದೇವರೇ ಕಾರಣ. ವಸ್ತುಗಳಿಗೆ ಸ್ವಯಂಚಾಲಕಶಕ್ತಿಯಿಲ್ಲದಿದ್ದರೂ ದೇವರ ಸಹಾಯದಿಂದ ಚಲನಾಶಕ್ತಿಯನ್ನು ಪಡೆಯುತ್ತವೆ.

ಮನಸ್ಸು ಮತ್ತು ಶರೀರಗಳ ಸಂಬಂಧ-ಸಮಸ್ಯೆ

ವಿಚಾರವಾದಿಗಳ ಪ್ರಕಾರ ಮನಸ್ಸು ಮತ್ತು ಶರೀರಗಳು ಪರಸ್ಪರ ವಿರುದ್ಧವಾದ ವಿಭಾಗಗಳಾಗಿವೆ. ಶರೀರವು ಭೌತ ವಸ್ತುವಾಗಿದ್ದು ಇತರ ಭೌತವಸ್ತುಗಳಂತೆ ವಿಸ್ತೃತೆಯನ್ನು ಮಾತ್ರ ಹೊಂದಿದ್ದು ಪ್ರಜ್ಞೆ ಮತ್ತು ಸ್ವಯಂಚಾಲಕ ಶಕ್ತಿಗೆ ದೂರವಾಗಿದೆ. ಇದಕ್ಕೆ ವಿರುದ್ಧವಾಗಿ ಮನಸ್ಸು ವಿಚಾರವನ್ನು ಅಥವಾ ಆಲೋಚನೆಯನ್ನು ಗುಣವನ್ನಾಗಿ ಪಡೆದಿದೆ. ಶರೀರವು ತಾಮಸಿಕವಾದರೆ ಮನಸ್ಸು ಕ್ರಿಯಾತ್ಮಕವಾದುದು. ಶರೀರವು ಪೂರ್ವನಿರ್ಧಾರಿತವಾಗಿದ್ದರೆ ಅಥವಾ ಕಾರ್ಯ-ಕಾರಣ ನಿಯಮಗಳಿಗೊಳಗಾಗಿದ್ದರೆ ಮನಸ್ಸು ಸ್ವತಂತ್ರವಾದುದ್ದಾಗಿದೆ. ಮನಸ್ಸು ಶರೀರದಂತೆಯೇ ವಿಸ್ತೃತೆಯನ್ನು ಪಡೆದಿಲ್ಲ. ಶರೀರ ಮನಸ್ಸಿನಂತೆ ವಿಚಾರ ಮಾಡುವುದಿಲ್ಲ. ಈ ಎರಡು ದ್ರವ್ಯಗಳು ಪ್ರತ್ಯೇಕವಾಗಿ ತಮಗನುಗುಣವಾದ ನಿಯಮಗಳನ್ನು ಮಾತ್ರ ಪಾಲಿಸುತ್ತವೆ. ಭೌತ ವಸ್ತುವು ತನ್ನ ಚಟುವಟಿಕೆಯಲ್ಲಿ ಪೂರ್ವ ನಿರ್ಧಾರಿತ ನಿಯಮವೊಂದಕ್ಕೆ ಒಳಗಾಗಿದ್ದು ಯಾಂತ್ರಿಕವಾಗಿ ವಿಸ್ತೃತ ಹಾಗೂ ಬದಲಾವಣೆಯನ್ನು ಹೊಂದುತ್ತದೆ. ಆದರೆ ಮನಸ್ಸು ಪೂರ್ವ ನಿರ್ಧಾರಿತ ನಿಯಮಕ್ಕೆ ಒಳಗಾಗದೆ ಸ್ವತಂತ್ರವೂ, ಚೈತನ್ಯ ಯುಕ್ತವೂ ಆಗಿದ್ದು ಸ್ವಯಂ ನಿರ್ಧಾರಕ ಶಕ್ತಿಯನ್ನು ಪಡೆದಿದೆ. ಇದಕ್ಕೆ ವಿರುದ್ಧವಾಗಿ ಭೌತ

ವಸ್ತುಗಳು ಪೂರ್ವಾಪರ ಸಂಬಂಧದ ನಿಯಮಕ್ಕೆ ಒಳಗಾಗಿವೆ. ಉದಾಹರಣೆಗೆ ವಸ್ತು ಅಥವಾ ಶರೀರವು ಒಂದು ಗಡಿಯಾರದಂತಿರುತ್ತದೆ. ಗಡಿಯಾರಕ್ಕೆ ಕೀಲಿ ಕೊಡದಿದ್ದರೆ ಅದು ಚಲಿಸದು, ಕೀಲಿ ಕೊಡದೆ ಅದು ಚಲಿಸಲು ಸಾಧ್ಯವೇ ಇಲ್ಲ. ಈ ರೀತಿ ಭೌತ ವಸ್ತುವಿನ ಚಲನೆಯು ಅದರ ಪೂರ್ವಸ್ಥಿತಿಯಿಂದ ಉಂಟಾಗಿದ್ದು ಯಾಂತ್ರಿಕವಾಗಿರುತ್ತವೆ. ಆದರೆ ಮನಸ್ಸು ಇಂತಹ ಪೂರ್ವಾನಿರ್ಧಾರಿತ ನಿಯಮಕ್ಕೆ ಒಳಪಟ್ಟಿರದೆ ಸ್ವತಂತ್ರವಾಗಿ ಆಲೋಚಿಸುವ ಶಕ್ತಿಯನ್ನು ಪಡೆದಿದೆ. ಇಷ್ಟೇ ಅಲ್ಲದೆ ಮನಸ್ಸು ತನ್ನದೇ ಆದ ಕೆಲವು ಉದ್ದೇಶಗಳನ್ನು ಹೊಂದಿದ್ದು ಅವುಗಳಿಗೆ ಅನುಸಾರವಾಗಿಯೇ ವರ್ತಿಸುತ್ತದೆ.

ಮೇಲಿನ ವಿವರಣೆಯು ಡೇಕಾರ್ಟಿಯ ಮತ್ತು ವಿಚಾರವಾದದ ದ್ವೈತವಾದವನ್ನು ಪ್ರತಿಪಾದಿಸುತ್ತದೆ. ಈ ವಾದದಂತೆ ಮನಸ್ಸು ಮತ್ತು ಶರೀರಗಳೆಂಬ ದ್ರವ್ಯಗಳ ಪರಸ್ಪರ ಸ್ವತಂತ್ರವಾಗಿರುವುದೇ ಅಲ್ಲದೆ ಪರಸ್ಪರ ವಿರುದ್ಧವಾಗಿಯೂ ಇವೆ. ಡೇಕಾರ್ಟಿಯ ಈ ದ್ವೈತವಾದವು ಮುಂದೆ ಪಾಶ್ಚಾತ್ಯ ತತ್ವಶಾಸ್ತ್ರದಲ್ಲಿ ಪ್ರಮುಖ ಸಮಸ್ಯೆಗಳಲ್ಲಿ ಒಂದಾದ ಶರೀರ–ಮನಸ್ಸುಗಳ ಸಮಸ್ಯೆಯನ್ನು ರೂಪಿಸುತ್ತದೆ. ಪರಸ್ಪರ ಸ್ವತಂತ್ರವಾದ ಹಾಗೂ ವಿರುದ್ಧವಾದ ಶರೀರ ಮತ್ತು ಮನಸ್ಸುಗಳು ಹೇಗೆ ಅನ್ಯೋನ್ಯತೆಯಿಂದ ಮತ್ತು ಸೌಹಾರ್ದತೆಯಿಂದ ವರ್ತಿಸುತ್ತವೆ ಎನ್ನುವುದೇ ಈ ಸಮಸ್ಯೆಯ ಲಕ್ಷಣ. ಇದಕ್ಕೆ ಉದಾಹರಣೆಯಾಗಿ ಒಬ್ಬ ವ್ಯಕ್ತಿಯನ್ನೇ ತೆಗೆದುಕೊಳ್ಳಬಹುದು. ಮನುಷ್ಯನು ಪ್ರಜ್ಞೆ ಇರುವ ಒಂದು ಮನಸ್ಸನ್ನು ಜಡವಾದ ಭೌತವಸ್ತುವಿನಿಂದ ಕೂಡಿದ ಶರೀರ ಒಂದನ್ನು ಪಡೆದಿದ್ದಾನೆ. ಡೇಕಾರ್ಟಿಯ ದ್ವೈತವಾದವು ಸಮಗ್ರವಾಗಿ ಪರಿಗಣಿಸಲ್ಪಟ್ಟಲ್ಲಿ ಶರೀರ ಮತ್ತು ಮನಸ್ಸುಗಳ ನಡುವೆ ಪರಸ್ಪರ ಪ್ರಕ್ರಿಯೆ ಇರಲು ಸಾಧ್ಯವೇ ಇಲ್ಲ. ಈ ಎರಡು ದ್ರವ್ಯಗಳು ಸಂಪೂರ್ಣ ಬೇರೆಯಿದ್ದು ತಮ್ಮದೇ ಆದ ವಿಶಿಷ್ಟ ನಿಯಮಗಳನ್ನು ಪಾಲಿಸುವುದರಿಂದ ಅವುಗಳ ಮಧ್ಯೆ ಪ್ರಕ್ರಿಯೆ ಇರಲು ಸಾಧ್ಯವಿಲ್ಲ. ಆದರೆ ನಿಜವಾಗಿಯೂ ನಮ್ಮ ಮನಸ್ಸು ಮತ್ತು ಶರೀರಗಳ ನಡುವೆ ಪ್ರಕ್ರಿಯೆ ಹಾಗೂ ಅನ್ಯೋನ್ಯತೆ ಇರುವುದನ್ನು ನಾವು ಕಾಣುತ್ತೇವೆ, ಅನುಭವಿಸುತ್ತೇವೆ. ಮನಸ್ಸು ಶರೀರವನ್ನು ಪ್ರಚೋದನೆಗೊಳಿಸುತ್ತದೆ, ಕ್ರಿಯಾತ್ಮಕವಾಗಿ ಚಲಿಸುವಂತೆ ಮಾಡುತ್ತದೆ. ಅದೇ ರೀತಿ ಶರೀರವು ಮನಸ್ಸಿನ ಮೇಲೆಯೂ ಪ್ರಭಾವವನ್ನು ಬೀರುತ್ತದೆ. ನಾವು ಭಯಗೊಂಡಾಗ ನಮ್ಮ ಶರೀರ ಬೆವರುವುದನ್ನು ಅಥವಾ ನಡಗುವುದನ್ನು ಅಥವಾ ರಕ್ತದ ಒತ್ತಡ ಹೆಚ್ಚುವುದನ್ನು ಕಾಣಬಹುದು. ಇದೇ ರೀತಿ ಶರೀರದ ಆಯಾಸ ಅಥವಾ ಇನ್ನಾವುದೇ ಚಟುವಟಿಕೆ ಮನಸ್ಸಿನ ಮೇಲೂ ಪರಿಣಾಮವನ್ನುಂಟು ಮಾಡುತ್ತದೆ. ಪ್ರಜ್ಞೆ ಇರುವ ಅಂಶವು ಜಡ ವಸ್ತುವಿನ ಮೇಲೆ ಹೇಗೆ ಪರಿಣಾಮವನ್ನು ಬೀರುತ್ತದೆ ಎನ್ನುವುದೇ ಇಲ್ಲಿಯ ಸಮಸ್ಯೆ.

ಈ ಸಮಸ್ಯೆಯನ್ನು ವೈಜ್ಞಾನಿಕವಾಗಿ ಬಗೆಹರಿಸಲು ಡೇಕಾರ್ಟೆ ಪ್ರಯತ್ನಿಸುತ್ತಾನೆ. ವಿಜ್ಞಾನದ ಪ್ರಕಾರ ಸಮಸ್ತ ವಸ್ತುಗಳೂ ಭೌತವಸ್ತುಗಳೇ ಆಗಿದ್ದು ಮನಸ್ಸು ಕೂಡ ಈ ತತ್ವಕ್ಕೆ ಒಳಗಾಗಿದೆ. ಅಂದರೆ ಮನಸ್ಸು ಶರೀರದಂತಿರದೆ ಚೈತನ್ಯವನ್ನು ಪಡೆದಿದ್ದರೂ ಅದು ಭೌತ ವಸ್ತುವಿನಿಂದಲೇ ಮಾಡಲ್ಪಟ್ಟ ಒಂದು ಭಾಗವಾಗಿದೆ. ಈ

ದೃಷ್ಟಿಯಿಂದ ಮನಸ್ಸಿಗೂ, ಶರೀರಕ್ಕೂ ಪ್ರಮುಖ ಅಂತರವೇನಿಲ್ಲ. ಈ ತೀರ್ಮಾನವನ್ನು ಆಧಾರ ಮಾಡಿಕೊಂಡ ಡೇಕಾರ್ಟ್ ಪ್ರಾರಂಭದಲ್ಲಿ ಮನುಷ್ಯನು ಸಂಪೂರ್ಣವಾಗಿ ಭೌತವಸ್ತುವೆಂದು, ಮನಸ್ಸು ಎನ್ನುವುದು ಬೇರೆ ಇಲ್ಲವೆಂದು ತೀರ್ಮಾನಿಸಿದನು. ಆದರೆ ಮುಂದೆ ಆತನ ಸಂಶಯ ಸಿದ್ಧಾಂತವು ಮನಸ್ಸಿನ ಇರವನ್ನು ದೃಢಪಡಿಸಿತು. ಮನಸ್ಸಿನ ಇರವು ನಿಸ್ಸಂಶಯವಾಗಿದ್ದು ಅದು ಒಂದು ಚೈತನ್ಯಯುಕ್ತ ಶಕ್ತಿಯಿಂದ ನಮ್ಮ ಗ್ರಹಣ ಶಕ್ತಿ ಅಸ್ತಿತ್ವದಲ್ಲೇ ರೂಪುಗೊಳ್ಳಬೇಕೆಂದು ತೀರ್ಮಾನಿಸಿದನು. ವಿಜ್ಞಾನ ದೃಷ್ಟಿಯಿಂದ ಪರೀಕ್ಷಿಸಿದರೆ ಮನಸ್ಸೊಂದು ಭೌತವಸ್ತು ಎಂಬ ತೀರ್ಮಾನಕ್ಕೆ ತದ್ವಿರುದ್ಧವಾದ ತೀರ್ಮಾನವನ್ನು ಆತನು ಈಗ ನೀಡಿದ್ದಾನೆ. ಅಂತೆಯೇ ಮನಸ್ಸು ಶರೀರದೊಡನೆ ಹೊಂದಿರುವುದೆಂದು ಮನಸ್ಸಿನ ಆಜ್ಞೆಗಳನ್ನು ಶರೀರ ನಿರ್ವಹಿಸುವುದೆಂದು ಹೇಳುತ್ತಾನೆ. ಆದರೂ ಅವು ಹೇಗೆ ಮತ್ತು ಯಾವ ಕಾರಣದಿಂದ ಪರಸ್ಪರ ಪ್ರಕ್ರಿಯೆಯನ್ನು ನಡೆಸುತ್ತವೆ ಎಂಬ ಸಮಸ್ಯೆಗೆ ಸೂಕ್ತವಾದ ಪರಿಹಾರವನ್ನು ಆತನಿಂದ ನೀಡಲಾಗಲಿಲ್ಲ. ಕೆಲವು ವೇಳೆ ಈ ದ್ರವ್ಯಗಳ ನಡುವೆ ನಡೆಯುವ ಪ್ರಕ್ರಿಯೆಯು ವ್ಯಕ್ತಿಯ ಮಿದುಳಿನಲ್ಲಿರುವ ಪೀನಿಯಲ್ ಗ್ರಂಥಿಯ ಸಹಾಯದಿಂದ ನಡೆಯುತ್ತದೆ ಎನ್ನುವ ಸಿದ್ಧಾಂತವನ್ನು ಅಂಗೀಕರಿಸುತ್ತಾನೆ. ಈ ಗ್ರಂಥಿಯು ಭೌತವಸ್ತುವಾದರೂ ಚೈತನ್ಯ ಹಾಗೂ ಜಡ ವಸ್ತುಗಳ ನಡುವೆ ಪರಸ್ಪರ ಪ್ರಕ್ರಿಯೆಗೆ ಸಹಕಾರಿಯಾಗಿದೆ. ಆದರೂ ಯಾವ ರೀತಿಯಲ್ಲಿ ಅದು ಪ್ರಕ್ರಿಯೆಯನ್ನು ಏರ್ಪಡಿಸುತ್ತದೆ ಎನ್ನುವ ಅಂಶವೂ ಇನ್ನೂ ಸಮಸ್ಯೆಯಾಗಿಯೇ ಉಳಿದಿದೆ. ಮನಸ್ಸು ಮತ್ತು ಶರೀರಗಳ ಪರಸ್ಪರ ಪ್ರಕ್ರಿಯೆಯನ್ನು ಒಪ್ಪಿ ಪೀನಿಯಲ್ ಗ್ರಂಥಿಯ ಮೂಲಕ ನಡೆಯುವ ಪ್ರಕ್ರಿಯೆಯನ್ನು ಮನಸ್ಸು ಮತ್ತು ಶರೀರದ ಸಮಸ್ಯೆಗೆ ಪರಿಹಾರವನ್ನಾಗಿ ರೂಪಿಸಿದ ಡೇಕಾರ್ಟೆಯ ಈ ಸಿದ್ಧಾಂತವನ್ನು "ಪ್ರಕ್ರಿಯ ಸಿದ್ಧಾಂತ" ಎನ್ನುತ್ತಾರೆ. ಈ ಸಿದ್ಧಾಂತ ಅಸಮರ್ಪಕವಾಗಿರುವುದರಿಂದ ಅವನ ಅನುಯಾಯಿಗಳಲ್ಲಿ ಕೆಲವರು ರಹಸ್ಯಾತ್ಮಕ ವಿವರಣೆಯುಳ್ಳ "ನೈಮಿತ್ತಿಕ ಸಿದ್ಧಾಂತ"ವನ್ನು ನೀಡಿದ್ದಾರೆ. ಡೇಕಾರ್ಟ್ ಮನಸ್ಸು ಮತ್ತು ಶರೀರದ ಸಂಬಂಧವನ್ನು ಕಾರ್ಯ ಕಾರಣದ ಸಹಾಯದಿಂದ ಸಮರ್ಥಿಸಿದ್ದರೆ, ನೈಮಿತ್ತಿಕ ಸಿದ್ಧಾಂತಿಗಳು ವಿಚಾರ ರಹಿತವಾದ ಮೂಢನಂಬಿಕೆಯನ್ನು ಅವಲಂಬಿಸಿದ್ದಾರೆ. ಮನಸ್ಸು ಇಚ್ಛಿಸಿದಾಗಲೆಲ್ಲಾ ಶರೀರ ಆ ಇಚ್ಛೆಯಂತೆ ವರ್ತಿಸುತ್ತದೆ. ಎಂದು ಡೇಕಾರ್ಟ್ ಹೇಳಿದರೆ ಮನಸ್ಸು ಇಚ್ಛಿಸಿದಾಗ ಆ ಇಚ್ಛೆಯನ್ನು ಶರೀರವು ನೆರವೇರಿಸುವಂತೆ ಪ್ರತಿ ಸಂದರ್ಭದಲ್ಲಿಯೂ ದೇವರೇ ಪ್ರೇರೇಪಿಸುತ್ತಾನೆ ಎಂದು ನೈಮಿತ್ತಿಕ ಸಿದ್ಧಾಂತಿಗಳ ಅಭಿಪ್ರಾಯ. ಇಲ್ಲಿ ದೇವರು ಮಾತ್ರ ಕ್ರಿಯಾತ್ಮಕವಾಗಿದ್ದು ಮನಸ್ಸಿನ ಇಚ್ಛೆ ಶಾರೀರಕವಾಗಿ ಕ್ರಿಯಾತ್ಮಕವಾಗುವಂತೆ ಮಾಡುತ್ತಾನೆ ಎಂದು ಅವರ ಹೇಳಿಕೆ. ಆದರೆ ಈ ಹೇಳಿಕೆಯು ವಿಚಾರರಹಿತವಾದುದು, ಅನುಚಿತವಾದುದೂ ಆಗಿದೆ.

ಆಧುನಿಕ ತತ್ವಶಾಸ್ತ್ರದ ಸ್ಥಾಪಕನಾದ ಡೇಕಾರ್ಟನು ಭೌತವಸ್ತು, ಚೈತನ್ಯ ವಸ್ತುಗಳೆರಡೂ ಇರುವಿನ ಎರಡು ಭಾಗಗಳೆಂದು ಸಿದ್ಧಾಂತ ಮಾಡಿರುವುದು ಜೈನ

ದರ್ಶನದಂತಿದೆ; ಅದೂ ಜೀವ, ಅಜೀವ ತತ್ವಗಳನ್ನು ಪ್ರತಿಪಾದಿಸಿದೆ. ಆದರೆ ಡೇಕಾರ್ಟನ ಮತವು ಈ ಎರಡೂ ತತ್ವಗಳನ್ನು ಸೇರಿಸುವ ಶಕ್ತಿಯೊಂದಿದೆ; ಅದೇ ಈಶ್ವರವು–ಎಂದಿದೆ. ಇದನ್ನು ಜೈನದರ್ಶನವು ಒಪ್ಪುವುದಿಲ್ಲ. ಏಕೆಂದರೆ ಪ್ರತಿಯೊಂದು ಕಾರ್ಯಕ್ಕೂ ಒಂದು ಕಾರಣವಿರುವುದು. ಒಂದರಿಂದ ಇನ್ನೊಂದು ಮುಂದುವರಿಯುವುದು. ಭೌತ ಪ್ರಪಂಚದಲ್ಲಿ ಒಂದು ಕ್ರಿಯೆ ನಡೆಯುತ್ತಿದೆ, ಇನ್ನೊಂದು ಕಡೆ ಆತ್ಮನಲ್ಲಿಯೂ ಆಲೋಚನೆ ಭಾವನೆಗಳ ಪರಂಪರೆ ಇರುತ್ತದೆ. ಹೀಗೆ ಕ್ರಿಯೆಗಳು ಬೇರೆ ಬೇರೆಯಾಗಿ ಸಾಗಿದ್ದು ಅವುಗಳ ಸಂಬಂಧ ಬರುವುದು ಆಕಸ್ಮಿಕವಾಗಿ.-ಕಾಕತಾಲೀಯ ನ್ಯಾಯದಂತೆ ಎಂದರೆ ಸಮರ್ಪಕವೆನಿಸದು. ಈ ಸಂಬಂಧವನ್ನು ಉಂಟು ಮಾಡುವುದಕ್ಕೆ ಹೊರಗಿನ ಶಕ್ತಿಯೊಂದನ್ನು ಕಲ್ಪಿಸುವುದೂ ವಿಸಂಗತವು. ಏಕೆಂದರೆ, ಕಾರಣಕ್ಕೂ ಕಾರ್ಯಕ್ಕೂ ತಾದಾತ್ಮ್ಯ ಸಂಬಂಧ ಬರುವುದಿಲ್ಲ; ಕಾರಣವು ಕಾರ್ಯದಲ್ಲಿ ಮುಂದುವರಿಯುವುದಿಲ್ಲ; ಕಾರಣದಿಂದಲೇ ಕಾರ್ಯ ಹುಟ್ಟುವುದಿಲ್ಲ. ಇವೆಲ್ಲಾ ಕಾರಣಗಳಿಂದ ಡೇಕಾರ್ಟನ ಮತವು ಗ್ರಾಹ್ಯವಾಗುವುದಿಲ್ಲ. ಈ ತೊಡಕನ್ನು ಜೈನದರ್ಶನವು ಬಿಡಿಸಿದೆ ಎಂಬುದು ಕೆಲವರ ಅಭಿಮತ. ಆತ್ಮ ಪ್ರದೇಶದಲ್ಲಿ ಉಂಟಾಗುವ ರಾಗಾದಿ ಭಾವನೆಗಳಿಂದಲೇ ಕರ್ಮ ಬಂಧಿಸುವುದು. ಈ ಕರ್ಮ ಬಂಧನವು ಸಂಸಾರಕ್ಕೆ ಕಾರಣವೆಂಬುದು ಜೈನರ ಅಭಿಪ್ರಾಯ.

ಡೇಕಾರ್ಟನು ಎರಡಾಗಿ ಒಡೆದ ವಿಶ್ವವನ್ನು ಒಂದು ಗೂಡಿಸಲು ಅನೇಕ ದಾರ್ಶನಿಕರು ಪ್ರಯತ್ನಿಸಿದ್ದುಂಟು. ಅವರಲ್ಲಿ ಜಡದಿಂದ ಜೀವ ಹುಟ್ಟಿತೆನ್ನುವ ವಿಚಾರದವರೂ ಹಲವರಿದ್ದಾರೆ. ಈ ವಿಚಾರ ಪದ್ಧತಿಯು ಚಾರ್ವಾಕದ ದರ್ಶನವನ್ನು ಬಹುಮಟ್ಟಿಗೆ ಹೋಲುವುದು. ಆದರೆ, ಈ ವಾದಕ್ಕೆ ವೈಜ್ಞಾನಿಕ ದೃಷ್ಟಿಯಿಂದ ಸಮರ್ಥನವಿಲ್ಲ. ಪ್ಯಾಶ್ಚರನು ಭೌತವಸ್ತುಗಳಿಂದ ಜೀವಾಣುಗಳನ್ನು ತಯಾರಿಸಬೇಕೆಂದು ಏಳು ವರುಷಗಳವರೆಗೆ ಪ್ರಯೋಗ ನಡೆಸಿ, ಅಯಶಸ್ವಿಯಾದನು. ಅವನ ತರುವಾಯ ಹಲವರು ಪ್ರಯೋಗ ಮಾಡಿದರೂ ಇನ್ನೂ ಅದು ಸಿದ್ಧಿಸಿಲ್ಲ. ಆದರಿಂದ ಸರ್ ವಿಲಿಯಂ ಹಾರ್ವೆ, ಜೆ. ಎಸ್. ಹಾಲ್ಡೇನ್ ಎಂಬ ಪ್ರಸಿದ್ಧ ಜೀವಶಾಸ್ತ್ರಜ್ಞರು, ಜೀವಿಯಿಂದ ಜೀವ— ಅಣುವಿನಿಂದ ಅಣು–ಹುಟ್ಟುವುದೇ ಹೊರತಾಗಿ ಅಜೀವ ವಸ್ತುವಿನಿಂದ ಜೀವವಸ್ತುವನ್ನು ಪಡೆಯುವುದು ಅಸಾಧ್ಯವೆಂದು ಸಾರಿದ್ದಾರೆ. ಇದೇ ಮಾತನ್ನು ಜೈನದರ್ಶನವು ಎಂದೋ ತೀರ್ಮಾನಿಸಿ ಬಿಟ್ಟಿದೆ. ಈ ರೀತಿಯಾಗಿ ಡೇಕಾರ್ಟನ ದ್ವೈತ ಸಿದ್ಧಾಂತವು ಅನೇಕ ವಿಜ್ಞಾನಿಗಳಲ್ಲಿ, ವಿಚಾರವಂತರಲ್ಲಿ ಒಂದು ವಿಚಾರ ಕ್ರಾಂತಿಯನ್ನುಂಟು ಮಾಡಿದ್ದರಿಂದ ಅದು ಅವನಿಗೆ ಆಧುನಿಕ ತತ್ವ ಶಾಸ್ತ್ರದ ಜನಕ ಎಂಬ ಬಿರುದನ್ನು ತಂದು ಕೊಟ್ಟಿತು.

ಫ್ರಾನ್ಸಿನ ಟುರೇನ್ ಸಮೀಪದಲ್ಲಿ ಲಹಾಯೆ ಎಂಬಲ್ಲಿ 31.3.1596 ರಂದು ಜನಿಸಿದ ರನೇ ಡೇಕಾರ್ಟ (1596-1650)ನು ತತ್ವಜ್ಞಾನಿಯಷ್ಟೇ ಅಲ್ಲದೆ ಗಣಿತಜ್ಞನೂ ಹೌದು. ಈತನ ತಂದೆ ಜೋಕಿಮ್ ಬ್ರಿಟಾಗ್ನೆ ತಕ್ಕಮಟ್ಟಿಗೆ ಧನಿಕನಾದುದರಿಂದ ಮಗನಿಗೆ ಒಳ್ಳೆಯ ವಿದ್ಯಾಭ್ಯಾಸ ಕೊಡಿಸಿದ. ಪ್ರೌಢವ್ಯಾಸಂಗಕ್ಕಾಗಿ ಪ್ಯಾರಿಸ್ ನಗರಕ್ಕೆ ಬಂದ ಡೇಕಾರ್ಟನು ರೇಖಾಗಣಿತದಲ್ಲಿ ಆಸಕ್ತಿ ವಹಿಸಿದ. ಶಾಸ್ತ್ರ ಶೋಧನೆಗೆ ಹಾಲೆಂಡ್ ದೇಶ ಅನುಕೂಲವೆಂದು ಯೋಚಿಸಿ, 1628ರಿಂದ 49 ರವರೆಗೆ ಹಾಲೆಂಡಿನಲ್ಲಿ ನೆಲಸಿದ ಈತ ಲೆಮಾಂಡೆ ಎಂಬ ಗ್ರಂಥವನ್ನು 1629 ರಲ್ಲಿ ಬರೆಯಲಾರಂಭಿಸಿ 1633ರಲ್ಲಿ ಮುಗಿಸಿದ. ಗೆಲಿಲಿಯೊನಿಗೆ ಆದ ಶಾಸ್ತಿಯನ್ನು ತಿಳಿದ ಈತ ಅದನ್ನು ಪ್ರಕಟಿಸಲಿಲ್ಲ. ಅವನು ತೀರಿಹೋದ ಬಳಿಕ ಪ್ರಕಟವಾಯಿತು.

ಬಿ. ಆರ್. ಅನಂತನ್
ಡಿ. ಎಂ. ಬಸವರಾಜ

ಸಹಕಾರ—ತತ್ತ್ವ ಮತ್ತು ಅನುಷ್ಠಾನ

ಪ್ರಸ್ತಾವನೆ

ಸಹಕಾರ ಮನೋಭಾವ ಎಲ್ಲ ಸಮಾಜಗಳಲ್ಲಿಯೂ ಕಂಡುಬರುವ ಒಂದು ಮುಖ್ಯ ಅಂಶ. ಪರಸ್ಪರ ಸಹಕಾರದಿಂದ ಯಾವುದನ್ನಾದರೂ ಸಾಧಿಸಬಹುದೆಂಬುದು ಆದಿಕಾಲದಿಂದಲೂ ಕಂಡುಬಂದಿರುವ ನಂಬಿಕೆ. ವೇದಗಳ ಕಾಲದಿಂದಲೂ ಸಹಕಾರದ ತತ್ವಕ್ಕೆ ನಮ್ಮ ಸಮಾಜ ಪ್ರಾಮುಖ್ಯತೆಯನ್ನಿತ್ತಿರುವುದು ತಿಳಿದದ್ದೇ. ಸಮಾಜದ ಸರ್ವತೋಮುಖ ಬೆಳವಣಿಗೆಗೆ ಸಹಕಾರ ಅತ್ಯಂತ ಪ್ರಮುಖವಾದ ಮಾರ್ಗ ಎಂದು ನಂಬಿದ್ದ ಸಮಾಜದ ರಚನೆಯನ್ನು ಪ್ರಾಚೀನ ಭಾರತದ ಉಲ್ಲೇಖಗಳಲ್ಲಿ ಕಾಣಬಹುದು. ಕೌಟಿಲ್ಯನ ಅರ್ಥಶಾಸ್ತ್ರದಲ್ಲಿಯೂ ಕೂಡ ಸಹಕಾರದ ಪ್ರಾಮುಖ್ಯತೆಯನ್ನು ಒತ್ತಿ ಹೇಳಲಾಗಿದೆ, "ಯಾರು ಸಹಕಾರೀ ಸಂಘ ಸಂಸ್ಥೆಗಳಿಂದ ದೂರವಿರುತ್ತಾರೋ ಅಂತಹವರು ಕನಿಷ್ಠ ಅವರ ಸೇವಕರನ್ನು ಅಗಲಿ ಮತ್ತು ಎತ್ತು ಗಾಡಿಗಳನ್ನು ಸಮಾಜದ ಕೆಲಸಕ್ಕಾಗಿ ಕಳಿಸಿಕೊಡಬೇಕು ಮತ್ತು ಲಾಭದಲ್ಲಿ ಪಾಲನ್ನು ಕೇಳದೆ, ಖರ್ಚಿಗಾಗಿ ತಮ್ಮ ಪಾಲನ್ನು ನೀಡಬೇಕು" ಎಂಬುದಾಗಿ ಕೌಟಿಲ್ಯನು ತನ್ನ 'ಅರ್ಥಶಾಸ್ತ್ರ'ದಲ್ಲಿ ಪ್ರತಿಪಾದಿಸಿದ್ದಾನೆ.

ಅರ್ಥ ವಿವರಣೆ

ಸಾಮಾನ್ಯ ಅರ್ಥದಲ್ಲಿ ಸಹಕಾರ ಎಂದರೆ, ಪರಸ್ಪರ ಹೊಂದಾಣಿಕೆ ಅಥವಾ ಕೂಡಿ ಕೆಲಸ ಮಾಡುವುದು ಎಂದರ್ಥ. 'ಸಹಕಾರ' ಎಂಬ ಪದಕ್ಕೆ ಅನೇಕಾನೇಕ ವಿವರಣೆಗಳನ್ನು ವಿದ್ವಾಂಸರು ನೀಡಿದ್ದಾರೆ. ಆದರೆ ಮುಖ್ಯವಾಗಿ, ಸರ್ ಹೊರೇಸ್ ಪ್ಲಂಕೆಟ್‌ನ ಪ್ರಕಾರ ಸಹಕಾರ ಎಂದರೆ "ಒಂದು ಸಂಸ್ಥೆಯ ಮುಖಾಂತರ ಸ್ವಸಹಾಯ". ಶ್ರೀ ಹರ್ಬರ್ಟ್ ಕ್ಯಾಲ್‌ವರ್ಟ್ ಹೇಳುವಂತೆ ಸಹಕಾರ ಎಂದರೆ, "ವ್ಯಕ್ತಿಗಳು ಸ್ವಯಂ ಪ್ರೇರಿತರಾಗಿ, ಸಮಾನತೆಯ ಆಧಾರದ ಮೇಲೆ, ಮಾನವ ಕುಲದ ಆರ್ಥಿಕ ಉದ್ಧಾರ

ಕ್ಕಾಗಿ ಒಂದೆಡೆ ಸೇರುವ ಸಂಸ್ಥೆ". ವಿಶಾಲವಾದ ಅರ್ಥದಲ್ಲಿ ಹೇಳುವುದಾದರೆ, ಪರಸ್ಪರ ಒಳಿತಿಗಾಗಿ ಸ್ವಯಂಪ್ರೇರಣೆಯಿಂದ ಒಂದುಗೂಡುವ ವ್ಯವಸ್ಥೆಯೇ ಸಹಕಾರ.

ಪ್ರಾಮುಖ್ಯತೆ

"ಮಾನವನ ಒಳಿತಿಗಾಗಿ ಸಹಕಾರ ತತ್ವ ನೀಡಿದ ಕಾಣಿಕೆಯ ಆಧಾರದ ಮೇಲೆ ತತ್ವದ ಜಯಾಪಜಯಗಳನ್ನು ನಿರ್ಧರಿಸಲಾಗುತ್ತದೆ. ಕೇವಲ ಬಂಡವಾಳದ ಆಧಾರದ ಮೇಲೆ ನಿಂತಿರುವ ಸಮಾಜ, ಮಾನವನ ಗೌರವ, ಘನತೆ ಮತ್ತು ಸಮಾನತೆಯ ಆಧಾರದ ಮೇಲೆ ಸ್ಥಾಪಿತವಾಗುವ ಸಮಾಜಕ್ಕಾಗಿ ಎದುರುನೋಡುತ್ತಿದೆ. ಸಹಕಾರೀ ಆಂದೋಲನ ತನ್ನ ನಿಜವಾದ ರೂಪದಲ್ಲಿ ಅನುಷ್ಠಾನಕ್ಕೆ ಬಂದದ್ದೇ ಆದರೆ, ಮನುಷ್ಯ ಆರ್ಥಿಕ ಸ್ಥಿತಿಯ ಗುಲಾಮನಲ್ಲ, ಆದರೆ ಅದರ ಸೂತ್ರಧಾರ ಎಂಬುದು ಸಾಬೀತಾಗುತ್ತದೆ. ಕೇವಲ ಸಮಾಜವೇ ಅಲ್ಲದೆ ರಾಷ್ಟ್ರಗಳೂ ಸಹ ಒಂದಾಗಿ ಬಾಳಬಹುದು ಎಂಬುದನ್ನು ದೃಢಪಡಿಸುವುದೇ ಸಹಕಾರೀ ಆಂದೋಳನದ ಮುಖ್ಯ ಉದ್ದೇಶವಾಗಿದೆ" ಎಂದು ಹೇಳುತ್ತಾ ಅಂತರರಾಷ್ಟ್ರೀಯ ಸಹಕಾರೀ ಒಕ್ಕೂಟ ತನ್ನ ವರದಿಯನ್ನು ಮುಕ್ತಾಯಗೊಳಿಸುತ್ತದೆ. ಸಹಕಾರೀ ಆಂದೋಲನದ ಬಗ್ಗೆ ಅಲ್ಪ ಪ್ರಮಾಣದ ಕಳಕಳಿ ಇರುವವರೂ ಸಹ ಈ ಹೇಳಿಕೆಯನ್ನು ಒಂದು ಎಚ್ಚರಿಕೆ ಎಂದು ಪರಿಗಣಿಸಬೇಕು.

ಬಂಡವಾಳಶಾಹಿ ಮತ್ತು ಸಮಾಜವಾದೀ ವ್ಯವಸ್ಥೆಗಳೆಂಬ ಎರಡು ವಿರುದ್ಧ ವ್ಯವಸ್ಥೆಗಳನ್ನು ಸಮನ್ವಯಗೊಳಿಸಿ ಒಂದು ಹೊಸ ವ್ಯವಸ್ಥೆಯನ್ನು ರೂಪಿಸುವುದೇ ಸಹಕಾರದ ಗುರಿ. ಇದು ಮನುಷ್ಯನಲ್ಲಿರುವ ಅಸಮಾನತೆಯನ್ನು ಹೋಗಲಾಡಿಸಿ ನ್ಯಾಯ, ಸ್ವಾತಂತ್ರ್ಯ ಮತ್ತು ಸಮಾನತೆಯ ಆಧಾರದ ಮೇಲೆ ವ್ಯಕ್ತಿಗತ ಹಕ್ಕನ್ನು ನೀಡುವ, ಮುಖ್ಯವಾಗಿ ಆರ್ಥಿಕವಾಗಿ ಬಲಾಢ್ಯರಾದವರಿಂದ ದುರ್ಬಲರ ಶೋಷಣೆಯನ್ನು ತಡೆಗಟ್ಟುವ ಒಂದು ವ್ಯವಸ್ಥೆ. ಈ ದೃಷ್ಟಿಯಿಂದ ಸಹಕಾರೀ ಸಂಸ್ಥೆಗಳೆಂದರೆ ಕೇವಲ ಸಾಲ ಒದಗಿಸುವ ಬ್ಯಾಂಕಿಂಗ್ ವ್ಯವಸ್ಥೆಗಿಂತ ಭಿನ್ನವಾದ, ಆದರೆ ಪ್ರಾಮಾಣಿಕತೆ ಮತ್ತು ನೈತಿಕ ಬಲದ ಮೇಲೇ ನಿಲ್ಲಬಲ್ಲಂತಹ ಒಂದು ವಿಶೇಷ ಒಕ್ಕೂಟವೆಂದು ಪರಿಗಣಿಸಬಹುದು.

ಆಂದೋಲನದ ಆರಂಭ

ಸಹಕಾರೀ ಚಟುವಟಿಕೆ ಎಂದು ? ಎಲ್ಲಿ ? ಹೇಗೆ ? ಪ್ರಾರಂಭವಾಯಿತು ಎಂದು ಹೇಳುವುದು ಕಷ್ಟ. ಅತ್ಯಂತ ಪ್ರಾಚೀನವೆಂದು ತಿಳಿದಿರುವ ಗ್ರೀಕ್ ಮತ್ತು ರೋಮನ್ ನಾಗರಿಕತೆಗಳ ಕಾಲದಲ್ಲಿಯೂ ಸಹ ಇಂದಿನ ಸಹಕಾರೀ ಸಂಘ ಸಂಸ್ಥೆಗಳನ್ನು ಹೋಲುವ ಕೆಲವು ಸಂಸ್ಥೆಗಳಿದ್ದುವು ಎಂಬ ಅಂಶ ತಿಳಿದುಬಂದಿದೆ. ಇದೇ ರೀತಿ ಇಂಗ್ಲೆಂಡಿನಲ್ಲಿ ಸುಮಾರು 18ನೇ ಶತಮಾನದ ಆದಿ ಭಾಗದಲ್ಲಿ ಕೆಲವು ಸಹಕಾರೀ ಸಂಸ್ಥೆಗಳು ಪ್ರಾರಂಭವಾದವು. ಆದರೆ ಅನೇಕ ಕಾರಣಗಳಿಂದಾಗಿ ಅವು ಈ ಆಂದೋಲನದ ಮೇಲೆ ಯಾವ

ರೀತಿಯ ಪ್ರಭಾವವನ್ನು ಬೀರಲೂ ವಿಫಲವಾದುವು. ಆದುದರಿಂದ ಹದಿನೆಂಟನೇ ಶತಮಾನದ ಮಧ್ಯಭಾಗದಲ್ಲಿ ಪ್ರಾರಂಭವಾದ ಕೈಗಾರಿಕಾ ಕ್ರಾಂತಿಯೊಂದಿಗೇ ಸಹಕಾರೀ ಆಂದೋಲನವು ಪ್ರಾರಂಭವಾಯಿತು ಎಂದು ಹೇಳಬಹುದು. ಅಂದಿನಿಂದ ಇಂದಿನವರೆಗೆ ಆಂದೋಲನವು ಸುಧಾರಣೆಗಳೊಂದಿಗೆ, ಹೊಸ ಹೊಸ ಪ್ರಯೋಗಗಳ ಮೂಲಕ ಮುಂದುವರೆಯುತ್ತಿದೆ.

ಹದಿನೆಂಟನೇ ಶತಮಾನದ ಉತ್ತರಾರ್ಧದಲ್ಲಿ ಜರ್ಮನಿ ಮತ್ತು ಇಂಗ್ಲೆಂಡ್‌ಗಳಲ್ಲಿ ವ್ಯಾಪಕವಾಗಿ ಬೆಳೆದ ಸಹಕಾರೀ ಚಳುವಳಿ ಪ್ರಪಂಚದ ಇತರ ರಾಷ್ಟ್ರಗಳಲ್ಲೂ ನೆಲೆಯೂರಲು ಪ್ರಾರಂಭಿಸಿತು.

ಸಹಕಾರ ತತ್ವ ಅನುಷ್ಠಾನ-ಸರ್ಕಾರದ ಪಾತ್ರ

ಭಾರತದಲ್ಲಿ ಹತ್ತೊಂಭತ್ತನೇ ಶತಮಾನದಲ್ಲಿಯೇ ಸಹಕಾರೀ ಸಂಘ ಸಂಸ್ಥೆಗಳು ಇದ್ದುದನ್ನು ಕಾಣಬಹುದು. ಕರ್ನಾಟಕದಲ್ಲಿ (ಹಿಂದಿನ ವೈಭವಪೂರ್ಣ ಮೈಸೂರು). 1894ರ ಹೊತ್ತಿಗೇ ವ್ಯವಸಾಯ ಬ್ಯಾಂಕುಗಳು ಸ್ಥಾಪಿತವಾಗಿದ್ದವು. ಕಾನೂನುಬದ್ಧ ಸಹಕಾರೀ ಸಂಘವು 1904ರಲ್ಲಿ ಸ್ಥಾಪನೆಯಾದದ್ದನ್ನು ಕಾಣಬಹುದು. ಭಾರತದಲ್ಲಿ ಮೊದಲಿನಿಂದಲೂ ಸಹಕಾರೀ ಆಂದೋಲನ ಒಂದು ಸ್ವಯಂಪ್ರೇರಿತ ಚಳುವಳಿಯಾಗಿ ನಡೆಯಲೇ ಇಲ್ಲ. ಸಹಕಾರೀ ಚಳುವಳಿ ಸರ್ಕಾರದ ಒಂದು 'ನೀತಿಯಾಗಿ' ಬೆಳೆದು ಬಂದಿತೇ ವಿನಹ, ನೈಜ ಅರ್ಥದಲ್ಲಿ ಅದು ಜನಾಂದೋಲನವಾಗಿ ರೂಪುಗೊಳ್ಳಲೇ ಇಲ್ಲ. ಇದಕ್ಕೆ ಕಾರಣಗಳು ಅನೇಕ. ಈ ದೇಶದ ಜನ ಸಹಕಾರದ ಹಿಂದಿರುವ ನಿಜವಾದ ಕಳಕಳಿಯನ್ನು ಅರ್ಥಮಾಡಿಕೊಳ್ಳುವಲ್ಲಿ ವಿಫಲರಾದದ್ದೂ ಒಂದು. ಇದೇ ಪರಿಸ್ಥಿತಿ ಬೇರೆ ಬೇರೆ ರೂಪಗಳಲ್ಲಿ ಈಗಲೂ ಕಂಡು ಬರುತ್ತದೆ. ಪ್ರಾರಂಭದಿಂದಲೂ ಸಹಕಾರ ಎಂಬುದು ಸರಕಾರ ಜನಗಳ ಮೇಲೆ 'ಹೇರಿದ' ಒಂದು 'ಹೊರೆ' ಎಂದೇ ಜನತೆ ಭಾವಿಸಿದೆ. ಸರ್ಕಾರವೂ ಕೂಡ ಈ ಆಂದೋಲನವನ್ನು ಜನತೆಯ ಮೇಲೆ ಹೊರಿಸಿ, ನಿಯಂತ್ರಿಸಿ, ಸೀಮಿತಗೊಳಿಸಿಕೊಂಡೇ ಬಂದಿದೆ. ಹಾಗಾಗಿ ಉದಾತ್ತ ಧ್ಯೇಯಗಳನ್ನು ಹೊಂದಿದ್ದು ಸಾಮಾನ್ಯ ಜನರ ಒಳಿತಿಗಾಗಿ, ನ್ಯಾಯ, ಸ್ವಾತಂತ್ರ್ಯ, ಸಮಾನತೆಗಾಗಿ ರೂಪುಗೊಳ್ಳಬೇಕಾದ ಒಂದು ಜನಾಂದೋಲನ ಸರ್ಕಾರದ ಕಟ್ಟುಪಾಡುಗಳಿಗೆ ಒಳಪಟ್ಟು ಸರ್ಕಾರೀ ನೀತಿಯಾಗಿ ನಿಂತಿದೆ.

ಕೆಲವು ಕಾರಣಗಳು

ಈ ರೀತಿ ಸಹಕಾರೀ ಚಳುವಳಿ ಕೇವಲ ಸರ್ಕಾರೀ ನೀತಿಯಾಗಿ ನಿಲ್ಲಲು ಕೆಲವಾರು ಕಾರಣಗಳಿವೆ. ಆಂದೋಲನ ಆರಂಭಗೊಂಡ ನಂತರದಲ್ಲಿ ಯಾವುದೇ ನಾಗರಿಕ ಸರಕಾರವಾದರೂ ಸಹಕಾರೀ ಆಂದೋಲನದ ಬೆಳವಣಿಗೆಯನ್ನು ನಿರ್ಲಕ್ಷಿಸುವಂತಿರಲಿಲ್ಲ. ಅದರಲ್ಲೂ ಹೆಚ್ಚು ನಿರಕ್ಷರಕುಕ್ಷಿಗಳು, ಕಡು ಬಡವರು, ವ್ಯವಹಾರ ಜ್ಞಾನವಿಲ್ಲದ, ಕನಿಷ್ಠ

ಮಟ್ಟದ ಜೀವನ ನಡೆಸುವಂತಹ ಜನರಿಂದ ತುಂಬಿರುವ ಭಾರತ ಸಹಕಾರೀ ಆಂದೋಳನವನ್ನು ಕಡೆಗಣಿಸುವಂತೆಯೇ ಇರಲಿಲ್ಲ. ಹೆಚ್ಚಾಗಿ ಅನಕ್ಷರಸ್ಥರೇ ಇರುವಂತಹ ದೇಶದಲ್ಲಿ, ಅವರ ಏಳಿಗೆಗಾಗಿ ಸಹಕಾರಕ್ಕಿಂತ ಉತ್ತಮ ವ್ಯವಸ್ಥೆ ಸಿಗುವುದು ದುರ್ಲಭ. ಸಾಮಾನ್ಯ ಜನರ ಜೀವನ ಮಟ್ಟದ ಏರಿಕೆ, ಆರ್ಥಿಕ ಸುಧಾರಣೆ ಮತ್ತು ಅಕ್ಷರ ಜ್ಞಾನ ಪ್ರಚಾರಕ್ಕೆ ಸಹಕಾರೀ ಆಂದೋಲನವೇ ಹೆಚ್ಚು ಸೂಕ್ತವೆಂದು ಇತ್ತೀಚಿನ ವರ್ಷಗಳಲ್ಲಿ ಕಂಡು ಬಂದಿದೆ.

ವಿವಿಧ ಕ್ಷೇತ್ರಗಳಲ್ಲಿ ಈ ಆಂದೋಲನದ ಪಾತ್ರ

ಈ ಆಂದೋಲನ ಸಮಾಜದ ವಿವಿಧ ಕ್ಷೇತ್ರಗಳಲ್ಲಿ ತನ್ನ ಪ್ರಭಾವವನ್ನು ಬೀರಿದೆ. ಪುರಸ್ಕಾರ ಶಿಕ್ಷಣದಲ್ಲಂತೂ ಸಹಕಾರೀ ಚಳುವಳಿಯ ಪಾತ್ರ ಅತ್ಯಂತ ಮಹತ್ವವಾದುದು. ಸಹಕಾರದ ಸೂತ್ರ ಸಾಮಾನ್ಯ ಜನರಿಗೆ ಸುಲಭವಾಗಿ ಅರ್ಥವಾಗುತ್ತದೆ. ಸಹಕಾರೀ ಚಳುವಳಿಯಿಂದ ವ್ಯಾಪಾರ, ವ್ಯವಸಾಯಗಳ ಗುಣ ನಿಯಂತ್ರಣ, ಆ ಮೂಲಕ ರಾಜ್ಯದ-ರಾಷ್ಟ್ರದ ಗುಣ ನಿಯಂತ್ರಣ ಸಾಧ್ಯ. ಈ ಎಲ್ಲ ಕಾರಣಗಳಿಂದಾಗಿ ಮತ್ತು "ಸರ್ವೇಜನಾಃ ಸುಖಿನೋ ಭವಂತು" ಎಂಬ ತತ್ವದ ಅನುಷ್ಠಾನಕ್ಕಾಗಿ ಸರಕಾರ ಸಹಕಾರೀ ಚಳುವಳಿಯನ್ನು ಪೋಷಿಸಲು ಪ್ರಾರಂಭಿಸಿತು. ರಾಷ್ಟ್ರ ಪುನರ್ ನಿರ್ಮಾಣ ಕಾರ್ಯದಲ್ಲಿ ಮತ್ತು ಸಾಮಾನ್ಯ ಜನತೆಯ, ಸಾಮಾಜಿಕ-ಆರ್ಥಿಕ ಪ್ರಗತಿಯಲ್ಲಿ ಸಹಕಾರೀ ಆಂದೋಲನ ಮಹತ್ತರ ಪಾತ್ರವನ್ನು ವಹಿಸಬಹುದೆಂಬ ಅಂಶವನ್ನು ಎಲ್ಲ ಸರ್ಕಾರಗಳೂ ಮನಗಂಡಿವೆ. ಪ್ರಜಾಪ್ರಭುತ್ವವಾದೀ ರಾಷ್ಟ್ರಗಳೆಲ್ಲವೂ ಸಹಕಾರೀ ಚಳುವಳಿಯನ್ನು ಪ್ರಗತಿಯ ಮೂಲ ಮಂತ್ರವನ್ನಾಗಿ ಪರಿಗಣಿಸಿರುವುದು ಈ ವಿಧದ ಚಿಂತನೆಗೆ ಅತಿ ಮುಖ್ಯ ಕಾರಣ. ಜೊತೆಗೆ ನಿರಂತರವಾಗಿ ಕಾರ್ಮಿಕರು, ಕಾರ್ಮಿಕರಾಗಿಯೇ ಇರಬಹುದಾದಂತಹ ಇಂದಿನ ವ್ಯವಸ್ಥೆಯಲ್ಲಿ, ಅವರನ್ನು ಹಾಗೆಯೇ ಇರಗೊಟ್ಟರೆ, ಕ್ರಮೇಣ ಕಾರ್ಮಿಕ ಅಶಾಂತಿ ತಲೆದೋರಿ, ಕಾರ್ಮಿಕರು ಕಮ್ಯುನಿಸಂ ತತ್ವದ ಆಕರ್ಷಣೆಗೆ ಒಳಪಟ್ಟರೆ, ಎಲ್ಲಿ ಪ್ರಜಾಪ್ರಭುತ್ವ ವ್ಯವಸ್ಥೆ ಸೋಲುವುದೋ ಎಂಬ ಭಯ ಎಲ್ಲ ಪ್ರಜಾಪ್ರಭುತ್ವವಾದೀ ಸರಕಾರಗಳಲ್ಲೂ ಇದೆ. ಆದಕ್ಕಾಗಿ ಸಹಕಾರೀ ತತ್ವಗಳ ಆಧಾರದ ಮೇಲೆ ಕಾರ್ಮಿಕ ವರ್ಗಕ್ಕೂ ನ್ಯಾಯ, ಸ್ವಾತಂತ್ರ್ಯ, ಸಮಾನತೆಯ ಹಕ್ಕನ್ನು ನೀಡಿದಾಗ, ಕಾರ್ಮಿಕ ವರ್ಗ ಈಗಿನ ವ್ಯವಸ್ಥೆಯಲ್ಲಿ ತೃಪ್ತಿಪಟ್ಟು ಕೊಳ್ಳಬಹುದೆಂಬ ಎಣಿಕೆಯಿಂದಲೂ ಸರ್ಕಾರದ ಕೃಪಾಕಟಾಕ್ಷ ಸಹಕಾರೀ ಚಳುವಳಿಯ ಮೇಲೆ ಬಿದ್ದಿವೆ ಎಂದರೆ ತಪ್ಪಾಗಲಾರದು.

ಸರ್ಕಾರದ ಪಾತ್ರ

ಆದರೆ ಸಹಕಾರೀ ಆಂದೋಳನದಲ್ಲಿ ಸರ್ಕಾರದ ಪಾತ್ರ ಕೇವಲ ನಿಯಂತ್ರಣಕ್ಕೆ ಮಾತ್ರವಲ್ಲದೆ ಬೆಳವಣಿಗೆಗೆ ಸಹಾಯವಾಗುವಂತಹ ನೀತಿಯನ್ನು ಅನುಸರಿಸಬೇಕು. ಸಂಸ್ಥೆಗಳಲ್ಲಿ ಸರ್ಕಾರವನ್ನು ಪ್ರತಿನಿಧಿಸುವ ಅಧಿಕಾರಿಗಳು ಸಂಘಗಳ ಬೆಳವಣಿಗೆಗಾಗಿ

ತಮ್ಮ ಜ್ಞಾನ ಮತ್ತು ಅನುಭವಗಳನ್ನು ಕೊಡುಗೆಯಾಗಿ ನೀಡಬೇಕು. ಸರ್ಕಾರೀ ಅಧಿಕಾರಿಗಳಿಗೆ ಕಾನೂನು ಚೌಕಟ್ಟಿನಲ್ಲಿ ಅನೇಕ ಅಧಿಕಾರಗಳಿವೆ, ನಿಜ. ಆದರೆ ಅದರಿಂದ ಆಂದೋಲನ ಕುಂಠಿತವಾಗಬಾರದು. ಲೆಕ್ಕ ಪತ್ರ ಪರಿಶೋಧನೆ, ನಿಯಂತ್ರಣ ಅಧೀಕ್ಷಣೆ ಮುಂತಾದುವುಗಳು ಸಹಕಾರೀ ಚಳುವಳಿಯ ಬೆಳವಣಿಗೆಗೆ ಪೂರಕವಾಗಿರಬೇಕು. ಸದ್ಯದ ಪರಿಸ್ಥಿತಿಯಲ್ಲಿ ಕೇವಲ ನಿಯಂತ್ರಣಕ್ಕಾಗಿ ಮಾತ್ರ ಸರ್ಕಾರ ತನ್ನ ಪಾತ್ರವನ್ನು ಮುಡಿಪಾಗಿಟ್ಟಿರುವ ಹಾಗೆ ಕಾಣುತ್ತದೆ.

ಇತ್ತೀಚಿನ ವರ್ಷಗಳಲ್ಲಿ ಅವರಲ್ಲೂ ಮುಖ್ಯವಾಗಿ ಪಂಚವಾರ್ಷಿಕ ಯೋಜನೆಗಳ ಅನುಷ್ಠಾನದೊಂದಿಗೆ ಸಹಕಾರಿ ಸಂಘಗಳಿಗೆ ಸರ್ಕಾರ ನೀಡುವ ಸಹಾಯಧನ, ಚಳುವಳಿಯ ಬೆಳವಣಿಗೆಗೆ ಒಂದು ರೀತಿಯಲ್ಲಿ ಸಹಾಯಕವಾಗಿದೆ. ಆದರೆ ಈ ಸಹಾಯಧನವೇ ಸಹಕಾರ ಚಳುವಳಿಯ ಮೂಲ ಮಂತ್ರವಾದ "ಸ್ವಯಂಪ್ರೇರಿತ ಸಂಘಟನೆ"ಗೆ ಮಾರಕವಾಗಬಹುದು. ಸರಕಾರ ತನ್ನ ಅಧಿಕಾರದ ಅಂಕುಶವನ್ನು ಸಹಾಯಧನ ಪಡೆಯುವ ಸಹಕಾರ ಸಂಘಗಳ ನೆತ್ತಿಯ ಮೇಲೆ ಸದಾ ಒತ್ತುತ್ತೀ ಇರುವುದು ಈ ಪರಿಸ್ಥಿತಿಗೆ ಮುಖ್ಯ ಕಾರಣ. ಸರ್ಕಾರದ ಹಿಡಿತ ಸಹಕಾರ ಚಳುವಳಿಯ ಮೇಲೆ ಎಷ್ಟು ತೀವ್ರವಾಗಿದೆ ಎಂಬುದನ್ನು ವಿಶ್ಲೇಷಿಸಿದರೆ ಒಂದು ಬಗೆಯ ಅಳುಕುಂಟಾಗುತ್ತದೆ. ಇತ್ತೀಚೆಗೆ ಕರ್ನಾಟಕದಲ್ಲಿ ನಡೆಯುತ್ತಿರುವ ರೈತ ಚಳುವಳಿಯ ಮುಖ್ಯ ಬೇಡಿಕೆಗಳಲ್ಲಿ ಒಂದಾದ ಸಹಕಾರೀ ಸಾಲದ ಮರು ಪಾವತಿ ರದ್ದು ಬೇಡಿಕೆ ನೋಡಿದರೆ ಸಹಕಾರೀ ಸಂಘಗಳ ಮೇಲೆ ಸರ್ಕಾರದ ಹಿಡಿತ ಎಷ್ಟಿದೆ ಎಂಬುದು ಗೊತ್ತಾಗುತ್ತದೆ. ಈ ರೀತಿಯ ಬೇಡಿಕೆಯನ್ನು ಮುಂದಿಟ್ಟಿರುವ ರೈತರಾಗಲೀ, ಪ್ರಜೆಗಳಾಗಲೀ, ಸರ್ಕಾರವಾಗಲೀ, ಸಹಕಾರಿ ಸಂಘಗಳು ಸ್ವಯಂಪ್ರೇರಿತವಾಗಿ ಸಂಘಟಿತವಾದ ಸಂಸ್ಥೆಗಳೆಂದು ತಿಳಿದಂತಿಲ್ಲ. ಸಹಕಾರೀ ಸಂಘಗಳೂ ಕೂಡ ಇತರ ಸರ್ಕಾರೀ ಕಛೇರಿಗಳಂತೆ ಸಾಲ ಹಂಚುವ ಅಂಗಗಳೆಂದು ಭಾವಿಸಿರುವಂತಿದೆ. ರೈತರ ಈ ಬೇಡಿಕೆಯ ನ್ಯಾಯಾನ್ಯಾಯಗಳ ಮಾತು ಇಲ್ಲಿ ಅಪ್ರಸ್ತುತ. ಆದರೆ ಸಹಕಾರೀ ಸಂಘಗಳ ಮೇಲಿನ ಸರ್ಕಾರದ ಹಿಡಿತ ಸಹಕಾರೀ ಆಂದೋಳನಕ್ಕೆ ಮಾರಕವೆಂಬುದು ಮಾತ್ರ ಸರ್ವವಿಧಿತ. ರಾಜ್ಯ ರೈತರ ಬೇಡಿಕೆಯನ್ನು ಪೂರ್ಣಪ್ರಮಾಣದಲ್ಲಿ ಒಪ್ಪದ ಸರ್ಕಾರವು, ಸಹಕಾರೀ ಸಂಘಗಳ ಸಾಲ ಮರು ಪಾವತಿ ವಿಷಯದಲ್ಲಿ ಕೆಲವು ರಿಯಾಯಿತಿಗಳನ್ನು ತೋರಿತು. 1983 ನೇ ಜೂನ್ 30ನೇ ತಾರೀಖಿನೊಳಗೆ ಸಹಕಾರೀ ಸಂಘಗಳ ಸಾಲ ಮರು ಪಾವತಿ ಮಾಡುವಂತಹ ರೈತರಿಗೆ, ಸಾಲದ ಮೇಲಿನ ಬಡ್ಡಿ ಮತ್ತು ಸುಸ್ತಿ ಬಡ್ಡಿಯನ್ನು ಮನ್ನಾ ಮಾಡುವುದಾಗಿ ಸರ್ಕಾರ ಘೋಷಿಸಿತು. ಈ ರಿಯಾಯಿತಿಯನ್ನು ಉಪಯೋಗಿಸಿ ಕೊಂಡ ರೈತರು, ಇದಕ್ಕೆ ರೈತ ಸಂಘದ ವಿರೋಧವಿದ್ದರೂ, ಒಟ್ಟು 269 ಕೋಟಿ ರೂಪಾಯಿಗಳ ಸಹಕಾರ ಸಂಘ ಸಾಲ ಬಾಕಿಯಲ್ಲಿ ಸುಮಾರು 100 ಕೋಟಿ ರೂಪಾಯಿಗಳನ್ನು ಮರು ಪಾವತಿ ಮಾಡಿದರು. ಈ ರಿಯಾಯಿತಿಯಿಂದಾಗಿ ಸಹಕಾರ ಸಂಘಗಳಿಗೆ ಬಡ್ಡಿ ರೂಪದಲ್ಲಿ ಬರಬೇಕಾಗಿದ್ದ ಸುಮಾರು ಹದಿನೆಂಟು ಕೋಟಿ ರೂಪಾಯಿಗಳು ಮರು ಪಾವತಿಯಾಗಿಲ್ಲ. ಅಂದರೆ

ಸಹಕಾರ ಸಂಘಗಳ ಒಟ್ಟು ಸಾಲದ ಮೊತ್ತದಲ್ಲಿ ಮೂರನೇ ಒಂದು ಭಾಗದಷ್ಟು ವಸೂಲಾದಂತೆ ಆಯಿತು. ಈ ರೀತಿಯಾಗಿ ಸರ್ಕಾರವೇ ಸಹಕಾರ ಸಂಘಗಳ ಆಗು ಹೋಗುಗಳನ್ನು ನಿರ್ದೇಶಿಸುವುದಾದರೆ, ಸಹಕಾರ ಚಳುವಳಿ ಒಂದು ಜನಾಂದೋಳನ ವಾಗಿ ಕಾರ್ಯನಿರ್ವಹಿಸುವುದು, ಅಸಾಧ್ಯದ ಮಾತು ಇದು ಸಹಕಾರದ ಮೂಲ ತತ್ವಕ್ಕೆ ವಿರೋಧವಾದದ್ದು.

ಸುಮಾರು ನಾಲ್ಕು ಕೋಟಿ ಸದಸ್ಯತ್ವ ಹೊಂದಿರುವ ಸಹಕಾರೀ ಆಂದೋಲನ ಯಶಸ್ವಿಯಾಗಬೇಕಾದರೆ, ಚಳುವಳಿಯ ಹಿಂದಿರುವ ಸಾಮಾಜಿಕ ಮತ್ತು ಆರ್ಥಿಕ ಕಳಕಳಿಯನ್ನು ಅರ್ಥಮಾಡಿಕೊಳ್ಳಬೇಕು. ಒಟ್ಟು ಜನತೆಯು, ಮುಖ್ಯವಾಗಿ ಗ್ರಾಮೀಣ ಜನತೆಯು, ಕಡುಬಡವರ, ಶೋಷಿತರ ಏಳಿಗೆಗಾಗಿ ಆರ್ಥಿಕ ಮತ್ತು ಸಾಮಾಜಿಕ ಸಮಾನತೆ ಗಾಗಿ ಸಹಕಾರೀ ಆಂದೋಳನವನ್ನು ಅರ್ಥಮಾಡಿಕೊಂಡು ಅನುಷ್ಠಾನಕ್ಕೆ ತರಲು ಪ್ರಯತ್ನಿಸಬೇಕು. ಸಹಕಾರಿ ಆಂದೋಲನ ವಿಫಲತೆಯಿಂದ ಸಫಲತೆಯೆಡೆಗೆ ಸಾಗ ಬೇಕು. 1954ರಲ್ಲಿ ಭಾರತೀಯ ರಿಸರ್ವ್ ಬ್ಯಾಂಕ್ ನೇಮಿಸಿದ, ಅಖಿಲ ಭಾರತ ಗ್ರಾಮೀಣ ಸಾಲ ಪುನರ್ ವಿಮರ್ಶಾ ಸಮಿತಿ ಹೇಳಿದ "ಸಹಕಾರ ಚಳುವಳಿ ಸೋತಿದೆ ಆದರೆ ಸಹಕಾರ ಚಳುವಳಿ ಗೆಲ್ಲಲೇಬೇಕು" ಎಂಬ ಮಾತುಗಳು ಇಂದಿಗೂ ಸತ್ಯ.

ಗ್ರಂಥ ಋಣ

1. ಎವಲ್ಯುಷನ್ ಅಫ್ ಕೋಆಪರೇಟಿವ್ ಥಾಟ್—ಕೆ.ಕೆ. ಸಕ್ಸೇನ
2. ದಿ ವರ್ಲ್ಡ್ ಕೋಆಪರೇಟಿವ್ ಮೂವ್‌ಮೆಂಟ್—ಎಂ.ಡಿಗ್‌ಬಿ.
3. ದಿ ಕೋಆಪರೇಟಿವ್ ಮೂವ್‌ಮೆಂಟ್ ಇನ್ ಇಂಡಿಯ—ಇ.ಎಂ. ಹ್ಯೂಗ್
4. ಥಿಯರಿ ಅಂಡ್ ಪ್ರಾಕ್ಟೀಸ್ ಆಫ್ ಕೋಆಪರೇಷನ್ ಇನ್ ಇಂಡಿಯಾ ಅಂಡ್ ಅಬ್ರಾಡ್—ಪ್ರೊ.ಕೆ.ಆರ್. ಕುಲಕರ್ಣಿ
5. ಕೋಆಪರೇಟಿವ್ ಮಾರ್ಕೆಟಿಂಗ್ ಲಿಂಕಿಂಗ್ ವಿತ್ ಕ್ರೆಡಿಟ್ ಇನ್ ಕರ್ನಾಟಕ —ಪ್ರೊ.ಸಿ.ಎಂ. ಮುನಿರಾಮಪ್ಪ

ಕೆ. ಯಶೋಧರ

ಕ್ರಿಯಾತ್ಮಕ ಸಂಶೋಧನೆ ಅಥವಾ ಕಾರ್ಯಾರ್ಥ ಸಂಶೋಧನೆ

ಪುರಾತನ ಕಾಲದಿಂದಲೂ ಇಂದಿನವರೆಗೆ ನಡೆದು ಬಂದಿರುವ ಶಿಕ್ಷಣದ ಹಾದಿಯಲ್ಲಿ ಹಲವಾರು ಸುಧಾರಣೆಗಳು ಮಿಂಚಿ ಮಿಣುಕಿ ಮಾಯವಾಗಿ ಮತ್ತೆ ಕೆಲವು ಸುಧಾರಣೆಗಳು ತಲೆಯೆತ್ತಿ ಮೆರೆದು ಮೈಲಿಗಲ್ಲುಗಳಾಗಿ ಉಳಿದರೆ, ಹಲವಾರು ಸುಧಾರಣೆಗಳು ಕಾಲಿಡುತ್ತಲಿದ್ದು ಶಿಕ್ಷಣ ಕ್ಷೇತ್ರದಲ್ಲಿ ಗಣನೀಯವಾದ ಬದಲಾವಣೆಗೆ ಕಾರಣೀಭೂತವಾಗಿವೆ. ಶಿಕ್ಷಣ ಕ್ಷೇತ್ರದ ವಿವಿಧ ವಿಭಾಗಗಳು ವಿಶಿಷ್ಟ ರೀತಿಯಲ್ಲಿ ವಿಕಾಸ ಹೊಂದಿರುವುದು ಗಮನಾರ್ಹವೇ ಸರಿ. ಇಂದು ಶಿಕ್ಷಣದ ಅರ್ಥ, ವ್ಯಾಪ್ತಿ, ಗುರಿಗಳು ; ಬೋಧನೆಯ ಪರಿಕಲ್ಪನೆ, ಲಕ್ಷಣಗಳು, ತಂತ್ರಗಳು ; ಪಠ್ಯವಸ್ತು, ಮೌಲ್ಯಮಾಪನ, ಶಿಕ್ಷಣ ಕ್ರಮ ಇತ್ಯಾದಿ ಎಲ್ಲಾ ವಿಷಯಗಳಲ್ಲಿಯೂ ಹೊಸ ಹೊಸ ರೀತಿಯ ವಿವರಣೆಗಳು, ಸಿದ್ಧಾಂತಗಳು ಬೆಳೆದು ಬರಲು ಕಾರಣವೆಂದರೆ ಶೈಕ್ಷಣಿಕ ಮನೋವಿಜ್ಞಾನ, ಶೈಕ್ಷಣಿಕ ತತ್ವಶಾಸ್ತ್ರ, ಶೈಕ್ಷಣಿಕ ಸಮಾಜಶಾಸ್ತ್ರ ಇತ್ಯಾದಿ ವಿಷಯ ಕ್ಷೇತ್ರಗಳಲ್ಲಿ ಕಂಡು ಬರುವ ಸುಧಾರಣೆಗಳೇ ಎನ್ನಬಹುದು. ಈ ಸುಧಾರಣೆಗಳೆಲ್ಲಕ್ಕೂ ಮೂಲಾಧಾರ ಸಂಶೋಧನೆ ಎಂದರೆ ತಪ್ಪಾಗಲಾರದು. ಸಂಶೋಧನೆಯ ಫಲವಾಗಿ ಶಿಕ್ಷಣ ಕ್ಷೇತ್ರ ಸುಧಾರಿಸಿದ್ದಲ್ಲದೆ ಬಗೆಹರಿಸಬೇಕಾದ ಸಮಸ್ಯೆಗಳು ಬಹುವಾಗಿವೆ.

ಸಂಶೋಧನಾಕ್ರಮದ ಅರಿವು ಸನಾತನವಾದರೂ ಇತ್ತೀಚೆಗೆ ಶಿಕ್ಷಣದಲ್ಲಿ ಯಾವುದೇ ಉದ್ದೇಶ ಸಾಧನೆಗೆ ಸೂಕ್ತವಾದ ಕ್ರಮ ವಿಧಾನಗಳ ನಿರ್ಣಯಕ್ಕೆ, ಯಾವುದೇ ಸಮಸ್ಯೆಗಳ ಪರಿಹಾರಕ್ರಮಗಳಿಗೆ ಈ ಸಂಶೋಧನಾ ಕ್ರಮ ಅತ್ಯವಶ್ಯಕ ಹಾಗೂ ಅನಿವಾರ್ಯ ಎಂಬ ಅಂಶ ಮನದಟ್ಟಾಗಿದೆ. ಶಾಲಾಕಾಲೇಜು ಶಿಕ್ಷಣ ವ್ಯವಸ್ಥೆಯಲ್ಲಿ, ಶೈಕ್ಷಣಿಕ ಆಡಳಿತ ನಿರ್ವಹಣೆಯಲ್ಲಿ ಎದುರಿಸಬೇಕಾವ ಬಹುತೇಕವಾದ ದೈನಂದಿನ ಅಥವಾ ತತ್ಕಾಲಿಕ ಸಮಸ್ಯೆಗಳಿಗೆ ಸೂಕ್ತವಾದ ಪರಿಹಾರ ಮಾರ್ಗಗಳನ್ನು ವಸ್ತುನಿಷ್ಠವಾದ ನಿದರ್ಶನಗಳ ಸಹಾಯದಿಂದ ಕಂಡುಕೊಳ್ಳಲೂ ಆಧುನಿಕ ಶಿಕ್ಷಣ ಕ್ರಮಕ್ಕೆ ಹೊಂದಿಕೆಯಾಗುವಂತೆ ಶಾಲಾ ಶೈಕ್ಷಣಿಕ ಚಟುವಟಿಕೆಗಳನ್ನು ರೂಪಿಸಲೂ ಸಂಶೋಧನಾತಂತ್ರ ಫಲಪ್ರದವಾದ ಮಾಧ್ಯಮವೆಂಬುದು ಸುಸ್ಪಷ್ಟವಾಗಿದೆ. ಆದರೆ

'ಸಂಶೋಧನೆ' ಎಂದರೇನು ಎಂಬ ಸ್ಪಷ್ಟ ಪರಿಕಲ್ಪನೆ ಹೊಂದಿದ್ದು ಕ್ರಮಬದ್ಧವಾಗಿ ಸಂಶೋಧನೆ ಕೈಗೊಳ್ಳುವುದು ದೀರ್ಘಕಾಲಿಕವೂ, ವ್ಯವಸ್ಥಿತವೂ ವೆಚ್ಚದಾಯಕವೂ ಆದುದರಿಂದ ಕಷ್ಟಸಾಧ್ಯವಾದ ಕ್ರಿಯೆಯೇ ಸರಿ. ಅಂತೆಯೇ ದೈನಂದಿನ ಸಾಧಾರಣ ಶೈಕ್ಷಣಿಕ ಸಮಸ್ಯೆಗಳ ಅಧ್ಯಯನಕ್ಕೆ ಈ ಸಾಂಪ್ರದಾಯಿಕ ಕ್ರಮವನ್ನನುಸರಿಸುವುದು ದುಸ್ತರವೆನಿಸುತ್ತದೆ.

ಈ ಸಾಂಪ್ರದಾಯಿಕ ಅಥವಾ ಮೂಲಭೂತ ಶೈಕ್ಷಣಿಕ ಸಂಶೋಧನೆ ಶಿಕ್ಷಣ ಕ್ರಮ ಹಾಗೂ ರೂಢಿಗಳ ಮೇಲೆ ಪರಿಣಾಮಕಾರೀ ಪ್ರಭಾವ ಬೀರಲು ಅಸಮರ್ಥವಾಗಿದೆ ಎನ್ನಬಹುದು. ಅನೇಕ ವೇಳೆ ಸಂಶೋಧಕನೇ ತಾನು ಕಂಡುಹಿಡಿದ ನೂತನ ಅಂಶಗಳನ್ನು ರೂಢಿಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ, ಸಂಶೋಧನೆಯಲ್ಲಿ ಪ್ರಶ್ನಿಸಿದ ವಿಷಯಗಳಲ್ಲಿ ಸುಧಾರಣೆ ತರಲು ಸಾಧ್ಯವಾಗುವುದಿಲ್ಲ ಎಂದಾಗ ಈ ಸಂಶೋಧನೆಯ ಫಲಿತಾಂಶವನ್ನು ಇತರರು ಅಧ್ಯಯನಮಾಡಿ ಅಳವಡಿಸಿಕೊಳ್ಳುವುದು ಪ್ರಶ್ನಾರ್ಹವಾಗಿಯೇ ಉಳಿಯಬಹುದು. ಹೀಗೆಂದ ಮಾತ್ರಕ್ಕೆ ಸಾಂಪ್ರದಾಯಿಕ ಅಥವಾ ಮೂಲಭೂತ (traditional or fundamental) ಶೈಕ್ಷಣಿಕ ಸಂಶೋಧನೆಯಿಂದ ಸುಧಾರಣೆ ಸಾಧ್ಯವೇ ಇಲ್ಲವೆಂದರ್ಥವಲ್ಲ ; ಸುಧಾರಣೆಯಾದರೂ ಮಂದಗತಿಯಲ್ಲಿ ಸಾಗುತ್ತದೆ, ದೀರ್ಘಕಾಲಿಕವಾಗುತ್ತದೆಯಷ್ಟೆ. ಇದರಿಂದಾಗಿ ಕ್ರಿಯಾಶೀಲ ಸಮಾಜ ಮುನ್ನಡೆಯುತ್ತಿರುವ ವೇಗದಲ್ಲಿ ಶೈಕ್ಷಣಿಕ ಸುಧಾರಣೆ ಸಾಧ್ಯವಾಗದು ; ಶೈಕ್ಷಣಿಕ ಸಮಸ್ಯೆಗಳಿಗೆ ಪರಿಹಾರ ದೊರಕದು. ಆದಕಾರಣ ಇತ್ತೀಚೆಗೆ ಶಾಲಾ ಮುಖ್ಯಸ್ಥರು, ಶಿಕ್ಷಕ ವರ್ಗದವರು, ಆಡಳಿತಾಧಿಕಾರಿಗಳು ಹಾಗೂ ಶಿಕ್ಷಣದ ಸುಭದ್ರತೆಯಲ್ಲಿ ಪಾಲ್ಗೊಂಡ ಇತರ ಕಾರ್ಯಕರ್ತರೆಲ್ಲರಲ್ಲಿಯೂ ಜಾಗೃತಿ ಮೂಡಿ, ತಾವು ಎದುರಿಸುತ್ತಿರುವ ಹಲವಾರು ಶೈಕ್ಷಣಿಕ ಸಮಸ್ಯೆಗಳಿಗೆ ತತ್‌ಕ್ಷಣವಲ್ಲಿಯೇ ಸೂಕ್ತ ಪರಿಹಾರ ಕಂಡುಕೊಂಡು ಅಳವಡಿಸಿಕೊಳ್ಳಲೂ ತಮ್ಮ ಕಾರ್ಯಕ್ರಮದಲ್ಲಿ ಸೂಕ್ತ ಸುಧಾರಣೆಗಳನ್ನು ಸೃಜಿಸಲೂ ಸಾಂಪ್ರದಾಯಿಕ ಸಂಶೋಧನಾಕ್ರಮಕ್ಕೇ ಶರಣುಹೋಗುವುದಕ್ಕಿಂತ ಆದಷ್ಟುಮಟ್ಟಿಗೆ ವಸ್ತುನಿಷ್ಠವಾಗಿ ವಿಚಾರಶೀಲವೂ ವಿವೇಚನಾಶೀಲವೂ ಆದ ಕ್ರಮಬದ್ಧ ಸಮಸ್ಯ ಪರಿಹಾರಕ್ರಮವನ್ನು (problem solving method) ಕೈಗೊಳ್ಳುವುದು ಉಪಯುಕ್ತ ಎಂದು ಸಮ್ಮತಿಸಲಾಯಿತು. ಈ ರೀತಿ ಯಾವುದೇ ಅನ್ವಯಹಿತವಾದ ತತ್‌ಕ್ಷಣದ ಸಮಸ್ಯೆಗಳಿಗೆ ಪರಿಹಾರ ಹುಡುಕುವ ಸಲುವಾಗಿ ಆ ಕೂಡಲೇ ತ್ವರಿತವಾಗಿ ಕೈಗೊಳ್ಳುವ ವ್ಯವಸ್ಥಿತ ಸಮಸ್ಯಾಪರಿಹಾರಕ್ರಮಕ್ಕೆ 'ಕ್ರಿಯಾತ್ಮಕ ಸಂಶೋಧನೆ' ಎಂದು ಕರೆಯಲಾಯಿತು. ಇದನ್ನು ತ್ವರಿತವಾಗಿ ಕೈಗೊಳ್ಳುವ ಸಂಶೋಧನೆ (on-the-spot research) ಎಂದು ಹೇಳಲಾಗುತ್ತದೆ. ಇದು ಅನ್ವಯಿಕ ಸಂಶೋಧನಾ (Applied Research) ವಿಧಾನಗಳಲ್ಲಿ ಒಂದಾಗಿದೆ.

ಕ್ರಿಯಾತ್ಮಕ ಸಂಶೋಧನೆ ಎಂದರೇನು ಎಂಬುದನ್ನು ಕೆಳಕಂಡಂತೆ ವ್ಯಾಖ್ಯಾನಿಸಲಾಗಿದೆ.

1. ಸ್ಟೀಫನ್ ಎಂ. ಕೋರಿಯವರ ಪ್ರಕಾರ, ವೃತ್ತಿಗಾರರು ತಮ್ಮ ಯಾವುದೇ ಸಮಸ್ಯೆಗಳಿಗೆ ಸಂಬಂಧಿಸಿದಂತೆ ತಮ್ಮ ನಿರ್ಣಯ ಹಾಗೂ ಕ್ರಿಯೆಗಳಿಗೆ ಸೂಕ್ತವಾದ ಮಾರ್ಗದರ್ಶನ ಪಡೆಯುವ, ಅವುಗಳನ್ನು ತಿದ್ದಿಕೊಳ್ಳುವ ಹಾಗೂ ಮೌಲ್ಯಮಾಪನ ಮಾಡಿಕೊಳ್ಳುವ ಉದ್ದೇಶದಿಂದ ಆ ಸಮಸ್ಯೆಗಳನ್ನು ವೈಜ್ಞಾನಿಕವಾಗಿ ಅಧ್ಯಯನ ಮಾಡಲು ತೊಡಗುವ ಪ್ರಕ್ರಿಯೆಗೆ ಕ್ರಿಯಾತ್ಮಕ ಸಂಶೋಧನೆ ಎನ್ನಲಾಗುತ್ತದೆ. (Action Research is the process by which practitioners attempt to study their problems scientifically in order to guide, correct and evaluate their decisions and actions—Stephen M. Corey)[1]

2. ಗುಡ್‌ರವರ ಶಿಕ್ಷಣ ನಿಘಂಟಿನಲ್ಲಿ ಹೇಳಿರುವಂತೆ ತಮ್ಮ ನಿರ್ಣಯಗಳು ಮತ್ತು ಕ್ರಿಯೆಗಳ ಗುಣಮಟ್ಟವನ್ನು ಉತ್ತಮಗೊಳಿಸಲು ಶಿಕ್ಷಕರು, ಮೇಲ್ವಿಚಾರಕರು ಹಾಗೂ ಆಡಳಿತಾಧಿಕಾರಿಗಳಿಂದ ಕೈಗೊಳ್ಳಲಾದ ಸಂಶೋಧನೆಯೇ ಕ್ರಿಯಾತ್ಮಕ ಸಂಶೋಧನೆಯಾಗುತ್ತದೆ. (Action Research is research used by teachers, supervisors and administrators to improve the quality of their decisions and actions–Good)[2]

3. ಕ್ರಿಯಾತ್ಮಕ ಸಂಶೋಧನೆಯು ತತ್‌ಕ್ಷಣದ ಪ್ರಯೋಗದೆಡೆಗೆ ಕೇಂದ್ರೀಕೃತವಾಗಿದೆಯೆ ವಿನಾ ಯಾವುದೇ ತತ್ವ ಪ್ರತಿಪಾದನೆಗಲ್ಲ. ಸ್ಥಳೀಯ ಪರಿಸರದಲ್ಲಿ ತಲೆದೋರುವ ನೈಜ ಸಮಸ್ಯೆಗೆ ಹೆಚ್ಚು ಒತ್ತು ಕೊಡಲಾಗುತ್ತದೆ ಎನ್ನುತ್ತಾರೆ ಜೆ. ಡಬ್ಲು. ಬೆಸ್ಟ್‌ರವರು (Action Research is focussed on the immediate application, not on the development of theory. It has placed its emphasis on a real problem–here and now in a local setting—J. W. Best)[3]

4. ಮೌಲಿಯವರ ಪ್ರಕಾರ ಶಿಕ್ಷಣದಲ್ಲಿ ಯಾವುದೇ ತತ್‌ಕ್ಷಣಿಕ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಉದ್ದೇಶದಿಂದ ಕೈಗೊಳ್ಳುವ ತ್ವರಿತ ಸಂಶೋಧನೆಗೆ ಕ್ರಿಯಾತ್ಮಕ ಸಂಶೋಧನ ಎನ್ನಲಾಗುತ್ತದೆ. (On the spot research aimed at the solution of an immediate problem is generally known in education as action research—Mouly)[4].

5. ಫೋಶೆ ಮತ್ತು ಗೂಡ್ಸನ್‌ರವರು ಯಾವುದೇ ಕಾರ್ಯವನ್ನು ವ್ಯವಸ್ಥಿತವಾಗಿ ಉತ್ತಮಗೊಳಿಸಲು ಉದ್ದೇಶಿಸಿದ ಪ್ರಕ್ರಿಯೆಯೇ ಕ್ರಿಯಾತ್ಮಕ ಸಂಶೋಧನೆ ಎನ್ನುತ್ತಾರೆ. (Action Research is the name of a process intended to improve action systematically. — A. W. Foshay and M.R. Goodson)

6. ಅಪೇಕ್ಷಿತ ಬದಲಾವಣೆ ಹಾಗೂ ಮಾರ್ಪಾಟುಗಳನ್ನು ರೂಪಿಸುವ ಸಾಹಸ ಪೂರ್ಣ ಪ್ರಯತ್ನದಲ್ಲಿ ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಕೈಗೊಳ್ಳುವ ಸೃಜನ ಶೀಲ ಬದಲಾವಣೆಗೆ ಸಹಾಯಕವಾದ ವ್ಯವಸ್ಥಿತ ತನಿಖಾತ್ಮಕ ಚಟುವಟಿಕೆಯೇ ಕ್ರಿಯಾತ್ಮಕ ಸಂಶೋಧನೆ ಎಂಬುದಾಗಿ ಮೆಗಾರ್ಥೆಯವರು ಅಭಿಪ್ರಾಯಪಡುತ್ತಾರೆ. (Action Research is organised investigative activity aimed towards the study and constructive change of a given endeavour by individuals or group concerned with such change and improvement —M.C. Garthete others)

ಒಟ್ಟಿನಲ್ಲಿ ಕ್ರಿಯಾತ್ಮಕ ಸಂಶೋಧನೆ ಶೈಕ್ಷಣಿಕ ಸಮಸ್ಯೆಗಳನ್ನು ಅಧ್ಯಯನ ಮಾಡಿ ನಿವಾರಣೋಪಾಯಗಳನ್ನು ರೂಪಿಸುವಲ್ಲಿ ಸಹಾಯಕವಾದ ವೈಜ್ಞಾನಿಕ ಕಾರ್ಯ ವಿಧಾನ ; ಶೈಕ್ಷಣಿಕ ಸಂಶೋಧನಾ ಕ್ಷೇತ್ರದಲ್ಲಿ ತೆರೆಯಲ್ಪಟ್ಟ ಒಂದು ಹೊಸ ಆಯಾಮ. ಬೋಧಕ ವರ್ಗದವರು, ಪ್ರಾಚಾರ್ಯರು, ಶಾಲಾ ಆಡಳಿತಗಾರರು ತಮ್ಮ ಕ್ಷೇತ್ರಕ್ಕೆ ಸಂಬಂಧಿಸಿದಂತೆ ಯಾವಾಗ ಸಮಸ್ಯೆಗಳು ತಲೆದೋರುತ್ತವೆಯೋ ಆ ಕೂಡಲೇ ಆ ವೃತ್ತಿಪರ ಸಮಸ್ಯೆಗಳಿಗೆ ಪರಿಹಾರಗಳನ್ನು ತಾವೇ ಸಂಶೋಧನೆಯ ಮೂಲಕ ಕಂಡು ಕೊಳ್ಳಲು ಸಹಾಯಕವಾಗುತ್ತದೆ. ಶಿಕ್ಷಣ ವ್ಯವಸ್ಥೆಯ ಸಮರ್ಥ ಹಾಗೂ ಸುಲಲಿತ ಕಾರ್ಯ ನಿರ್ವಹಣೆಗೆ ಹೆಚ್ಚಿನ ಸಹಾಯಕಾರಿಯೂ ಹೌದು.

ಯಾವನೋ ಒಬ್ಬ ಶಿಕ್ಷಕನಾಗಲೀ ಆಡಳಿತಾಧಿಕಾರಿಯಾಗಲೀ ಎದುರಿಸಬೇಕಾದ ಸಮಸ್ಯೆ ಅವನಿಗೆ ಮಾತ್ರ ಸೀಮಿತವಾಗಿರಬಹುದು ಇಲ್ಲವೇ ಅನೇಕ ಶಿಕ್ಷಕರು ಹಾಗೂ ಆಡಳಿತಾಧಿಕಾರಿಗಳು ಎದುರಿಸಬೇಕಾಗಿರಬಹುದು. ಅವನು ಗುರುತಿಸುವ ಪರಿಹಾರವು ಸಹಾ ಇತರರಿಗೂ ಸಹಾಯಕವಾಗಬಹುದು. ಅಂದರೆ ಆತ ಗುರುತಿಸಿದ ಅಂಶಗಳನ್ನೇ ಆಧರಿಸಿ, ಇತರರು ತಮ್ಮ ಸಮಸ್ಯೆಗಳಿಗೆ ನಿವಾರಣೋಪಾಯಗಳನ್ನು ಪತ್ತೆ ಹಚ್ಚಬಹುದು. ಆದ್ದರಿಂದ ಕ್ರಿಯಾತ್ಮಕ ಸಂಶೋಧನೆಯು ವೃತ್ತಿ ಪರರಿಂದ, ವೃತ್ತಿಪರರ ಮತ್ತು ವೃತ್ತಿ ಪರರಿಗಾಗಿಯೇ ಇರುವ ಸಂಶೋಧನೆ ಎಂದರೆ ಅತಿಶಯೋಕ್ತಿಯೆನಿಸದು.

ಸಿ. ಎಮ್. ಕುಕ್‌ರವರ ಪ್ರಕಾರ ಸಂಶೋಧನೆ ಎಂದರೆ ಯಾವುದೇ ಒಂದು ದತ್ತ ಸಮಸ್ಯೆಗೆ ಸಂಬಂಧಿಸಿದಂತಹ ಅಂಶಗಳು. ಅವರ ಅರ್ಥ ಹಾಗೂ ಮಹತ್ವಗಳಿಗಾಗಿ ಕೈಗೊಂಡ ನಿಷ್ಪ್ರಾಯುಕ್ತವೂ ಸಮಗ್ರವೂ ಬೌದ್ಧಿಕವೂ ಆದ ಹುಡುಕುವಿಕೆ. ಸಂಶೋಧನೆಯ ಉತ್ಪನ್ನ ಅಥವಾ ಫಲಿತಾಂಶಗಳು ಆಯಾ ಜ್ಞಾನ ಶಾಖೆಗೆ ವಿಶ್ವಾಸಾರ್ಹವಾದ, ಸಮರ್ಥಿಸಲು ಸಾಧ್ಯವಾದ ಕೊಡುಗೆಯಾಗಿರುತ್ತದೆ. ಅಂದರೆ ಸಂಶೋಧನಾ ಕಾರ್ಯದಲ್ಲಿ ಸತ್ಯಾಂಶಗಳ ಶೋಧನೆ ನಿಷ್ಠೆ, ವ್ಯಾಪಕತೆ ಹಾಗೂ ಬುದ್ಧಿವಂತಿಕೆಗಳಿಂದ ಕೂಡಿದ್ದು, ಶೋಧನೆಯ ಫಲಿತಾಂಶ ಸಮರ್ಥನೆಗೂ, ವಿಶ್ವಾಸಾರ್ಹತೆಗೂ ನಿಲುಕುವಂತಿರುತ್ತವೆ. ಸಂಶೋಧನೆಯನ್ನು ಕುರಿತ ಈ ವ್ಯಾಖ್ಯಾನ, ಅವರ ಇನ್ನೊಂದು ಮಜಲೆನಿಸಿದ ಕ್ರಿಯಾ

ತ್ಮಕ ಸಂಶೋಧನೆಗೂ ಅನ್ವಯುವಾಗುವ್ರದರಲ್ಲಿ ಸಂಶಯವಿಲ್ಲ. ಸಾಮಾನ್ಯವಾಗಿ ಮೂಲಭೂತ ಸಂಶೋಧನೆಗೆ ಇರಬೇಕಾದ ಎಲ್ಲಾ ಲಕ್ಷಣಗಳನ್ನು ಕ್ರಿಯಾತ್ಮಕ ಸಂಶೋಧನೆಯಲ್ಲಿಯೂ ಗುರುತಿಸಬಹುದಾಗಿದೆ. ಶಾಲಾ ಶಿಕ್ಷಣ ಕ್ರಮದ ಅಭಿವೃದ್ಧಿಗಾಗಿ ಶ್ರಮಿಸಲು ಈ ಕ್ರಿಯಾತ್ಮಕ ಸಂಶೋಧನೆಯನ್ನು ಒಂದು ಮಾಧ್ಯಮವನ್ನಾಗಿ ಪ್ರತಿಪಾದಿಸಿದ ಸ್ಟೀಫನ್ ಎಂ. ಕೋರಿಯವರ ವ್ಯಾಖ್ಯಾನದ ಪ್ರಕಾರ ಕ್ರಿಯಾತ್ಮಕ ಸಂಶೋಧನೆಯಲ್ಲಿ ಮೂಲಭೂತವಾಗಿ ಕಂಡುಬರುವ ಲಕ್ಷಣಗಳನ್ನು ಕೆಳಕಂಡಂತೆ ಪಟ್ಟಿ ಮಾಡಬಹುದು.

(1) ಕ್ರಿಯಾತ್ಮಕ ಸಂಶೋಧನೆಯಲ್ಲಿ ವೈಜ್ಞಾನಿಕ ಕ್ರಮವನ್ನಳವಡಿಸಲಾಗಿದೆ.

(2) ಯಾವುದೇ ನಿರ್ದಿಷ್ಟ ಕ್ಷೇತ್ರದಲ್ಲಿ ವೃತ್ತಿಪರ ಕೆಲಸಗಾರರು ತಮ್ಮ ಅವಶ್ಯಕತೆಗನುಗುಣವಾಗಿ ಸಂಪ್ರದಾಯ ನಿಷ್ಠವಲ್ಲದಿದ್ದರೂ ಕ್ರಮಬದ್ಧವಾದ ಕ್ರಿಯಾತ್ಮಕ ಸಂಶೋಧನೆಯನ್ನು ಕೈಗೊಳ್ಳಬಹುದಾಗಿದೆ. ಈ ಸಂಶೋಧನಾ ಕಾರ್ಯವನ್ನು ನುರಿತ ಸಂಶೋಧಕರಷ್ಟೇ ಅಲ್ಲದೆ ಶಿಕ್ಷಕರು, ವಿದ್ಯಾರ್ಥಿಗಳು, ಪ್ರಾಚಾರ್ಯರು, ಆಡಳಿತಾಧಿಕಾರಿಗಳು ಮೊದಲಾದವರಿಂದ ಕೈಗೊಳ್ಳಬಹುದಾಗಿದೆ.

(3) ದಿನವಹಿ ಹಾಗೂ ತತ್‌ಕ್ಷಣದ ಸಮಸ್ಯೆಗಳಿಗೆ ಸಂಬಂಧಿಸಿದ್ದು ಪಠ್ಯಸೂಚಿ, ಆಡಳಿತ ಕ್ರಮ, ಬೋಧನೆ ಕಲಿಕೆ ವಿಧಾನ, ಮೌಲ್ಯಮಾಪನ, ಇತ್ಯಾದಿ ವಿಷಯಗಳಲ್ಲಿ ವ್ಯವಸ್ಥಿತ ಕಾರ್ಯ ಕೈಗೊಳ್ಳಲು ಸಹಾಯಕವಾಗಿದೆ.

(4) ಒಂದು ನಿರ್ದಿಷ್ಟ ವಿಷಯಕ್ಕೆ ಸಂಬಂಧಪಟ್ಟಂತೆ ನಿರ್ಣಯಗಳು ಹಾಗೂ ಕ್ರಿಯೆಗಳಿಗೆ ಮಾರ್ಗದರ್ಶನ ನೀಡುವುದು, ಮಾಪಕಗಳನ್ನು ರೂಪಿಸುವುದು ಮತ್ತು ಮೌಲ್ಯಮಾಪನ ಮಾಡುವುದೇ ಕ್ರಿಯಾತ್ಮಕ ಸಂಶೋಧನೆಯ ಪ್ರಮುಖ ಗುರಿಯಾಗಿದೆ.

ಕ್ರಿಯಾತ್ಮಕ ಸಂಶೋಧನೆಯ ಪ್ರಾಮುಖ್ಯತೆ

ಪ್ರಜಾಸತ್ತಾತ್ಮಕ ರಾಷ್ಟ್ರಗಳ ಅಭಿವೃದ್ಧಿಯಾಗಲು ಪೂರಕವಾಗಿರುವಂತೆ ಶೈಕ್ಷಣಿಕ ಸಂಸ್ಥೆಗಳು ಕಾರ್ಯ ನಿರ್ವಹಿಸುವ ದಿಸೆಯಲ್ಲಿ ಕ್ರಿಯಾತ್ಮಕ ಸಂಶೋಧನೆಯು ಅತ್ಯಂತ ಪರಿಣಾಮಕಾರಿಯಾದ, ಮಹತ್ವಪೂರಕವಾದ ಚಟುವಟಿಕೆಯಾಗಿದೆ ಎಂದರೆ ತಪ್ಪಾಗಲಾರದು. ಅಂತೆಯೇ ಪ್ರಗತಿಪರ ಪ್ರಜಾಸತ್ತಾತ್ಮಕ ಭಾರತದಲ್ಲಿಯೂ ಈ ಕ್ರಿಯಾತ್ಮಕ ಸಂಶೋಧನೆಯ ಮೌಲ್ಯವನ್ನು ಗುರುತಿಸಬಹುದಾಗಿದೆ. ಕ್ರಿಯಾತ್ಮಕ ಸಂಶೋಧನೆಯನ್ನು ಕೇವಲ ಸಂಶೋಧನೆಯ ಒಂದು ಆಯಾಮವಷ್ಟೇ ಅಲ್ಲದೆ ಕಲಿಕೆಯ ಹಾಗೂ ಜ್ಞಾನಾರ್ಜನೆಯ ಮೂಲಾಧಾರ ಎಂದು ಪರಿಗಣಿಸಲಾಗಿದೆ. ಸಂಶೋಧಕನು ಒಂದು ಸಮಸ್ಯೆಯನ್ನು ಜ್ಞೇಯನಿಷ್ಠವಾಗಿ ಅಧ್ಯಯನಮಾಡಿ ಪರಿಹಾರ ಕ್ರಮವನ್ನು ಕಂಡುಕೊಳ್ಳಲು ಕಲಿಯುವುದರ ಜೊತೆಗೆ ಆ ಜ್ಞಾನವನ್ನು ತನ್ನ ನಿತ್ಯ ಜೀವನದಲ್ಲಿ ಅಳವಡಿಸಿಕೊಳ್ಳುವುದನ್ನೂ ಕಲಿಯುತ್ತಾನೆ, ಇದರಿಂದ ಕ್ರಿಯಾಶೀಲತೆ, ಸೃಜನಶೀಲತೆಗಳನ್ನು ಅಭಿವೃದ್ಧಿಗೊಳಿಸಿಕೊಳ್ಳುವುದಲ್ಲದೆ ಪ್ರಜಾಸತ್ತಾತ್ಮಕ ಮೌಲ್ಯಗಳನ್ನು ರೂಢಿಸಿಕೊಳ್ಳಲೂ ಕಾರ್ಯರೂಪಿಸಿಕೊಳ್ಳಲೂ ಸಾಧ್ಯವಾಗುತ್ತದೆ. ಶಾಲಾ ಶಿಕ್ಷಕರು, ಮುಖ್ಯಸ್ಥರು, ಮೌಲ್ಯ

ಮಾಪಕರು, ಪಠ್ಯ ಸೂಚಿ ನಿರ್ಮಾಪಕರು ಮತ್ತು ಇತರರು ತಮ್ಮ ಲೋಪದೋಷ
ಗಳನ್ನು ಗುರುತಿಸಿಕೊಂಡು, ಅವುಗಳ ನಿವಾರಣೆಗೆ ಪ್ರಯತ್ನಿಸಲು ಸಹಕಾರಿಯಾಗುತ್ತದೆ.
ವಿದ್ಯಾರ್ಥಿಗಳ ಸರ್ವತೋಮುಖ ಬೆಳವಣಿಗೆಗೆ ಪೂರಕವಾದ ಕಾರ್ಯಕ್ರಮಗಳನ್ನು
ನಿರೂಪಿಸಲೂ ಆ ಮೂಲಕ ಉದ್ದಿಷ್ಟಿತ ಗುರಿ ಮುಟ್ಟಲೂ ವಿದ್ಯಾರ್ಥಿಗಳ ಅಂಗೀಕಾರ
ಹಾಗೂ ಗ್ರಾಹಕಶಕ್ತಿಯ ಮಟ್ಟವನ್ನು ಉಚ್ಚಗೊಳಿಸಲೂ ಉಪಯುಕ್ತವಾಗಿದೆ. ಶಾಲಾ
ಕಾಲೇಜುಗಳಲ್ಲಿ ತೀವ್ರವಾದ ಅನೇಕ ಸಮಸ್ಯೆಗಳ–ಪಠ್ಯಸೂಚಿ,ಶಿಸ್ತು, ಬೋಧನಾ
ಕ್ರಮ, ಸಹಪಠ್ಯ ಚಟುವಟಿಕೆಗಳು, ಮಾನಸಿಕ ಸಮಸ್ಯೆಗಳು ಇತ್ಯಾದಿ–ಪರಿಹಾರಕ್ಕೆ
ಸಂಬಂಧಿಸಿದಂತೆ ಸೂಕ್ತ ಸಲಹೆಗಳನ್ನು ಪಡೆಯಲೂ ಒಟ್ಟಾರೆ ಶಿಕ್ಷಣದ ಬಹುಮುಖ
ಕ್ಷೇತ್ರಗಳಲ್ಲಿಯೂ ಉತ್ತಮ ಸುಧಾರಣೆಗಳನ್ನು ರೂಪಿಸಲು ಸಹಾಯಕವಾಗಿದೆ.

ಕ್ರಿಯಾತ್ಮಕ ಸಂಶೋಧನೆಯು ಕೇವಲ ತರಬೇತಿ ಪಡೆದ ಅನುಭವೀ ಸಂಶೋಧ
ಕರಿಗೆ ಮಾತ್ರ ಸೀಮಿತವಾದದ್ದು ಎಂಬ ಭಾವನೆಯನ್ನು ದೂರವಾಗಿಸುತ್ತದೆ. ಶಿಕ್ಷಕರು
ಹಾಗೂ ಆಡಳಿತಾಧಿಕಾರಿಗಳು ಎದುರಿಸಬೇಕಾದ ಸಮಸ್ಯೆಗಳ ಬಗೆಗೆ ಜಾಗೃತರಾಗುವಂತೆ
ಮಾಡುವುದಲ್ಲದೆ ಆ ಸಮಸ್ಯೆಗಳನ್ನು ಬಗೆಹರಿಸಲು ಅವಶ್ಯಕವಾದ ವೈಜ್ಞಾನಿಕ ವಿಧಾನ
ದಲ್ಲಿ ತರಬೇತಿ ಪಡೆಯಲು ಅವಕಾಶ ಕಲ್ಪಿಸಿಕೊಡುತ್ತದೆ. ವೈಜ್ಞಾನಿಕ ಹಾಗೂ ಜ್ಞೇಯ
ನಿಷ್ಠ ಮನೋಧೋರಣೆಗಳ ಅಭಿವೃದ್ಧಿಯಾಗುವುದರಿಂದ ಸಂಶೋಧನಾ ದೃಷ್ಟಿಯನ್ನು
ಪೋಷಿಸಲಾಗುತ್ತದೆ. ವೃತ್ತಿಪರ ಸಂಶೋಧಕ ವಿದ್ಯಾರ್ಥಿಗಳು ಶೈಕ್ಷಣಿಕ ಸಂಶೋಧನಾ
ಕ್ಷೇತ್ರದಲ್ಲಿ ಕೈಗೊಂಡ ಕಾರ್ಯಗಳು ವಾಸ್ತವವಾಗಿ ಶಿಕ್ಷಣ ಕ್ಷೇತ್ರದಲ್ಲಿ ಕೆಲಸ ಮಾಡುವ
ಸಾಮಾನ್ಯ ವರ್ಗದವರಿಗೆ ತಲುಪುವುದಿಲ್ಲ. ಸಹಜ ಸನ್ನಿವೇಶದಲ್ಲಿ ಸಮಸ್ಯೆಗಳನ್ನೆದುರಿಸಲು
ಸಹಾಯಕವಾಗುವುದಿಲ್ಲ. ಆದರೆ ಈ ಕ್ರಿಯಾತ್ಮಕ ಸಂಶೋಧನೆ ಸಹಜ ಸನ್ನಿವೇಶದಲ್ಲಿ
ಸಮಸ್ಯೆಗಳನ್ನು ಎದುರಿಸಿ, ಅವುಗಳಿಗೆ ಸೂಕ್ತ ಸುಧಾರಣಾಕ್ರಮಗಳನ್ನು ಕಂಡುಹಿಡಿ
ಯಲೂ ತಮ್ಮ ಅನುಭವದ ಪ್ರಯೋಜನಗಳನ್ನು ಒರೆಹಚ್ಚಿ ನೋಡಲೂ ಯಾರು
ಸಮಸ್ಯೆಗಳನ್ನು ಎದುರಿಸಬೇಕಾಗಿತ್ತೋ ಅವರೇ ಅವುಗಳನ್ನು ಬಗೆಹರಿಸಲೂ ಸದವಕಾಶ
ಕಾಶವನ್ನು ಕಲ್ಪಿಸಿಕೊಡುತ್ತದೆ. ಮೂಲಭೂತ ಸಂಶೋಧನೆಯಂತೆ ಯಾವುದೇ ಕೃತಕ
ಸನ್ನಿವೇಶ ಕಲ್ಪನೆ, ವಿಶೇಷವಾದ ಪೂರ್ವಸಿದ್ಧತೆ ಹಾಗೂ ಶಾಸ್ತ್ರೀಯ ಕಟ್ಟುಕಟ್ಟಳೆಗಳ
ಅಗತ್ಯವಿಲ್ಲದೆ ತರಗತಿಯ ಸಾಮಾನ್ಯ ಸಹಜ ಸನ್ನಿವೇಶಗಳಲ್ಲಿಯೇ ಅವಶ್ಯಕವಾದ ಚಟು
ವಟಿಕೆಗಳನ್ನು ಕೈಗೊಳ್ಳಲು ಅವಕಾಶವಿರುವುದರಿಂದ ವಿಶೇಷವಾದ ಆರ್ಥಿಕ ವೆಚ್ಚವಿಲ್ಲದೆ
ಬೋಧನಾ ಕಲಿಕೆ ಪ್ರಕ್ರಿಯೆಯ ಗುಣಮಟ್ಟವನ್ನು ಉತ್ತಮಪಡಿಸಲು ಸಾಧ್ಯವಾಗು
ತ್ತದೆ.

ಕ್ರಿಯಾತ್ಮಕ ಸಂಶೋಧನೆಯಲ್ಲಿ ಮನೋವೈಜ್ಞಾನಿಕ ಮೌಲ್ಯವನ್ನೂ ಗುರುತಿಸ
ಬಹುದಾಗಿದೆ. ಯಾವ ವ್ಯಕ್ತಿ ತನ್ನ ವೃತ್ತಿಯಲ್ಲಿ ಅಭಿವೃದ್ಧಿ ಹಾಗೂ ಸುಧಾರಣೆಗಳನ್ನು
ಕಾಣಲು ಕಾತುರನಾಗುತ್ತಾನೋ ಆತನೇ ಸ್ವತಃ ಸಂಶೋಧನೆಯನ್ನು ಕೈಗೊಂಡು ಹೊಸ
ವಿಧಾನಗಳನ್ನು ಪ್ರಯೋಗಾತ್ಮಕವಾಗಿ ಅಳವಡಿಸಿಕೊಳ್ಳಲು ಅವಕಾಶ ಒದಗಿಸಿ ಕೊಡು

ತ್ತಾನೆ. ಸಂಶೋಧಕ ಸ್ವತಃ ವಿಚಾರ ವಿಮರ್ಶೆಗಳಲ್ಲಿ ತೊಡಗುವುದರಿಂದ ಬಹುಮೂಲ್ಯ ಅನುಭವ ಉಂಟಾಗುತ್ತದೆ; ಕಲಿಕೆಯಿಂದ ತೃಪ್ತಿಯೂ ಉಂಟಾಗುತ್ತದೆ.

ಇದು ಶಿಕ್ಷಕರು, ಆಡಳಿತಾಧಿಕಾರಿಗಳು, ಮೇಲ್ವಿಚಾರಕರು, ವಿದ್ಯಾರ್ಥಿಗಳು, ಪೋಷಕರು ಮೊದಲಾದವರೆಲ್ಲರೂ ಪಾಲ್ಗೊಳ್ಳಬಹುದಾದ ಒಂದು ಸಹಕಾರಕ ಉದ್ಯಮ, ಶಿಕ್ಷಣ ಕ್ರಮದಲ್ಲಿ ಯಾವುದೇ ರೀತಿಯ ಅಭಿವೃದ್ಧಿಯಾಗಬೇಕಾದರೆ ಇತರರೆಲ್ಲರ ಸಹಕಾರ ಅತ್ಯಗತ್ಯ. ಸಂಶೋಧನಾ ಕಾರ್ಯ ಒಬ್ಬ ವ್ಯಕ್ತಿಯಿಂದಲೇ ಕೈಗೊಂಡದ್ದಾದರೂ ಅದನ್ನು ಪೂರ್ಣಗೊಳಿಸಲು ಬಹುಶಃ ಕೆವಾಗಿ, ಹಲವಾರು ವ್ಯಕ್ತಿಗಳ ಸಹಕಾರ ಅಗತ್ಯವೆನಿಸುತ್ತದೆ ಉದಾ:– ಶಾಲಾ ಚಟುವಟಿಕೆಗಳಿಗೆ ಸಂಬಂಧಿಸಿದಂತೆ ಸಂಶೋಧನೆ ಕೈಗೊಳ್ಳಲೂ ಅದರ ಫಲಿತಾಂಶವನ್ನು ಅಳವಡಿಸಿಕೊಳ್ಳಲೂ ಸಹಕಾರ ದೊರೆಯದಿದ್ದರೆ ಶಾಲಾ ವ್ಯವಸ್ಥೆಯನ್ನು ಉತ್ತಮಪಡಿಸಲಾಗುವುದಿಲ್ಲ. ಪರಿಣಾಮಕಾರಿಯಾದ ಬೋಧನಾಕ್ರಮ ಹಾಗೂ ಚಟುವಟಿಕೆಗಳನ್ನು ಬೋಧಕ ಕಂಡು ಕೊಂಡರೂ, ಶಾಲಾ ಮೇಲ್ವಿಚಾರಕ ವರ್ಗದವರಿಂದ, ಪೋಷಕ ವರ್ಗದವರಿಂದ ಸಹಕಾರ ದೊರೆಯದಿದ್ದಲ್ಲಿ ಅವುಗಳನ್ನು ಪ್ರತಿದಿನದ ಬೋಧನೆಯಲ್ಲಿ ಅಳವಡಿಸಿಕೊಳ್ಳಲು ಸಾಧ್ಯವಾಗುವುದಿಲ್ಲ.

ಮೂಲಭೂತ ಸಂಶೋಧನೆ ಮತ್ತು ಕ್ರಿಯಾತ್ಮಕ ಸಂಶೋಧನೆ

ಮೂಲಭೂತ ಸಂಶೋಧನೆ ಎಂದರೆ ಸತ್ಯ ಶೋಧನೆಗಾಗಿ ಕೈಗೊಂಡ ನಿಷ್ಠಾಯುಕ್ತ ವೈಜ್ಞಾನಿಕ ಹುಡುಕುವಿಕೆ. ಇದನ್ನು ಸಾಂಪ್ರದಾಯ ಬದ್ಧ ಸಂಶೋಧನೆ (traditional research) ಎಂದೂ ಕರೆಯಬಹುದು. ಅನೇಕ ನಿಯಮಗಳು ಹಾಗೂ ನಿರೂಪಣೆಗಳನ್ನು ಕಂಡುಹಿಡಿಯುವ ಮೂಲಕ ತತ್ವ ಪ್ರತಿಪಾದನೆ ಮಾಡುವುದೇ ಇದರ ಪ್ರಮುಖೋದ್ದೇಶ. ಸಂಶೋಧನೆಯ ಫಲಿತಾಂಶಗಳ ಅನ್ವಯ ಗೌಣವಾಗುತ್ತದೆ. ಕ್ರಿಯಾತ್ಮಕ ಸಂಶೋಧನೆಯಲ್ಲಿ ಮೂಲಭೂತ ಸಂಶೋಧನೆಯ ಸೆಳೆಯಿದ್ದರೂ ತತ್‌ಕ್ಷಣದ ಸಮಸ್ಯೆಗಳಿಗೆ ತ್ವರಿತವಾಗಿ ಪರಿಹಾರ ಸೂಚಿಸುವೆಡೆಗೆ ಅದು ಕೇಂದ್ರೀಕೃತವಾಗಿದೆ. ಸಹಜ ಸನ್ನಿವೇಶಗಳಲ್ಲಿ ಶಿಕ್ಷಕನಾಗಲೀ, ಆಡಳಿತಾಧಿಕಾರಿಯಾಗಲೀ ತಾನಾಗಿಯೇ ಎದುರಿಸಬೇಕಾದ ಸಮಸ್ಯೆಗಳ ಅಧ್ಯಯನಕ್ಕೆ ಆ ಕೂಡಲೇ ಪ್ರಯತ್ನಿಸಲಾಗುತ್ತದೆ. ಆದರೆ ಕಾರ್ಯ ನಿರ್ವಹಣೆಯಲ್ಲಿ ಮೂಲಭೂತ ಸಂಶೋಧನೆಯಲ್ಲಿರುವಂತೆ ಸಂಕೀರ್ಣತೆಯಿಲ್ಲದಿರುವುದರಿಂದ ಸಾಮಾನ್ಯನಿಗೂ ಕೂಡ ಸುಲಭಗ್ರಾಹ್ಯವಾಗಿರುತ್ತದೆ. ಅಂತೆಯೇ ಇದು ಮೂಲಭೂತ ಸಂಶೋಧನೆಗಿಂತ ಪರಿಣಾಮಕಾರಿಯೂ ಸುಲಭ ಸಾಧಿತವೂ ಎನ್ನಲಾಗುತ್ತದೆ.

ಮೂಲಭೂತ ಸಂಶೋಧನೆ ಹಾಗೂ ಕ್ರಿಯಾತ್ಮಕ ಸಂಶೋಧನೆಗಳೆರಡೂ ಬಹುಶಃವಾಗಿ ಸಮಾನ ಅಂಶಗಳನ್ನು ಹೊಂದಿದ್ದರೂ ಕೆಲವು ಅಂಶಗಳಿಂದ ಅವುಗಳನ್ನು ಪ್ರತ್ಯೇಕಿಸಬಹುದಾಗಿದೆ. ಈ ದಿಸೆಯಲ್ಲಿ ಬಹುಮುಖ್ಯವಾದ ಅಂಶವೆಂದರೆ ಸಂಶೋಧಕನ

ಪ್ರೇರಣಾಶಕ್ತಿ. ಮೂಲಭೂತ ಸಂಶೋಧನೆಯಲ್ಲಿ ತ್ವರಿತವಾಗಿ ತನ್ನ ಸಮಸ್ಯೆಗೆ ಆದಷ್ಟು ವಸ್ತುನಿಷ್ಠ ಅಧ್ಯಯನದಿಂದಾಗಿ ಪರಿಹಾರಗಳನ್ನು ಕಂಡುಕೊಳ್ಳಲು ಮತ್ತು ತನ್ನ ಅಭ್ಯಾಸಗಳನ್ನು ಉತ್ತಮಪಡಿಸಿಕೊಳ್ಳಲು ಆತ ಪ್ರೇರಿತನಾಗುತ್ತಾನೆ. ಉತ್ತಮ ಬೋಧಕನು ತನ್ನ ವಿದ್ಯಾರ್ಥಿಗಳಿಗೆ ಅತಿ ನಿಕಟವರ್ತಿಯಾಗಿದ್ದು ವಿದ್ಯಾರ್ಥಿಗಳ ಸಮಸ್ಯೆಗಳನ್ನು ಗುರುತಿಸಿ ಪರಿಹಾರ ಸೂಚಿಸುವುದಕ್ಕಾಗಲೀ, ತನ್ನ ಬೋಧನಾಕ್ರಮ ಅಥವಾ ಮೌಲ್ಯಮಾಪನ ಕ್ರಮವನ್ನು ಮಾರ್ಪಡಿಸಿಕೊಳ್ಳುವುದಕ್ಕಾಗಲೀ, ಪ್ರಯತ್ನಿಸಬಹುದು. ಈ ದಿಸೆಯಲ್ಲಿ ಇತರರು ನಡೆಸಿದ ಮೂಲಭೂತ ಸಂಶೋಧನೆಗಳಿಂದ ಕಂಡು ಬಂದ ಅಂಶಗಳನ್ನು ತನ್ನ ಯೋಜನೆಯಲ್ಲಿ ಅಳವಡಿಸಿಕೊಳ್ಳುವ ಪ್ರಯತ್ನದಲ್ಲಿ ಬೋಧಕ ಅನೇಕ ವೇಳೆ ವಿಫಲನಾಗುವ ಸಂಭವವಿದೆ. ಆದರೆ ಕುತೂಹಲಕಾರಿಯಾಗಿ ತಾನೇ ಸ್ವತಃ ಸಮಸ್ಯೆಯನ್ನು ಆಳವಾಗಿ ಅಧ್ಯಯನ ಮಾಡಿ ಪರಿಹಾರಕ್ಕಾಗಲೀ, ಸುಧಾರಣೆಗಾಗಲೀ ಸೂಕ್ತ ಕ್ರಮವನ್ನು ಯೋಜಿಸಿದಲ್ಲಿ ಜಯಲಭಿಸುವ ಸಾಧ್ಯತೆ ಅಧಿಕವಾಗಿದೆ. ತಾನೇ ಸ್ವತಃ ಸಮಸ್ಯೆಯನ್ನು ಸ್ಪಷ್ಟವಾಗಿ ನಿರೂಪಿಸಿ ಕೈಗೊಳ್ಳಬಹುದಾದ ಕ್ರಿಯಾ ಚಟುವಟಿಕೆಗಳ ಬಗೆಗೆ ಪ್ರಾಕಲ್ಪನೆಗಳನ್ನು (hypothesis) ನಿರೂಪಿಸಿ, ಆ ಕ್ರಿಯೆಗಳಲ್ಲಿ ತಾನೇ ಪಾಲ್ಗೊಂಡು, ಆಗುಹೋಗುಗಳನ್ನು ಪರಿಶೀಲಿಸಿ, ಫಲಿತಾಂಶಗಳನ್ನು ಸಾಧಾರಣೀಕರಿಸಿಕೊಳ್ಳುವುದರಿಂದ ಈ ಎಲ್ಲ ಭಾವನೆಗಳನ್ನು ಕರಗತ ಮಾಡಿಕೊಳ್ಳಲು ಸಾಧ್ಯವಾಗುವಷ್ಟು ಮಟ್ಟಿಗೆ ಇವೆಲ್ಲವನ್ನೂ ಇತರ ಸಂಶೋಧಕರು ಒದಗಿಸಿಕೊಟ್ಟಾಗ ಸಾಧ್ಯವಾಗಲಾರದು ಕ್ರಿಯಾತ್ಮಕ ಸಂಶೋಧನೆಯಲ್ಲಿ ತಾನು ಯೋಚಿಸಿದ ಚಟುವಟಿಕೆಯನ್ನು ತತ್‌ಕ್ಷಣದಲ್ಲಿಯೇ ಕಾರ್ಯರೂಪಕ್ಕಿಳಿಸಿ ಸಫಲತೆ ವಿಫಲತೆಗಳನ್ನು ಕಂಡುಕೊಳ್ಳುವುದು ಗಣನೀಯವಾದ ಅಂಶ. ಇದು ಹೆಚ್ಚು ಪರಿಣಾಮಕಾರಿ ಎನಿಸುತ್ತದೆ.

ಸಾಂಪ್ರದಾಯಬದ್ಧ ಸಂಶೋಧನೆಯಲ್ಲಿ ಆದಿಯಿಂದ ಅಂತ್ಯದವರೆಗೆ ಅಗತ್ಯವಾದ ಚರಾಂಶಗಳೆಲ್ಲವನ್ನು, ಪರಿಸರವನ್ನು ನಿರ್ಬಂಧಿಸಿ ಪ್ರಾಕಲ್ಪನೆಗಳನ್ನು ಪರೀಕ್ಷಿಸಲು ತೊಡಗುವುದರಿಂದ ನಿಖರತೆ ಹಾಗೂ ನಿರ್ದಿಷ್ಟತೆ ಇರುತ್ತವೆ. (ಸಾಮಾಜಿಕ ವಿಜ್ಞಾನ ವಿಷಯಗಳಲ್ಲಿ ನೂರಕ್ಕೆ ನೂರರಷ್ಟು ನಿರ್ದಿಷ್ಟತೆಯನ್ನು ಕಾಣಲು ಸಾಧ್ಯವಿಲ್ಲ.) ಕ್ರಿಯಾತ್ಮಕ ಸಂಶೋಧನೆಯಲ್ಲಿ ಯಥಾವತ್ತಾಗಿ ನಡೆಯುತ್ತಿರುವ ತರಗತಿಯ ಸಂಕೀರ್ಣ ಪರಿಸರದಲ್ಲಿಯೇ ನೈಜ ಸನ್ನಿವೇಶದಲ್ಲಿಯೇ ಯಾವ ನಿರ್ಬಂಧನೆಯೂ ಇಲ್ಲದೆ ಪರಿಶೀಲನೆಯನ್ನು ಕೈಗೊಳ್ಳುವುದರಿಂದ ಚರಾಂಶಗಳ ಬಾಹುಳ್ಯತೆಯ ಪರಿಣಾಮದಿಂದಾಗಿ ನಿಖರತೆ ಹಾಗೂ ನಿರ್ದಿಷ್ಟತೆ ಕಂಡುಬರುವುದಿಲ್ಲ. ಈ ಸಂಶೋಧನೆ ಬಹಳಷ್ಟುಮಟ್ಟಿಗೆ ಕ್ರಮಾನುಗತವಾಗಿ ಸಾಗಿದ್ದಾಗ ಫಲಿತಾಂಶಗಳು ಹೆಚ್ಚು ವೈಜ್ಞಾನಿಕವೂ, ಉಪಯುಕ್ತವೂ ಆಗಿರಲು ಸಾಧ್ಯ. ಸಾಂಪ್ರದಾಯಬದ್ಧ ಸಂಶೋಧನೆಯಲ್ಲಿ ಯೋಜನೆಯ ಪ್ರಕಾರ ನಿರ್ಧರಿಸಲಾದ ಪ್ರಾಯೋಗಿಕ ಕ್ರಮ ಅಥವಾ ಮಾದರಿಯನ್ನೇ ಕೊನೆಯವರೆಗೂ ಉಳಿಸಿಕೊಳ್ಳಲಾಗುತ್ತದೆ. ಯಾವುದೇ ಕಾರಣದಿಂದಾಗಿ ಹಾಕಿಕೊಂಡ ನಿರ್ಬಂಧನೆಗಳನ್ನು ಸಡಿಲಗೊಳಿಸಲಾಗುವುದಿಲ್ಲ. ಆದರೆ ಕ್ರಿಯಾತ್ಮಕ ಸಂಶೋಧನೆಯಲ್ಲಿ

ನಿರ್ಬಂಧಿತ ಪ್ರಾಯೋಗಿಕ ಕ್ರಮದ ಆಗತ್ಯವಿಲ್ಲ ; ಅವಶ್ಯಕವೆನಿಸಿದಲ್ಲಿ ಕ್ರಿಯಾತ್ಮಕ ಪ್ರಾಕ್ಕಲ್ಪನೆಗಳನ್ನು (action hypotheses) ಕೈಗೊಳ್ಳಬೇಕಾದ ಕ್ರಿಯಾತ್ಮಕ ಚಟುವಟಿಕೆಗಳನ್ನು ಮಾರ್ಪಡಿಸಿಕೊಳ್ಳಬಹುದು. ಇದರಿಂದ ತಿಳಿದು ಬರುವ ಅಂಶ ವೆಂದರೆ ಎರಡೂ ರೀತಿಯ ಸಂಶೋಧನೆಯ ಗುಣಮಟ್ಟವನ್ನು ನಿರ್ಧರಿಸುವಾಗ ಬೇರೆ ಬೇರೆ ಅಂಶಗಳನ್ನು ಅವಲಂಬಿಸಲಾಗುತ್ತದೆ. ಸಂಶೋಧನೆಯ ಮೌಲ್ಯ ನಿರ್ಧರಿಸಲು ಸಾಂಪ್ರದಾಯಬದ್ಧ ಸಂಶೋಧನೆಯಲ್ಲಿ ಅವಲಂಬಿತ ಜ್ಞಾನದ ಪ್ರಮಾಣವನ್ನೂ ಕ್ರಿಯಾತ್ಮಕ ಸಂಶೋಧನೆಯಲ್ಲಿ ಉಂಟಾಗಬಹುದಾದ ಸುಧಾರಣಾ ಮಟ್ಟವನ್ನೂ ಆಧಾರವಾಗಿಟ್ಟು ಕೊಳ್ಳಬೇಕು.

ಸಾಂಪ್ರದಾಯಬದ್ಧ ಸಂಶೋಧನೆಯಲ್ಲಿ ವಿಶ್ವವನ್ನು (population) ಅಥವಾ ಜನತೆಯನ್ನು ಪ್ರತಿನಿಧಿಸುವ ಪ್ರತಿದರ್ಶವನ್ನು (sample) ಉಪಯೋಗಿಸಿಕೊಂಡು ಪಡೆದ ಫಲಿತಾಂಶಗಳನ್ನು ಇಡೀ ವಿಶ್ವಕ್ಕೆ ಸಾರ್ವತ್ರೀಕರಿಸಲಾದರೆ ಕ್ರಿಯಾತ್ಮಕ ಸಂಶೋಧನೆಯಲ್ಲಿ ಆಯ್ಕೆ ಮಾಡಿಕೊಳ್ಳುವ ಪ್ರತಿದರ್ಶ ವಿಶ್ವವನ್ನು ಪ್ರತಿನಿಧಿಸಲೇ ಬೇಕಾಗಿಲ್ಲ. ಅಂತೆಯೇ ಫಲಿತಾಂಶಗಳನ್ನು ಇಡೀ ವಿಶ್ವಕ್ಕೆ ಸಾರ್ವತ್ರೀಕರಿಸಲಾಗು ವುದಿಲ್ಲ. ಉದಾಹರಣೆ_ 8 ನೆಯ ತರಗತಿ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಸಾಂಪ್ರ ದಾಯಬದ್ಧ ಸಂಶೋಧನೆ ಕೈಗೊಂಡರೆ, ಆ ಸಂಶೋಧನೆಯಲ್ಲಿ ಇಡೀ ರಾಜ್ಯದಲ್ಲಿರುವ ಎಲ್ಲಾ ಶಾಲೆಗಳ 8ನೆಯ ತರಗತಿಯ ಎಲ್ಲಾ ವಿದ್ಯಾರ್ಥಿಗಳನ್ನೂ (ವಿಶ್ವವನ್ನು) ಪ್ರಯೋಗಕ್ಕಾಗಿ ಪರಿಗಣಿಸಲಾಗುವುದಿಲ್ಲ. ಅವರೆಲ್ಲರನ್ನೂ ಪ್ರತಿನಿಧಿಸುವ ಒಂದು ಚಿಕ್ಕ ಗುಂಪನ್ನು ಪ್ರತಿದರ್ಶವನ್ನಾಗಿ ಆಯ್ಕೆ ಮಾಡಿಕೊಂಡು ಪಡೆದ ಫಲಿತಾಂಶಗಳನ್ನು ಇಡೀ ವಿಶ್ವಕ್ಕೆ ಸಾರ್ವತ್ರೀಕರಿಸಲಾಗುತ್ತದೆ. ಆದರೆ ಕ್ರಿಯಾತ್ಮಕ ಸಂಶೋಧನೆಯಲ್ಲಿ ಒಂದು ನಿರ್ದಿಷ್ಟ ಶಾಲೆಯ 8 ನೇ ತರಗತಿಯ ವಿದ್ಯಾರ್ಥಿಗಳಿಗೆ ಸಂಬಂಧಿಸಿದ ಫಲಿತಾಂಶಗಳು ಆ ಗುಂಪಿಗೆ ಮಾತ್ರ ಸೀಮಿತವಾಗಿರುತ್ತದೆಯೇ ವಿನಾ ಇಡೀ ವಿಶ್ವಕ್ಕೆ ಸಾರ್ವತ್ರೀಕರಿಸ ಲಾಗುವುದಿಲ್ಲ. ಆ ನಿರ್ದಿಷ್ಟ ಗುಂಪಿನ ಮಕ್ಕಳ ಸಮಸ್ಯೆ ರಾಜ್ಯದ ಎಲ್ಲಾ ಶಾಲೆಗಳ ಸಮಸ್ಯೆಯಾಗಿಲ್ಲದಿರಬಹುದು, ಅವರಿಗೆ ಅಗತ್ಯವೆನಿಸಿದ ಸಂಶೋಧನಾ ವಿಷಯ ಇತರರಿಗೆ ಅವಶ್ಯಕವಲ್ಲದಿರಬಹುದು. ಒಂದೊಂದು ಶಾಲೇ ತನ್ನದೇ ಆದ ವಿಶಿಷ್ಟತೆಗಳಿಗನುಗುಣ ವಾಗಿ ಸಂಶೋಧನೆಗೆ ವಿವಿಧ ವಿಷಯಗಳನ್ನು ದೊರಕಿಸಿಕೊಳ್ಳಬಹುದು. ಅಂದರೆ ಕ್ರಿಯಾತ್ಮಕ ಸಂಶೋಧನೆಯ ವ್ಯಾಪ್ತಿ ಸೀಮಿತವಾಗಿದೆ ಎಂದರ್ಥ. ಕೆಲವು ವೇಳೆ ಕ್ರಿಯಾತ್ಮಕ ಸಂಶೋಧನೆಯು ಅತಿ ವೈಯಕ್ತಿಕ ಮಟ್ಟಕ್ಕೂ ಇಳಿಯಬಹುದಾಗಿದೆ. ಒಬ್ಬ ವಿದ್ಯಾರ್ಥಿಗಾಗಿ ಕೈಗೊಂಡ ಕ್ರಮದಿಂದ ದೊರೆತ ಪರಿಹಾರ ಮತ್ತೊಬ್ಬ ವಿದ್ಯಾರ್ಥಿಗೆ ಸರಿಯೆನಿಸಲಾರದು. ಆಯಾ ಸನ್ನಿವೇಶಕ್ಕೆ ಮತ್ತು ಆಯಾ ವ್ಯಕ್ತಿಗೆ ಮಾತ್ರ ಅನ್ವಯಿಸು ವಂತಹದಾಗುತ್ತದೆ. ಉದಾಹರಣೆಗೆ, ಒಬ್ಬ ವಿದ್ಯಾರ್ಥಿ ದಿನವೂ ಹೊತ್ತು ಮೀರಿ ಶಾಲೆಗೆ ಬರುವ ಒಬ್ಬ ವಿದ್ಯಾರ್ಥಿ ಪಾಠ ವಿಷಯವನ್ನು ಕಲಿಯಲು ತೊಂದರೆ ಪಡುವ

ಇತ್ಯಾದಿ ವೈಯಕ್ತಿಕ ಸಮಸ್ಯೆಗಳನ್ನು ನಿವಾರಿಸಲು ಪ್ರತ್ಯೇಕವಾಗಿಯೇ ಕ್ರಿಯಾತ್ಮಕ ಸಂಶೋಧನೆಯನ್ನು ಕೈಗೊಳ್ಳಬೇಕಾಗುತ್ತದೆ.

ಕ್ರಿಯಾತ್ಮಕ ಸಂಶೋಧನೆಯ ಫಲಿತಾಂಶಗಳನ್ನು ಇಡೀ ವಿಶ್ವಕ್ಕೆ ಸಾರ್ವತ್ರೀಕರಿಸಲು ಸಾಧ್ಯವಿಲ್ಲದಿದ್ದರೂ ಸಂಶೋಧನೆಯನ್ನು ಕೈಗೊಂಡ ಪರಿಸರ ಹಾಗೂ ಸಮಸ್ಯೆಯನ್ನೇ ಎದುರಿಸಬೇಕಾದ ಸಂದರ್ಭಗಳಿಗೆ ಅಳವಡಿಸಿಕೊಳ್ಳಬಹುದಷ್ಟೇ. ಉದಾಹರಣೆ– ಇಂದು ಯಾವುದೇ ಒಂದು ನಿರ್ದಿಷ್ಟ ಶಾಲೆಯ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಬೋಧಿಸುವ ಕ್ರಮದಲ್ಲಿ ಸುಧಾರಣೆಗಾಗಿ ಕೈಗೊಂಡ ಸಂಶೋಧನೆಯ ಫಲಿತಾಂಶಗಳನ್ನು ಮುಂದೆ ಕೆಲವಾರು ವರ್ಷಗಳವರೆಗೆ ಆ ಶಾಲೆಯ 8ನೇ ತರಗತಿಯ ವಿದ್ಯಾರ್ಥಿಗಳಿಗೆ ಅಳವಡಿಸಿಕೊಳ್ಳಬಹುದಾಗಿರುತ್ತದೆ. ಅಂದರೆ ವರ್ತಮಾನಕಾಲಿಕ ಪಾರ್ಶ್ವಸ್ಥ ವಿಸ್ತಾರಕ್ಕಾಗಿ (lateral extension) ಸಾರ್ವತ್ರೀಕರಣ ಸಾಧ್ಯವಿಲ್ಲದಿದ್ದರೂ ಭವಿಷ್ಯತ್ಕಾಲಕ್ಕೆ ಕೊಂಡೊಯ್ಯುವ ಶೃಂಗರೂಪಿ ವಿಸ್ತಾರಕ್ಕೆ (vertical extension) ಸಾಧ್ಯವಾಗುತ್ತದೆ ಎಂಬುದನ್ನು ಒಪ್ಪಿಕೊಳ್ಳಬಹುದಾಗಿದೆ.

ಒಟ್ಟಿನಲ್ಲಿ ಮೂಲಭೂತ ಸಂಶೋಧನೆಯಂತೆ ಸಂಕೀರ್ಣವೂ, ಸಾಂಪ್ರದಾಯಬದ್ಧವೂ, ವಿಶಾಲವ್ಯಾಪ್ತಿಯೂ ಉಳ್ಳದಾಗಿರದೆ ಕ್ರಿಯಾತ್ಮಕ ಸಂಶೋಧನೆಯು ಸರಳವಾಗಿದ್ದು, ಸೀಮಿತ ವ್ಯಾಪ್ತಿ ಪಡೆದಿದ್ದು ಯಾವುದೇ ನಿರ್ಬಂಧಿತ ಪ್ರಾಯೋಗಿಕ ಕ್ರಮಕ್ಕೆ (ಸಂಪ್ರದಾಯಕ್ಕೆ) ಒಳಪಡುವುದಿಲ್ಲ. ಅತಿ ಸರಳವೂ, ಸುಲಭವೂ ಆದ ಪ್ರತಿವರ್ತೀಕರಣ (sampling) ಹಾಗೂ ಸಂಖ್ಯಾಶಾಸ್ತ್ರಾತ್ಮಕ ವಿಶ್ಲೇಷಣಾ ಕ್ರಮವನ್ನು (statistical analysis) ಅಳವಡಿಸಲಾಗುತ್ತದೆ. ಕನಿಷ್ಠತಮ ತರಬೇತಿಯನ್ನೇ ಪಡೆದಿದ್ದು ಸಂಶೋಧಕನೇ ಸಕ್ರಿಯವಾಗಿ ಪಾಲ್ಗೊಂಡು ಸೂಕ್ತ ಸುಧಾರಣೆಗಳನ್ನೂ, ಪರಿಹಾರಗಳನ್ನೂ ಕಂಡುಕೊಳ್ಳಲು ಸಹಾಯಕವಾಗಿದೆ. ಈ ಸಂಶೋಧನೆಯಲ್ಲಿ ಅಡಗಿರುವ ಕಾರ್ಯ ವಿಧಾನವೆಂದರೆ, ಸಮಸ್ಯೆಗೆ ಕಾರಣವನ್ನು ಅರಿತು ಅದನ್ನು ನಿವಾರಿಸಲು ತಕ್ಷಣದ ಕಾರ್ಯಕ್ರಮ ಕೈಗೊಳ್ಳುವುದೇ ಆಗಿದೆ. ಅಂತೆಯೇ ಶಿಕ್ಷಣದ ಕಾರ್ಯವು ಸಫಲಗೊಂಡು ವಿದ್ಯಾರ್ಥಿಗಳ ಅಭಿವೃದ್ಧಿ ಕಾರ್ಯ ಸಾಧಿಸಲು ಕ್ರಿಯಾತ್ಮಕ ಸಂಶೋಧನೆಯು ಒಂದು ಸುವರ್ಣಸಾಧನವಾಗಿದೆ.

ಕ್ರಿಯಾತ್ಮಕ ಸಂಶೋಧನೆಯ ವಿಧಾನ (Methodology of Action Research)

ಕ್ರಿಯಾತ್ಮಕ ಸಂಶೋಧನೆಯಲ್ಲಿ ಸಾಂಪ್ರದಾಯಬದ್ಧ ಸಂಶೋಧನೆಯಷ್ಟು ಕಟ್ಟುನಿಟ್ಟಾಗಿ ಎಲ್ಲಾ ಹಂತಗಳನ್ನು ನಿರ್ಬಂಧಿತವಾಗಿ ಅನುಸರಿಸಬೇಕಾಗಿಲ್ಲ. ಹಾಗೆಂದ ಮಾತ್ರಕ್ಕೆ ಬೋಧಕನಾಗಲೀ, ಆಡಳಿತಾಧಿಕಾರಿಯಾಗಲೀ ಯಾವುದೇ ಸಮಸ್ಯೆಯ ಬಗೆಗೆ ಯಾವ ಕಟ್ಟುಪಾಡುಗಳೂ ಇಲ್ಲದೆ ತನಗಿಷ್ಟ ಬಂದ ರೀತಿಯಲ್ಲಿ ನಡೆಸಬಹುದೆಂದಲ್ಲ. ಆದ್ದರಿಂದ ಕ್ರಿಯಾತ್ಮಕ ಸಂಶೋಧನಾ ಕಾರ್ಯನಿರ್ವಹಣೆಯು ನಿರ್ಬಂಧಿತವು

ವಾಗಿಲ್ಲವಿದ್ದರೂ ಒಂದು ಗೊತ್ತುಪಡಿಸಿದ ಸಕ್ರಮವನ್ನು ಅನುಸರಿಸಬೇಕಾಗುತ್ತದೆ. ಈ ಕ್ರಮದ ಪ್ರಮುಖ ಹಂತಗಳನ್ನು ಕೆಳಕಂಡಂತೆ ಪಟ್ಟಿ ಮಾಡಬಹುದು.

(1) ಸಮಸ್ಯೆಯನ್ನು ಗುರುತಿಸುವುದು—(Identification of the problem)

(2) ಸಮಸ್ಯೆಯನ್ನು ನಿರ್ದಿಷ್ಟವಾದ ಸ್ವರೂಪದಲ್ಲಿ ನಿರೂಪಿಸುವುದು (Defining and delimiting the problem)

(3) ಸಮಸ್ಯೆಗೆ ಸಂಬಂಧಿಸಿದಂತೆ ಸಂಭವನೀಯ ಕಾರಣಗಳನ್ನು ವಿಶ್ಲೇಷಿಸುವುದು. (Analysis of the probable causes of the problem)

(4) ಸಮಸ್ಯೆಯ ನಿವಾರಣೆಗೆ ಕ್ರಿಯಾತ್ಮಕ ಪ್ರಾಕ್ಕಲ್ಪನೆಗಳನ್ನು ರೂಪಿಸಿ ಕೊಳ್ಳುವುದು.

(Formulation of action hypotheses)

(5) ಕ್ರಿಯಾತ್ಮಕ ಪ್ರಾಕ್ಕಲ್ಪನೆಗಳನ್ನು ಪರೀಕ್ಷಿಸಲು ಸೂಕ್ತವಾದ ಕ್ರಿಯಾತ್ಮಕ ಕಾರ್ಯಕ್ರಮವನ್ನು ನಿರೂಪಿಸಿ ಸಂಶೋಧನಾ ಕಾರ್ಯವನ್ನು ನಡೆಸಿ ಕೊಂಡು ಹೋಗುವುದು.

(Action programme to test the action hypotheses)

(6) ಕ್ರಿಯಾತ್ಮಕ ಕಾರ್ಯಕ್ರಮದ ಮೌಲ್ಯಮಾಪನ ಮಾಡುವುದು.

Evaluation of the action programme

(1) ಸಮಸ್ಯೆಯನ್ನು ಗುರುತಿಸುವುದು :

ಇದು ಕ್ರಿಯಾತ್ಮಕ ಸಂಶೋಧನೆಯಲ್ಲಿ ಪ್ರಪ್ರಥಮವೂ, ಪ್ರಮುಖವೂ, ಪ್ರಬಲವೂ ಆದ ಹಂತವಾಗಿದೆ. ಯಾರೇ ಸಂಶೋಧಕನಾಗಲೀ ತನ್ನ ಕಾರ್ಯದಲ್ಲಿ ಮುಂದುವರಿಯಲು ಮೊದಲು ಸಮಸ್ಯೆಯನ್ನು ಗುರುತಿಸಿ, ಅದರ ಸ್ವರೂಪ ಹಾಗೂ ತೀವ್ರತೆಯನ್ನು ಅರಿತುಕೊಳ್ಳಬೇಕು. ಸಮಸ್ಯೆಯನ್ನು ಎಷ್ಟರಮಟ್ಟಿಗೆ ಮನವರಿಕೆ ಮಾಡಿಕೊಂಡಿರಬಾಗುತ್ತದೆಯೋ ಅಷ್ಟರ ಮಟ್ಟಿಗೆ ಸಂಶೋಧನಾ ಪ್ರಯತ್ನ ಫಲಪ್ರದ ವಾಗಲು ಸಾಧ್ಯವಾಗುತ್ತದೆ. ಒಂದು ಸಮಂಜಸವಾದ ಸಮಸ್ಯೆಯನ್ನು ಆಯ್ಕೆಮಾಡ ಬೇಕಾದರೆ ಸಂಶೋಧಕನು ಸಮಸ್ಯೆಯ ಬಗೆಗೆ ವಸ್ತುನಿಷ್ಠ ಮನೋಭಾವವನ್ನು ಹೊಂದಿದ್ದು, ಅದಕ್ಕೆ ಸಂಬಂಧಪಟ್ಟ ಎಲ್ಲಾ ಅಂಶಗಳನ್ನು ಅರ್ಥೈಸಿಕೊಳ್ಳಲು ಶಕ್ಯ ನಾಗಿರಬೇಕು. ಅಲ್ಲದೆ ಸುಲಭವಾಗಿ ಕಾರ್ಯರೂಪಕ್ಕೆ ಅಳವಡಿಸಿಕೊಳ್ಳಲು ಸಾಧ್ಯವೇ ಎಂಬುದನ್ನು ವಿವೇಚಿಸಬೇಕು. ಆರೋಗ್ಯಕರ ಮನೋಧೋರಣೆಯನ್ನು ಹೊಂದಿದ್ದು ಕ್ರಮಬದ್ಧ ಅಧ್ಯಯನದಲ್ಲಿ ಆಸಕ್ತನಾಗಿರಬೇಕು. ಅತಿಸೂಕ್ಷ್ಮಗ್ರಾಹಿಯಾಗಿದ್ದು ದಿನ,

ನಿತ್ಯ ಪರಿಸರದಲ್ಲಿಯೇ ಎದುರಿಸಬೇಕಾದ ಸಮಸ್ಯೆಗಳನ್ನು ಗುರುತಿಸಲು ಸಮರ್ಥನಾಗಿರಬೇಕು. ಸಮಸ್ಯೆ ವೈಯಕ್ತಿಕವಾಗಿರಬಹುದು, ಸಾಮೂಹಿಕವಾಗಿರಬಹುದು. ವಿವಿಧ ಮಟ್ಟದಲ್ಲಿ ವಿವಿಧ ಸ್ತರದ ತೀವ್ರತೆಯನ್ನೊಳಗೊಂಡಿರಬಹುದು. ಒಟ್ಟಿನಲ್ಲಿ ಶಿಕ್ಷಣ ವ್ಯವಸ್ಥಾಕ್ರಮದಲ್ಲಿ ದಿನವಹಿ ತಲೆದೋರುವ ತತ್‌ಕ್ಷಣದ ಸಮಸ್ಯೆಗಳಿಗೆ ತ್ವರಿತವಾಗಿ ಪರಿಹಾರ ಅಥವಾ ಸುಧಾರಣಾಕ್ರಮಗಳನ್ನು ನಿರೂಪಿಸುವುದು ಅತ್ಯವಶ್ಯಕವೆನಿಸಿದವುಗಳಾಗಿರಬೇಕು.

ಕ್ರಿಯಾತ್ಮಕ ಸಂಶೋಧನಾ ಕ್ರಮದಿಂದ ಪರಿಹರಿಸಬಹುದಾದ ವಿವಿಧೋನ್ಮುಖ ಸಮಸ್ಯೆಗಳನ್ನು ಶಾಲಾ ಶಿಕ್ಷಣದ ವಿವಿಧ ಕ್ಷೇತ್ರಗಳಲ್ಲಿ ಗುರುತಿಸಬಹುದಾಗಿದೆ.

ಕ್ಷೇತ್ರಗಳು	ಸಮಸ್ಯೆಗಳು
(1) ಬೋಧನೆ	ಪ್ರೇರಣೆ, ಪಠ್ಯವಿಷಯ ಗ್ರಹಿಕೆ, ಶಿಕ್ಷಕ–ವಿದ್ಯಾರ್ಥಿಗಳ ನಡುವಿನ ಬಾಂಧವ್ಯ, ಸಂಪರ್ಕ ಮತ್ತು ಸಂಸರ್ಗ ಕ್ರಿಯೆ, ಬೋಧನಾ ಕ್ರಮಗಳು, ಓದುಗಾರಿಕೆ ಮತ್ತು ಬರವಣಿಗೆ ಸಾಮರ್ಥ್ಯಗಳು, ಕಾಗುಣಿತ ದೋಷಗಳು, ಕೈ ಬರಹ, ಶಬ್ದ ಭಂಡಾರ, ಉಚ್ಚಾರಣೆ, ನಿಯೋಜಿತ ಕಾರ್ಯಗಳು, ಆಧುನಿಕ ಬೋಧನಾ ಸಲಕರಣೆಗಳು ಇತ್ಯಾದಿ
(2) ಪಠ್ಯಕ್ರಮ (ಪಠ್ಯಸೂಚಿ)	ಪಠ್ಯ ವಿಷಯಗಳ ಅನ್ಯೋನ್ಯ (ಪರಸ್ಪರ) ಸಂಬಂಧ, ನಿರ್ದಿಷ್ಟ ವಿಷಯದಲ್ಲಿ ಅಡಕವಾಗಿರುವ ವಿವಿಧಾಂಶಗಳು, ಕ್ಲಿಷ್ಟತೆಯ ಮಟ್ಟ, ವಿವಿಧ ಚಟುವಟಿಕೆಗಳ ನಿರ್ವಹಣೆ, ವಿದ್ಯಾರ್ಥಿ ಹಾಗೂ ಬೋಧಕರಲ್ಲಿ ಆಸಕ್ತಿ, ಶಿಸ್ತು ಪರಿಪಾಲನೆ, ವಿವಿಧ ಚಟುವಟಿಕೆಗಳ ಸಂಘಟನೆ ಇತ್ಯಾದಿ.
(3) ಮೌಲ್ಯ ಮಾಪನ	ವಿವಿಧ ಪರೀಕ್ಷೆಗಳ ಉಪಯೋಗ, ಗುಣಮಟ್ಟ ನಿರ್ಧರಿಸುವಿಕೆ, ಮೌಲ್ಯಮಾಪನ ಕ್ರಮಗಳು, ಪರೀಕ್ಷಾ ನಿರ್ವಹಣಾಕ್ರಮ, ಪ್ರಶ್ನೆ ಪತ್ರಿಕೆ ರಚನೆ, ಬೋಧನೆ ಮತ್ತು ಮೌಲ್ಯಮಾಪನದ ಸಂಘಟನೆ ಇತ್ಯಾದಿ.
(4) ಶಾಲಾ ಆಡಳಿತ ಮತ್ತು ನಿರ್ವಹಣೆ	ಶಾಲಾ ಶಿಸ್ತು, ಶಾಲಾ ಗ್ರಂಥಾಲಯ ಮತ್ತು ವಾಚನಾಲಯಗಳು, ಶಾಲೆ ಹಾಗೂ ತರಗತಿಗಳ ಸ್ವಚ್ಛತೆ, ಮುಖ್ಯೋಪಾಧ್ಯಾಯ ಹಾಗೂ ಶಿಕ್ಷಕ ವರ್ಗದ ಸಹಕಾರ, ಪೋಷಕ–ಶಿಕ್ಷಕವರ್ಗ ಸಹಕಾರ,

	ವಿವಿಧ ಶಾಖೆಗಳ ಸಂಘಟನೆ, ಶಾಲಾ ಕಾರ್ಯಕ್ರಮ ನಿರ್ವಹಣೆ ಇತ್ಯಾದಿ.
(5) ಇತರ ಕ್ಷೇತ್ರಗಳು	ಶಾಲೆ ಹಾಗೂ ಸಮುದಾಯ ಸಂಬಂಧ, ಮಾರ್ಗದರ್ಶನ ಮತ್ತು ಸಲಹಾಕಾರ್ಯ, ಶಾಲಾ ಆರೋಗ್ಯ ಸೇವೆಗಳು, ಸಹಪಠ್ಯ ಚಟುವಟಿಕೆಗಳು ಇತ್ಯಾದಿ.

ಯಾವ ಕ್ಷೇತ್ರದಲ್ಲಿಯೇ ಆಗಲಿ ಸಮಸ್ಯೆಗಳು ನೈಜವಾಗಿದ್ದು, ಅವುಗಳಿಗೆ ಪರಿಹಾರಗಳನ್ನು ಕಂಡುಕೊಳ್ಳಲು ಅತಿ ಸುಲಭವಾಗಿ, ಸಹಜವಾಗಿ (ಸಾಂಪ್ರದಾಯ ಬದ್ಧವಾಗಿಲ್ಲದೆ) ಕಾರ್ಯ ನಿರ್ವಹಿಸಲು ಅವಕಾಶವಿರಬೇಕು. ಅವಶ್ಯಕವಾದ ಸಾಮಗ್ರಿ ಸೌಲಭ್ಯಗಳೆಲ್ಲವೂ ತಮ್ಮ ಇತಿಮಿತಿಯನ್ನೊಳಗೊಂಡಿದ್ದರೆ ಉತ್ತಮ.

ಈ ಸಮಸ್ಯೆಯು ಸಾರ್ವತ್ರಿಕವಾಗಿರದೆ ತಾತ್ಕಾಲಿಕವಾಗಿ ನಿರ್ದಿಷ್ಟ ಸಂದರ್ಭಗಳಲ್ಲಿ ತಲೆದೋರಿ, ಅದಕ್ಕೆ ಪರಿಹಾರ ಕಂಡುಕೊಳ್ಳುವುದೇ ಗುರಿಯಾಗಿರುವುದರಿಂದ ಇದನ್ನು ಕ್ರಿಯಾತ್ಮಕ ಸಮಸ್ಯೆ (action problem) ಎಂದು ಕರೆಯಲಾಗುತ್ತದೆ. ಆಯ್ಕೆಯಾಗಿರುವ ಕ್ರಿಯಾತ್ಮಕ ಸಮಸ್ಯೆ ಉತ್ತಮವಾಗಿದೆ ಎನ್ನಬೇಕಾದರೆ ಕೆಳಕಂಡ ಅಂಶಗಳು ಆಗತ್ಯವಾಗಿರಬೇಕು.

(1) ಸಮಸ್ಯೆಯು ಆಗತ್ಯತೆ ಅನುಭವಮಥನದಿಂದ ತಲೆಯೆತ್ತಿದಂತಿರಬೇಕು.

(2) ಶಾಲಾ ಜೀವನಕ್ಕೆ ಸಂಬಂಧಿಸಿರಬೇಕು.

(3) ಕಾಲ್ಪನಿಕವಾಗಿಲ್ಲದೆ, ನೈಜವಾಗಿರಬೇಕು.

(4) ಸಂಶೋಧಕನ ಇತಿಮಿತಿಗಳಿಗೆ ಒಳಪಟ್ಟಂತಿರಬೇಕು.

(5) ವಸ್ತುನಿಷ್ಠ ವಿಶ್ಲೇಷಣೆಗೆ ಅವಕಾಶವಿರಬೇಕು.

(6) ಸಾರ್ವತ್ರಿಕವಾಗಿಲ್ಲದೆ, ನಿರ್ದಿಷ್ಟವಾದ ವ್ಯಾಪ್ತಿ ಪಡೆದಿರಬೇಕು.

(7) ಸ್ಪಷ್ಟವಾದ ನಿರೂಪಣೆಗೆ ಒಳಪಡುವಂತಿರಬೇಕು.

(8) ಸಂಶೋಧಕನೂ ಸಮಸ್ಯೆಯ ಬಗೆಗೆ ಆಸಕ್ತನೂ, ಕುತೂಹಲಿಯೂ ಆಗಿರಬೇಕು.

(2) ಸಮಸ್ಯೆಯನ್ನು ನಿರ್ದಿಷ್ಟವಾದ ಸ್ವರೂಪದಲ್ಲಿ ನಿರೂಪಿಸುವುದು

ಈ ಹಂತದಲ್ಲಿ ಸಮಸ್ಯೆಯ ನಿರ್ದಿಷ್ಟ ಸ್ವರೂಪ ಹಾಗೂ ಮಿತಿ ಕಲ್ಪನೆಗಳನ್ನು ನಿರ್ಣಯಿಸಲಾಗುತ್ತದೆ. ನಿರ್ದಿಷ್ಟತೆ, ನಿಖರತೆ, ಸ್ಪಷ್ಟತೆಗಳು ವೈಜ್ಞಾನಿಕ ಕ್ರಮದ ಲಕ್ಷಣಗಳು. ಕ್ರಿಯಾತ್ಮಕ ಸಂಶೋಧನೆಯೂ ಒಂದು ವೈಜ್ಞಾನಿಕ ವಿಧಾನವೆಂದು ಪರಿಗಣಿಸುವುದರಿಂದ ಆ ಲಕ್ಷಣಗಳು ಇಲ್ಲಿಯೂ ಅವಶ್ಯಕವೆನಿಸುತ್ತವೆ. ಆಯ್ಕೆಯಾದ ಸಮಸ್ಯೆ ಎಷ್ಟು ನಿಖರವಾಗಿ ಸ್ಪಷ್ಟತೆಯನ್ನು ಹೊಂದಿರುತ್ತದೆಯೋ ಸಂಶೋಧನಾ ಕಾರ್ಯವೂ ಅಷ್ಟೇ ನಿರ್ದಿಷ್ಟತೆ, ನಿಷ್ಕೃಷ್ಟತೆಗಳನ್ನು ಪಡೆದಿರುತ್ತದೆ. ಆದ್ದರಿಂದ ಸಂಶೋಧಕ ಕಾರ್ಯನಿರ್ವಹಿಸಬೇಕಾದ ಕ್ಷೇತ್ರದಲ್ಲಿ ತನ್ನ ಎಲ್ಲೆಯನ್ನೂ, ವ್ಯಾಪ್ತಿ

ಯನ್ನೂ, ನಿರ್ದೇಶಿತ ದಿಕ್ಕನ್ನೂ, ಅತ್ಯವಶ್ಯಕವಾಗಿ ಗಮನಿಸಬೇಕಾದ ಅಂಶಗಳನ್ನೂ ನಿರ್ಣಯಿಸಿಕೊಳ್ಳಬೇಕು. ಅದಕ್ಕಾಗಿ ಸಮಸ್ಯೆಯನ್ನು ವಿಶದವಾಗಿ ವಿಶ್ಲೇಷಿಸಬೇಕು.

ಉದಾ:- ಯಾವುದೇ ಒಂದು ಶಾಲೆಯಲ್ಲಿ ಬೋಧಕ ಬೋಧನಾಕ್ಷೇತ್ರದಲ್ಲಿ ಕಾಗುಣಿತ ದೋಷಗಳ ಬಗೆಗೆ ಸಮಸ್ಯೆಯನ್ನೆದುರಿಸಿ, ಅವುಗಳ ನಿವಾರಣೆಗಾಗಿ ಕ್ರಿಯಾತ್ಮಕ ಸಂಶೋಧನೆಯನ್ನು ಕೈಗೊಳ್ಳಬಹುದು. ಈ ಸಮಸ್ಯೆಯನ್ನು 'ಕಾಗುಣಿತ ದೋಷಗಳ ನಿವಾರಣೆ' ಎಂದಿಷ್ಟೇ ನಿರೂಪಿಸಿದರೆ ಅರ್ಥಪೂರ್ಣವಾಗದು. ಕಾಗುಣಿತ ದೋಷ ಎಂದಾಗ ಯಾವ ಭಾಷೆಯಲ್ಲಿ, ಯಾವ ದರ್ಜೆಯ ಮಟ್ಟದಲ್ಲಿ, ಯಾವ ತರಗತಿಯಲ್ಲಿ ಇತ್ಯಾದಿ ಪ್ರಶ್ನೆಗಳು ಉದ್ಭವಿಸುತ್ತವೆ. ಈ ಪ್ರಶ್ನೆಗಳಿಗೆ ನಿರ್ದಿಷ್ಟವಾಗಿ ಉತ್ತರಿಸಿಕೊಂಡು ನಿರೂಪಿಸಿದಾಗ ಸಮಸ್ಯೆಯು ಅರ್ಥಪೂರ್ಣವಾಗಿ ಸ್ಪಷ್ಟತೆಯನ್ನು ಪಡೆಯುತ್ತದೆ. ಅಂದರೆ '8 ನೇ ತರಗತಿಯ ('ಬಿ' ವಿಭಾಗದ) ವಿದ್ಯಾರ್ಥಿಗಳ ಇಂಗ್ಲೀಷ್ ಬರವಣಿಗೆಯಲ್ಲಿ ಅಧಿಕವಾಗಿ ಕಂಡುಬರುವ ಕಾಗುಣಿತ ದೋಷಗಳ ನಿವಾರಣೆ' ಎಂದು ನಿರೂಪಿಸಿದರೆ ಆಯ್ಕೆಯಾದ ಸಮಸ್ಯೆಯು ನಿರ್ದಿಷ್ಟ ಸ್ವರೂಪ ಹಾಗೂ ಮಿತಿ ಕಲ್ಪನೆಗಳನ್ನು ನಿರ್ಣಯಿಸಿದಂತಾಗುತ್ತದೆ. ಸಂಶೋಧನಾ ಕಾರ್ಯದಲ್ಲಿ ಮುಂದೆ ಕೈಗೊಳ್ಳಬೇಕಾದ ಎಲ್ಲಾ ಚಟುವಟಿಕೆಗಳಿಗೂ ಸ್ಪಷ್ಟ ಕಲ್ಪನೆಯನ್ನೊದಗಿಸಲು ಸಹಾಯಕವಾಗುತ್ತದೆ.

ಒಟ್ಟಿನಲ್ಲಿ ಸಮಸ್ಯೆಯ ಮಿತಿಕಲ್ಪನೆ ಅತಿ ಸೀಮಿತವಾಗಿಯೂ, ಅತಿ ವ್ಯಾಪಕವಾಗಿಯೂ ಇರದಂತೆ ಗಮನಿಸಬೇಕು. ಮಿತಿಕಲ್ಪನೆ ಅಥವಾ ವ್ಯಾಪ್ತಿ ಕನಿಷ್ಠತಮವಾದಾಗ ಸಂಶೋಧನಾಕಾರ್ಯ ಸಾಧನಾಪೂರ್ಣವಾಗಲಾರದು. ಅಂತೆಯೇ ಅದರ ವ್ಯಾಪ್ತಿ ಅತಿಯಾಗಿ ವಿಸ್ತರಿಸಲ್ಪಟ್ಟರೆ ಸಮಸ್ಯೆಯ ಸ್ಪಷ್ಟತೆಯನ್ನು, ನಿಖರತೆಯನ್ನು ಗುರುತಿಸಿಕೊಳ್ಳುವಲ್ಲಿ ಕುಂಠಿತವಾಗಬಹುದು. ಆದಕಾರಣ ಸಮಸ್ಯೆಯ ವಿಶ್ಲೇಷಣೆಯಲ್ಲಿ ಕೂದಲು ಸೀಳುವ ಪ್ರಯತ್ನ ಮಾಡದೆ ಸಮಸ್ಯೆಯ ತೀವ್ರತೆ, ಸಮಸ್ಯೆಯನ್ನು ಎದುರಿಸಬೇಕಾದವನ ಸಾಮರ್ಥ್ಯ, ಪರಿಸರದ ಇತಿಮಿತಿಗಳನ್ನು ಗಮನದಲ್ಲಿರಿಸಿಕೊಂಡು ಸಮಸ್ಯೆಯ ಸ್ವರೂಪವನ್ನು ನಿರ್ಣಯಿಸಬೇಕು.

(3) ಸಮಸ್ಯೆಗೆ ಸಂಬಂಧಿಸಿದಂತೆ ಸಂಭವನೀಯ ಕಾರಣಗಳನ್ನು ವಿಶ್ಲೇಷಿಸುವುದು

ಸಮಸ್ಯೆಯ ಉಗಮಕ್ಕೆ ಮೂಲತಃ ಕಾರಣವಾದ ಅಂಶಗಳಾವುವು, ಅದರ ಪೋಷಣೆಗೆ ಆಧಾರವಾದ ಅಂಶಗಳಾವುವು ಎಂಬುದನ್ನು ಕುರಿತು ವಿವೇಚಿಸಬೇಕು. ಅಂತೆಯೇ ಸಮಸ್ಯೆಗೆ ಸಂಬಂಧಿಸಿದಂತೆ ಸಂಭವನೀಯವಾದ ಕಾರಣಗಳೆಲ್ಲವನ್ನೂ ಊಹಿಸಿ ಪಟ್ಟಿ ಮಾಡಬೇಕು. ಒಂದೊಂದು ಕಾರಣವನ್ನು ಪ್ರತ್ಯೇಕವಾಗಿ ವಿಶ್ಲೇಷಿಸಿ, ಕೂಲಂಕಷವಾಗಿ ಪರಿಶೀಲಿಸಿ ಸಾಧ್ಯಾಸಾಧ್ಯತೆಗಳನ್ನು ತುಲನೆಮಾಡಿ ಸಮಸ್ಯೆಗೆ ಸೂಕ್ತವೆನಿಸಿದ ಪ್ರಮುಖವಾದ ಅಂಶಗಳನ್ನು ದೃಢಪಡಿಸಿಕೊಳ್ಳಬೇಕು. ಯಾವುದೇ

ಸಂಭವನೀಯ ಕಾರಣವನ್ನು ದೃಢಪಡಿಸಲು ಕೆಳಕಂಡ ಅಂಶಗಳನ್ನು ಗಮನದಲ್ಲಿರಿಸಬೇಕು.

(1) ಸಮಸ್ಯೆಗೆ ತಾರ್ಕಿಕವಾಗಿ ಸಂಬಂಧಿಸಿರಬೇಕು, ಅತಿಸಿಕಟವರ್ತಿಯಾಗಿರಬೇಕು.

(2) ಸಾಧಿಸಿ ನೋಡಲು ಅಥವಾ ಒರೆಹಚ್ಚಿ ನೋಡಲು ಅವಕಾಶವಿರಬೇಕು.

(3) ಸಾಮಾನ್ಯವಾಗಿಲ್ಲದೆ ಸಮಸ್ಯೆಗೆ ನಿಖರವಾಗಿರಬೇಕು.

(4) ಘಂಟಾಘೋಷವಾಗಿ ಸಿದ್ಧಪಡಿಸಿ ಹೇಳುವಂತಿರಬೇಕು.

ಉದಾಹರಣೆ :– 8 ನೇ ತರಗತಿಯ ವಿದ್ಯಾರ್ಥಿಗಳ ಕಾಗುಣಿತ ದೋಷಗಳಿಗೆ ಸಂಬಂಧಿಸಿದಂತೆ ದೃಢಪಡಿಸಲಾದ ಕೆಲವು ಕಾರಣಗಳನ್ನು ಪಟ್ಟಿಮಾಡಲಾಗಿದೆ.

(1) ವಿದ್ಯಾರ್ಥಿಗಳು ಬರವಣಿಗೆಯಲ್ಲಿ ಆಸಕ್ತಿ ವಹಿಸುವುದಿಲ್ಲ.

(2) ಶಿಕ್ಷಕರು ವಿದ್ಯಾರ್ಥಿಗಳ ಬರವಣಿಗೆಯನ್ನು ಪರಿಶೀಲಿಸುವಾಗ ಕಾಗುಣಿತ ದೋಷಗಳಿಗೆ ಗಮನ ಕೊಡುವುದಿಲ್ಲ.

(3) ಶಿಕ್ಷಕರು ವಿದ್ಯಾರ್ಥಿಗಳ ಕಾಗುಣಿತ ದೋಷಗಳನ್ನು ತಿದ್ದಿದ ನಂತರ ಪುನಃ ತಲೆದೋರದಂತೆ ಮಾಡಲು ಆವಶ್ಯಕವಾದ ಪುನರಾವರ್ತನಾಭ್ಯಾಸಗಳ ಅನುಸರಣಾ ಕಾರ್ಯವನ್ನು ಕೈಗೊಳ್ಳುವುದಿಲ್ಲ.

(4) ಸಮಸ್ಯೆಯ ನಿವಾರಣೆಗೆ ಕ್ರಿಯಾತ್ಮಕ ಪ್ರಾಕ್ಕಲ್ಪನೆಗಳನ್ನು ರೂಪಿಸಿಕೊಳ್ಳುವುದು.

ಪ್ರಾಕ್ಕಲ್ಪನೆ ಎಂದರೇನು ? ಪ್ರಾಕ್ಕಲ್ಪನೆಯನ್ನು ಹೇಗೆ ರೂಪಿಸುವುದು ? ವಿಧಗಳಾವುವು ? ಎಂಬುದನ್ನು ವಿಶದಪಡಿಸುವ ಪ್ರಯತ್ನ ಮಾಡದೆ ನೇರವಾಗಿ ಕ್ರಿಯಾತ್ಮಕ ಸಂಶೋಧನೆಗೆ ಸಂಬಂಧಿಸಿದಂತೆ ಮಾತ್ರ ವಿಚಾರ ಮಾಡಲಾಗಿದೆ. ಕ್ರಿಯಾತ್ಮಕ ಸಂಶೋಧನೆಯಲ್ಲಿ ಪ್ರಾಕ್ಕಲ್ಪನೆಯು ಸಾರ್ವತ್ರಿಕವಾಗಿಲ್ಲದೆ ತತ್‌ಕ್ಷಣದ ಸಮಸ್ಯೆಗೆ ಸೂಕ್ತವಾದ ಪ್ರಾಯೋಗಿಕ ಅಥವಾ ಕ್ರಿಯಾತ್ಮಕ ಪರಿಹಾರವನ್ನು ಸೂಚಿಸುವುದರಿಂದ [ಕ್ರಿಯಾತ್ಮಕ ಪ್ರಾಕ್ಕಲ್ಪನೆ] ಎಂದು ಕರೆಯಲಾಗುತ್ತದೆ. ಇದು ಕ್ರಿಯಾತ್ಮಕವಾಗಿ ಕೈಗೊಳ್ಳಬೇಕಾದ ಸಂಶೋಧನಾಕಾರ್ಯಕ್ಕೆ ನಿರ್ದಿಷ್ಟತೆ ಹಾಗೂ ಸ್ಪಷ್ಟತೆಯನ್ನು ಕಲ್ಪಿಸುವುದರ ಮೂಲಕ ಮಾರ್ಗದರ್ಶಕವಾಗುವುದರಿಂದ ಕ್ರಿಯಾತ್ಮಕ ಸಂಶೋಧನೆಯಲ್ಲಿ ಕ್ರಿಯಾತ್ಮಕ ಪ್ರಾಕ್ಕಲ್ಪನೆಯನ್ನು ರೂಪಿಸುವುದು ಪ್ರಮುಖವಾದ ಘಟ್ಟವಾಗಿದೆ. ಸಂಶೋಧಕ ತಲುಪಬೇಕಾದ ಗುರಿಯನ್ನು ಮುಟ್ಟಲು ಸಹಾಯಕವಾಗಿರುತ್ತದೆ. ಸಮಸ್ಯೆಗೆ ಸಂಬಂಧಿಸಿದ ಕಾರಣಗಳನ್ನು ಪರಿಶೀಲಿಸಿ ದೃಢಪಡಿಸಿಕೊಂಡ ನಂತರ ಸಾಧ್ಯವಾಗಬಹುದಾದ ಸೂಕ್ತವಾದ ನಿವಾರಣಾಕ್ರಮ ಅಥವಾ ಪರಿಹಾರ ಕ್ರಮಗಳನ್ನು ಸ್ಪಷ್ಟವಾಗಿ ನಿರೂಪಿಸುವುದೇ ಕ್ರಿಯಾತ್ಮಕ ಪ್ರಾಕ್ಕಲ್ಪನೆಯಾಗಿರುತ್ತದೆ.

ಉತ್ತಮವಾದ ಕ್ರಿಯಾತ್ಮಕ ಪ್ರಾಕ್ಕಲ್ಪನೆಯು (1) ಪ್ರಾಯೋಗಿಕ ಸನ್ನಿವೇಶಗಳಲ್ಲಿ ಕರಾರುವಾಕ್ಕಾಗಿ ಸಮರ್ಥಿಸುವಂತಿರಬೇಕು. (2) ಅವರ ನಿರೂಪಣೆಯಲ್ಲಿ ಉಪಯೋಗಿಸುವ ಪ್ರತಿಯೊಂದು ಪದವೂ ಅರ್ಥಪೂರ್ಣವಾಗಿದ್ದು, ಸರಳವಾಗಿದ್ದು, ಸ್ಪಷ್ಟತೆಯಿಂದ ಕೂಡಿರಬೇಕು. (3) ಉದ್ದೇಶ ಸುಸ್ಪಷ್ಟವಾಗಿದ್ದು ಸುಸಂಬದ್ಧವಾಗಿ ಸಮಸ್ಯೆಗೆ ನೇರವಾಗಿ ತಾಗುವಂತಿರಬೇಕು. (4) ಸಂಶೋಧಕನ ಇತಿಮಿತಿಗಳಿಗೆ ಒಳಪಟ್ಟಿದ್ದು ಮಿತವ್ಯಯದಲ್ಲಿಯೇ ಕಾರ್ಯರೂಪಕ್ಕೆ ತರುವಂತಿರಬೇಕು. ಒಟ್ಟಿನಲ್ಲಿ ಕ್ರಿಯಾತ್ಮಕ ಪ್ರಾಕ್ಕಲ್ಪನೆಯು ಸಮರ್ಥನೆ, ಸ್ಪಷ್ಟತೆ, ಉದ್ದೇಶ ಪೂರ್ವಕತೆ, ಸುಸಂಬದ್ಧತೆ ಹಾಗೂ ಮಿತಾಚರಣೆಗಳನ್ನು ಪಡೆದಿರಬೇಕು.

ಕ್ರಿಯಾತ್ಮಕ ಸಂಶೋಧಕ ಸಾಕಷ್ಟು ಅನುಭವ, ಒಳನೋಟ ಹಾಗೂ ಸೃಜನಶೀಲ ಕಲ್ಪನಾಶಕ್ತಿಗಳನ್ನು ಹೊಂದಿದ್ದು ಸಮಸ್ಯೆಯ ಕಾರಣಗಳೆಲ್ಲವನ್ನು ಕೂಲಂಕಷವಾಗಿ ವಿಶ್ಲೇಷಿಸಿ, ಅದೇ ಕ್ಷೇತ್ರದಲ್ಲಿ ಕಾರ್ಯನಿರ್ವಹಿಸುವ ಇತರ ವ್ಯಕ್ತಿಗಳೊಡನೆ ಚರ್ಚಿಸಿ, ವಿಚಾರಮಾಡಿ ಪ್ರಾಕ್ಕಲ್ಪನೆಯನ್ನು ರೂಪಿಸಿದ್ದೇ ಆದರೆ ಅದು ಉತ್ತಮವಾಗಿರುತ್ತದೆ. ಸಂಶೋಧನಾಕ್ಷೇತ್ರದಲ್ಲಿ ಇತ್ತೀಚೆಗೆ ಕಂಡು ಬರುವ ಸುಧಾರಿತ ಅಂಶಗಳ ಅರಿವಿನ ಜೊತೆಗೆ ಶಾಲೆಯ ಹಾಗೂ ವಿದ್ಯಾರ್ಥಿಗಳ ಏಳಿಗೆಗೆ ಮನಸ್ಸಿಡುವಂತಹ ಆಸಕ್ತಿ ಹೊಂದಿದ್ದು ನಿಷ್ಠಾಪೂರ್ವಕನಾಗಿ ಕಾರ್ಯನಿರತನಾದಾಗ ಮೂಡಿ ಬರುವ ಪ್ರಾಕ್ಕಲ್ಪನೆ ಉತ್ತಮವಾಗಿರುವುದರಲ್ಲಿ ಸಂಶಯವೇ ಇಲ್ಲವೆನ್ನಬಹುದು. ಪ್ರಾಕ್ಕಲ್ಪನೆ ಎಷ್ಟು ಸುಸಂಬದ್ಧವೂ ಸುಸ್ಪಷ್ಟವೂ ಆಗಿರುತ್ತದೆಯೋ ಕ್ರಿಯಾತ್ಮಕ ಸಂಶೋಧನಾ ಕಾರ್ಯವೂ ಅಷ್ಟೇ ಅರ್ಥಪೂರ್ಣವೂ ಫಲಪ್ರದವೂ ಪರಿಣಾಮಕಾರಿಯೂ ಆಗಿರುತ್ತದೆ.

ಉದಾಹರಣೆಗೆ ತೆಗೆದುಕೊಂಡಿರುವ ಸಮಸ್ಯೆಗೆ ರೂಪಿಸಿದ ಪ್ರಾಕಲ್ಪನೆ :–

ಕೆಳಕಂಡ ಚಟುವಟಿಕೆಗಳನ್ನು ಕೈಗೊಳ್ಳುವುದರಿಂದ ವಿದ್ಯಾರ್ಥಿಗಳ ಇಂಗ್ಲೀಷ್ ಬರವಣಿಗೆಯಲ್ಲಿ ಕಾಗುಣಿತ ದೋಷಗಳು ಕಣ್ಮರೆಯಾಗುವುವು.

(1) ವಿದ್ಯಾರ್ಥಿಗಳು ಇಂಗ್ಲೀಷ್ ಬರವಣಿಗೆ ಕೆಲಸವನ್ನು ಕ್ರಮಬದ್ಧವಾಗಿಯೂ ನಿಯುತವಾಗಿಯೂ ಕೈಗೊಳ್ಳುವಂತೆ ಪ್ರೋತ್ಸಾಹಿಸುವುದು.

(2) ಶಿಕ್ಷಕರು ವಿದ್ಯಾರ್ಥಿಗಳ ಬರವಣಿಗೆ ಕೆಲಸವನ್ನು ನಿಯತವಾಗಿ ತಿದ್ದುವುದು.

(3) ತಿದ್ದುವಿಕೆಯ ನಂತರ ವಿದ್ಯಾರ್ಥಿಗಳು ಕಾಗುಣಿತ ದೋಷರಹಿತವಾಗಿ ಬರೆಯುವುವನ್ನು ಅಭ್ಯಾಸ ಮಾಡಲು ಸೂಕ್ತವಾದ ಅನುಸರಣಾ ಕಾರ್ಯಕ್ರಮಗಳನ್ನು ಕೈಗೊಳ್ಳುವುದು.

(4) ಕ್ರಿಯಾತ್ಮಕ ಪ್ರಾಕ್ಕಲ್ಪನೆಗಳನ್ನು ಪರೀಕ್ಷಿಸಲು ಸೂಕ್ತವಾದ ಕ್ರಿಯಾತ್ಮಕ ಕಾರ್ಯಕ್ರಮವನ್ನು ನಿರೂಪಿಸಿ ಸಂಶೋಧನಾ ಕಾರ್ಯವನ್ನು ನಡೆಸಿಕೊಂಡು ಹೋಗುವುದು.

ಈ ಹಂತದಲ್ಲಿ ಕೈಗೊಳ್ಳುವ ಕಾರ್ಯಕ್ರಮ ತತ್ಸಂಬಧವಾದ ಸಮಸ್ಯೆಗೆ ಮೀಸಲಾಗಿರುವುದರಿಂದಲೂ, ತ್ವರಿತವಾಗಿ ಪರಿಹಾರ ಕ್ರಮಗಳನ್ನು ಕಂಡು ಕೊಳ್ಳಲು ಸಕ್ರಿಯವಾಗಿ ಸಹಕಾರಿಯಾಗಿರುವುದರಿಂದಲೂ, ಪ್ರಾಯೋಗಿಕತೆಗೆ ಆದ್ಯತೆ ನೀಡುವುದರಿಂದಲೂ, ಶಾಸ್ತ್ರಬದ್ಧ ಸಂಶೋಧನೆಯಷ್ಟು ನಿರ್ಬಂಧಿತ ಕ್ರಮವನ್ನಳವಡಿಸದಿರುವುದರಿಂದಲೂ ಇದನ್ನು ['ಕ್ರಿಯಾತ್ಮಕ ಕಾರ್ಯಕ್ರಮ'] (action programme) ಎಂದು ಹೇಳಲಾಗುತ್ತದೆ. ಕ್ರಿಯಾತ್ಮಕ ಪ್ರಾಕ್ಕಲ್ಪನೆಗಳನ್ನು ಕಾರ್ಯರೂಪಕ್ಕಿಳಿಸಲು ಅವಶ್ಯಕವಾದ ಯೋಜನೆಯನ್ನು ತಯಾರಿಸಬೇಕು. ಈ ಯೋಜನಾ ಕಾರ್ಯದ ಪ್ರಣಾಳಿಕೆ ಪ್ರಮುಖವಾಗಿ ಮೂರು ಅಂಶಗಳನ್ನೊಳಗೊಂಡಿರಬೇಕು—(1) ಕೈಗೊಳ್ಳಬೇಕಾದ ಚಟುವಟಿಕೆಗಳು ಹಾಗೂ ನಿರ್ವಹಿಸುವ ಕ್ರಮಗಳ ವಿವರಣೆ (2) ಯೋಜನೆಯನ್ನು ಕಾರ್ಯರೂಪಕ್ಕಿಳಿಸಲು ಅವಶ್ಯಕವಾದ ಮೂಲಾಧಾರಗಳು, ಮಾಧ್ಯಮಗಳು, ತಂತ್ರ ಹಾಗೂ ಸಾಧನಗಳ ರೂಪರೇಖೆ (3) ಯೋಜನೆಯನ್ನು ಪೂರ್ಣಗೊಳಿಸಲು ಬೇಕಾದ ಅವಧಿ.

ನಿಯೋಜಿತ ಯೋಜನೆಯನ್ನು ಕ್ರಮಬದ್ಧವಾಗಿ ಕೈಗೊಳ್ಳಬೇಕು. ಸಂಶೋಧನಾ ಸಾಧನಗಳಾದ ವೀಕ್ಷಣೆ, ಸಂದರ್ಶನ, ಪರೀಕ್ಷೆಗಳು, ಪ್ರಶ್ನಾವಳಿ, ತಾಳಿಪಟ್ಟಿ, ದರ್ಜಾಮಾಪನಿ ಇತ್ಯಾದಿಗಳಲ್ಲಿ ಪ್ರಸಕ್ತ ಸಮಸ್ಯೆಗೆ ಅವಶ್ಯಕವಾದುದನ್ನು ಅಳವಡಿಸಿಕೊಳ್ಳಬೇಕು. ಆ ಸಾಧನವು ವಿಶ್ವಸನೀಯವೂ, ವಸ್ತುನಿಷ್ಠವೂ, ಸಮಂಜಸವೂ, ಸರಳವೂ, ಸಹಜವೂ, ನಿಷ್ಪಕ್ಷಪಾತವೂ, ಸುಸಂಬದ್ಧವೂ, ಸಮಗ್ರವೂ ಹಾಗೂ ಪ್ರಯೋಗಾರ್ಹವೂ ಆಗಿರುವಂತೆ ಎಚ್ಚರವಹಿಸಬೇಕು. ಅತಿಯಾದ ನಿರ್ಬಂಧನೆಗೊಳಪಡಿಸದೆ ಅವಶ್ಯಕವೆನಿಸಿದೆಡೆಯಲ್ಲಿ ಸೂಕ್ತ ಮಾರ್ಪಾಡುಗಳನ್ನು ಮಾಡಿಕೊಂಡು ಕಾರ್ಯ ಮುಂದುವರಿಸಿಕೊಂಡು ಹೋಗಲು ಅವಕಾಶವಿರಬೇಕು ಹೀಗೆಂದ ಮಾತ್ರಕ್ಕೆ ಕಾರ್ಯಕ್ರಮ ನಕ್ಷೆಯನ್ನು ನಿರೂಪಿಸಿಕೊಂಡಿದ್ದರೂ ಬದಲಾವಣೆಗೆ ಅವಕಾಶವಿದೆಯೆಂದು ಅಸಂಬದ್ಧ ಹಾಗೂ ಅನಗತ್ಯ ಮಾರ್ಪಾಡುಗಳಿಗೆಡೆಮಾಡಬೇಕೆಂದಲ್ಲ. ಪ್ರಾಯೋಗಿಕವಾಗಿ, ಸುಲಭ ಸಾಧ್ಯವಾಗಿ ಸಂಶೋಧನಾಕಾರ್ಯ ಮುಂದುವರಿಯಬೇಕಷ್ಟೆ. ಈ ಕಾರ್ಯ ಮುಂದುವರಿಯುತ್ತಿರುವಾಗಲೇ ಅವಶ್ಯಕವಾದ ಮಾಪನ ಮಾಹಿತಿಗಳನ್ನು ಸಂಗ್ರಹಿಸಿಡಬೇಕು. ಇದು ಕ್ರಿಯಾತ್ಮಕ ಕಾರ್ಯಕ್ರಮದ ಸಫಲತೆಯನ್ನು ನಿರ್ಧರಿಸಲು ಸಹಾಯಕವಾಗುತ್ತದೆ.

ಉದಾ : ಸಂಶೋಧನೆಗೆ ಬೇಕಾದ ಅವಧಿ—ಮೂರು ತಿಂಗಳುಗಳು.

ಕ್ರಮ : ಆರಂಭದಲ್ಲಿ ವಿದ್ಯಾರ್ಥಿಗಳಲ್ಲಿ ಕಾಗುಣಿತ ದೋಷಗಳ ಮಟ್ಟವನ್ನು ಅಳೆಯಲು ಒಂದು ವಸ್ತುನಿಷ್ಠ ಕಾಗುಣಿತ ಪರೀಕ್ಷಣವನ್ನು ಪ್ರಯೋಗಿಸುವುದು (ಪೂರ್ವ ಪರೀಕ್ಷೆ-pre test), ನಂತರ ಕೆಳಕಂಡ ಚಟುವಟಿಕೆಗಳನ್ನು ಕೈಗೊಳ್ಳುವುದು.

(1) ಎಷ್ಟು ಬರವಣಿಗೆ ಕೆಲಸ ಕೊಡಬೇಕು, ಶಾಲಾ ವೇಳಾಪಟ್ಟಿಯಲ್ಲಿ ಹೇಗೆ ಅಳವಡಿಸಬೇಕು ಎಂಬುದನ್ನು ನಿರ್ಧರಿಸಿ, ಅದರಂತೆ ವಿದ್ಯಾರ್ಥಿಗಳಿಗೆ ಬರವಣಿಗೆ ಕೆಲಸ ಒದಗಿಸುವುದು.

(2) ವಿದ್ಯಾರ್ಥಿಗಳ ಬರವಣಿಗೆ ಕೆಲಸವನ್ನು ತಿದ್ದುಪಡಿ ಮಾಡಿ, ಅವರ ತಪ್ಪುಗಳನ್ನು ತಿಳಿಯಪಡಿಸುವುದು.

(3) ಕಾಗುಣಿತ ದೋಷಗಳು ತಲೆದೋರದಂತೆ ಮಾಡಲು ಅಭ್ಯಾಸ ಚಟುವಟಿಕೆಗಳನ್ನು ಕೈಗೊಳ್ಳುವುದು.

ಕೊನೆಯಲ್ಲಿ ಮತ್ತೊಮ್ಮೆ ವಿದ್ಯಾರ್ಥಿಗಳಲ್ಲಿ ಕಾಗುಣಿತ ದೋಷಗಳು ಎಷ್ಟರ ಮಟ್ಟಿಗೆ ನಿವಾರಣೆಯಾಗಿವೆ ಎಂಬುದನ್ನು ಗುರುತಿಸಲು ಮೊದಲು ತಯಾರಿಸಿದ ಪರೀಕ್ಷೆಯನ್ನೇ ಕೊಡುವುದು (ಅಂತಿಮ ಪರೀಕ್ಷೆ -final/post test).

(6) ಕ್ರಿಯಾತ್ಮಕ ಕಾರ್ಯಕ್ರಮದ ಮೌಲ್ಯಮಾಪನ ಮಾಡುವುದು

ಕ್ರಿಯಾತ್ಮಕ ಕಾರ್ಯಕ್ರಮದ ಮೂಲಕ ದೊರೆತ ಮಾಹಿತಿಗಳನ್ನು ವಿಶ್ಲೇಷಿಸಿ, ವಿಮರ್ಶಿಸಿ ಹೊರಪಡಿಸಿದ ತೀರ್ಮಾನಗಳನ್ನು ನಿರ್ಣಯಿಸಬೇಕು. ಆ ತೀರ್ಮಾನಗಳು ಎಷ್ಟರಮಟ್ಟಿಗೆ ಒಪ್ಪಿಗೆಯಾಗುತ್ತವೆ ಅಥವಾ ಫಲಕಾರಿಯಾಗುತ್ತವೆ ಎಂಬುದನ್ನು ಮೌಲ್ಯಮಾಪನ ಮಾಡಬೇಕು. ಅಂದರೆ ನಿರೂಪಿಸಿದ್ದ ಪ್ರಾಕ್ಕಲ್ಪನೆಯ ಸಮಂಜಸತೆಯನ್ನು ನಿರ್ಧರಿಸಬೇಕು. ಪ್ರಾಕ್ಕಲ್ಪನೆಯ ಸಮಂಜಸತೆಯನ್ನು ನಿರ್ಧರಿಸಲು ವಿವೇಚನಾಯುಕ್ತ ತೀರ್ಮಾನ ಕೈಗೊಳ್ಳುವ ವಿಧಾನ (judgement) ಅಥವಾ ಸಂಖ್ಯಾಶಾಸ್ತ್ರಾತ್ಮಕ ವಿಶ್ಲೇಷಣಾ ವಿಧಾನಗಳನ್ನು (statistical analysis) ಅಳವಡಿಸಿಕೊಳ್ಳಬಹುದು. ಕೈಗೊಂಡಿರುವ ಸಂಶೋಧನಾ ಕಾರ್ಯದ ಸ್ವರೂಪ, ಲಕ್ಷಣ ಹಾಗೂ ಅಗತ್ಯಗಳನ್ನರಿತು ಅದಕ್ಕೆ ಸೂಕ್ತವಾದ ಕ್ರಮವನ್ನು ಆಯ್ಕೆಮಾಡಿಕೊಳ್ಳಬೇಕು.

ಪ್ರಾಕ್ಕಲ್ಪನೆಯಲ್ಲಿ ಸೂಚಿಸಿರುವ ಚಟುವಟಿಕೆಗಳು ಸಮಸ್ಯೆಯನ್ನು ಬಿಡಿಸಲು ಸಹಾಯಕವಾಗಿ ಉತ್ತಮಫಲ ದೊರಕಿತೆಂದು ಕಂಡುಬಂದಲ್ಲಿ ಆ ಪ್ರಾಕ್ಕಲ್ಪನೆಯನ್ನು ಒಪ್ಪಿಕೊಂಡು ಅದೇ ಕಾರ್ಯಕ್ರಮವನ್ನು ಮುಂದುವರಿಸಬೇಕು. ಫಲಿತಾಂಶಗಳು ಪರಿಣಾಮಕಾರಿಯಾಗಿಲ್ಲದಿದ್ದಲ್ಲಿ ಆ ಪ್ರಾಕ್ಕಲ್ಪನೆಯನ್ನು ಪರಿತ್ಯಜಿಸಿ ಮತ್ತೊಂದು ಹೊಸ ಪರಿಹಾರಕ್ರಮವನ್ನು ಯೋಚಿಸಿ, ಪ್ರಾಕ್ಕಲ್ಪನೆಯನ್ನು ರೂಪಿಸಿಕೊಂಡು ಅದರಂತೆ ಕಾರ್ಯ ಮುಂದುವರಿಸಬೇಕು. ಮಾಹಿತಿಗಳನ್ನು ಸಂಗ್ರಹಿಸಿ ವಿಶ್ಲೇಷಿಸಬೇಕು.

ಕ್ರಿಯಾತ್ಮಕ ಸಂಶೋಧನಾಕಾರ್ಯದ ಪ್ರತಿಫಲ ಅಥವಾ ತೀರ್ಮಾನಗಳು ಸಮರ್ಪಕವಾಗಿವೆ ಎಂಬುದನ್ನು ಸ್ಥಿರಪಡಿಸಿಕೊಂಡ ಮೇಲೆ, ಯಾವ ಸಮಸ್ಯೆಯ

ಪರಿಹಾರಕ್ಕಾಗಿ ಕಾರ್ಯಕ್ರಮ ನಿರೂಪಿಸಲಾಗಿತ್ತೋ ಆ ಸಮಸ್ಯೆ ಪುನಃ ತಲೆದೋರ ದಂತೆ ಮಾಡಲು ಅನುಸರಣಾ ಕಾರ್ಯಕ್ರಮವನ್ನು (follow-up work) ಕೈಗೊಳ್ಳಬೇಕು. ಅಗತ್ಯವಿದ್ದಲ್ಲಿ ಒಂದು ಕ್ರಿಯಾತ್ಮಕ ಸಂಶೋಧನಾ ಕಾರ್ಯದ ತೀರ್ಮಾನಗಳನ್ನು ಆಧರಿಸಿ ಮತ್ತೊಂದು ಕ್ರಿಯಾತ್ಮಕ ಸಂಶೋಧನಾ ಯೋಜನೆಯನ್ನು ತಯಾರಿಸಬಹುದು. ಇಲ್ಲವೇ ಆ ತೀರ್ಮಾನಗಳನ್ನು ಭವಿತವ್ಯಕ್ಕೆ ಕೊಂಡೊಯ್ಯುವ ಶೃಂಗರೂಪಿ ವಿಸ್ತರಣೆಗಾಗಿ ಉಪಯೋಗಿಸಿಕೊಳ್ಳಬಹುದು. ಈ ರೀತಿಯಲ್ಲಿ ಕ್ರಿಯಾತ್ಮಕ ಸಂಶೋಧನೆಯಿಂದ ಅನೇಕ ಶೈಕ್ಷಣಿಕ ಸಮಸ್ಯೆಗಳನ್ನು ಬಗೆಹರಿಸಿ, ಶಿಕ್ಷಣಕಾರ್ಯವು ಸಫಲವಾಗುವಂತೆ ಮಾಡಬಹುದಾಗಿದೆ

ಉದಾ : ಪೂರ್ವ ಹಾಗೂ ಅಂತಿಮ ಪರೀಕ್ಷೆಗಳ ಅಂಕಗಳನ್ನು ಹೋಲಿಸುವುದು. ಸರಾಸರಿ ಮತ್ತು ಮಾನಕ ವಿಚಲನೆ ಹಾಗೂ ಸರಾಸರಿಗಳ ವ್ಯತ್ಯಾಸದ ಮಹತ್ವವನ್ನು ಕಂಡು ಹಿಡಿಯುವುದು. ಈ ಮೇಲ್ಕಂಡ ಸಂಖ್ಯಾಶಾಸ್ತ್ರಾತ್ಮಕ ವಿಶ್ಲೇಷಣೆಯಿಂದಾಗಿ ಬಂದ ಫಲಿತಾಂಶಗಳನ್ನು ವಿಮರ್ಶಿಸಿ ಅಂತಿಮ ನಿರ್ಧಾರಗಳನ್ನು ನಿರ್ಧರಿಸುವುದು. ಫಲಿತಾಂಶಗಳು ಫಲಪ್ರದವಾಗಿಲ್ಲದಿದ್ದಲ್ಲಿ ಸಮಸ್ಯೆಯನ್ನು ಪುನರಾವಲೋಕಿಸುವುದು.

ಕ್ರಿಯಾತ್ಮಕ ಸಂಶೋಧನಾ ಯೋಜನೆಯ ಮಾದರಿ

ಶೀರ್ಷಿಕೆ : 8ನೇ ತರಗತಿಯ ವಿದ್ಯಾರ್ಥಿಗಳಲ್ಲಿ ಜೀವಶಾಸ್ತ್ರದಲ್ಲಿ ಬರುವ 'ರಚನೆ ಹಾಗೂ ಕಾರ್ಯಗಳ' ಬಗ್ಗೆ ಸರಿಯಾದ ಗ್ರಹಿಕೆಯನ್ನುಂಟು ಮಾಡುವುದು.

ಅವಶ್ಯಕತೆ : ಜೀವಶಾಸ್ತ್ರದಲ್ಲಿ ಪರಿಣಾಮಕಾರಿ ಕಲಿಕೆಯು ಜೀವಿಗಳ 'ರಚನೆ ಹಾಗೂ ಕಾರ್ಯಗಳ' ನಡುವೆ ಇರುವ ಸಂಬಂಧದ ಬಗೆಗೆ ಸರಿಯಾದ ಗ್ರಹಿಕೆಯನ್ನು ಅವಲಂಬಿಸಿದೆ. ಆದರೆ ಅನೇಕ ವಿದ್ಯಾರ್ಥಿಗಳು ಈ ಅಂಶವನ್ನು ಗ್ರಹಿಸದೆ ಜೀವಶಾಸ್ತ್ರದ ಅಧ್ಯಯನವನ್ನು ಮುಂದುವರಿಸುತ್ತಾರೆ. ಇದಕ್ಕೆ ಸಂಭವನೀಯ ಕಾರಣಗಳನ್ನು ಕೆಳಕಂಡಂತೆ ಪಟ್ಟಿಮಾಡಬಹುದು.

——ವಿದ್ಯಾರ್ಥಿಗಳು ಕಾರ್ಯದ ಬಗೆಗೆ ತಿಳಿಯದೆ ಕೇವಲ ಜೀವಿಯ ರಚನೆಯ ಬಗೆಗೆ ಮಾತ್ರ ವಿಷಯ ತಿಳಿಯಲಾಗುತ್ತದೆ.

——ಸಾಮಾನ್ಯವಾಗಿ 'ರಚನೆ' ಹಾಗೂ 'ಕಾರ್ಯ'ಗಳನ್ನು ಪ್ರತ್ಯೇಕವಾಗಿ ಬೋಧಿಸಲ್ಪಡುತ್ತದೆ.

——ಸೂಕ್ತವಾದ ಬೋಧನಾ ಸಲಕರಣೆಗಳನ್ನು ಪರಿಣಾಮಕಾರಿಯಾಗಿ ಉಪಯೋಗಿಸಲ್ಪಡುವುದಿಲ್ಲ.

ಸಮಸ್ಯೆಯ ನಿರೂಪಣೆ : 8ನೇ ತರಗತಿಯ ವಿದ್ಯಾರ್ಥಿಗಳಲ್ಲಿ ಜೀವಶಾಸ್ತ್ರದಲ್ಲಿ ಬರುವ ಜೀವಿಯ 'ರಚನೆ' ಹಾಗೂ 'ಕಾರ್ಯ'ಗಳ ನಡುವಿನ ಸಂಬಂಧದ ಬಗೆಗೆ ಸರಿಯಾದ ಗ್ರಹಿಕೆಯನ್ನುಂಟುಮಾಡುವುದು.

ಇತಿಮಿತಿಗಳು : (1) 8ನೇ ತರಗತಿಯ ಒಂದು ವಿಭಾಗವನ್ನು ಮಾತ್ರ ತೆಗೆದುಕೊಳ್ಳಲಾಗುವುದು. (2) 2 ಅಥವಾ 3 ಘಟಕಗಳನ್ನು ಮಾತ್ರ ಆಯ್ಕೆ ಮಾಡಿಕೊಳ್ಳಲಾಗುವುದು.

ಕ್ರಿಯಾತ್ಮಕ ಪ್ರಾಕ್ಕಲ್ಪನೆಗಳು : ಕೆಳಕಂಡ ಚಟುವಟಿಕೆಗಳನ್ನು ಕೈಗೊಳ್ಳುವುದರ ಮೂಲಕ 'ರಚನೆ ಹಾಗೂ ಕಾರ್ಯಗಳ' ನಡುವಿನ ಸಂಬಂಧದ ಬಗೆಗೆ ಸ್ಪಷ್ಟವಾದ ಗ್ರಹಿಕೆಯನ್ನುಂಟುಮಾಡಬಹುದು—

(1) ಪ್ರಾಣಿ ಹಾಗೂ ಸಸ್ಯಗಳಲ್ಲಿ ವಿವಿಧ ರಚನಾಂಗಗಳ ಕಾರ್ಯಗಳನ್ನು ವೀಕ್ಷಿಸಲು ಯಥೋಚಿತ ಅವಕಾಶವನ್ನು ಒದಗಿಸುವುದು.

(2) ಅನೇಕ ರಚನಾಂಗಗಳ ಕಾರ್ಯಗಳ ಬಗೆಗೆ ತಿಳಿದುಕೊಳ್ಳಲು ಯಥೋಚಿತ ಅವಕಾಶವನ್ನು ಒದಗಿಸುವುದು.

(3) ನಿದರ್ಶನಗಳು (specimens), ಮಾದರಿಗಳು (models) ಮತ್ತು ರೇಖಾನಕ್ಷೆ (chart) ಗಳನ್ನು ವೀಕ್ಷಿಸಲು ಯಥೋಚಿತ ಕಾಲಾವಧಿಯನ್ನು ಒದಗಿಸುವುದು.

ಕ್ರಿಯಾತ್ಮಕ ಕಾರ್ಯಕ್ರಮ : ಬೇಕಾದ ಅವಧಿ–ಒಂದು ಶೈಕ್ಷಣಿಕ ವರ್ಷ. ಪ್ರಾರಂಭದಲ್ಲಿ 'ರಚನೆ ಹಾಗೂ ಕಾರ್ಯಗಳಿಗಿರುವ ಸಂಬಂಧದ ಬಗೆಗೆ ವಿದ್ಯಾರ್ಥಿಗಳ ಜ್ಞಾನವನ್ನು ತಿಳಿಯಲು ಸಾಂಪ್ರದಾಯಿಕವಾಗಿ ಬೋಧಿಸಿದ ಕೆಲವು ಘಟಕಗಳನ್ನೇ ಆಯ್ಕೆಮಾಡಿಕೊಂಡು ವಸ್ತುನಿಷ್ಠ ಹಾಗೂ ಲಘು ಉತ್ತರ ಪ್ರಶ್ನೆಗಳನ್ನೊಳಗೊಂಡಂತೆ ಒಂದು ಪರೀಕ್ಷೆಯನ್ನು ತಯಾರಿಸಿ ಪರೀಕ್ಷೆ ಕೊಡಲಾಗುತ್ತದೆ. (ಪೂರ್ವ ಪರೀಕ್ಷೆ–pre-test), ನಂತರ ಕೆಳಕಂಡ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತದೆ.

(1) ನಿದರ್ಶನಗಳು, ಮಾದರಿಗಳು, ಜಾರುಫಲಕಗಳು (slides) ಮತ್ತು ಚಲನಚಿತ್ರಗಳನ್ನು (films) ವೀಕ್ಷಿಸಲು ವಿಪುಲವಾದ ಅವಕಾಶವನ್ನು ಕೊಡುವುದು.

(2) ಯಾವುದೇ ಒಂದು ನಿರ್ದಿಷ್ಟ ರಚನಾಂಗ ಮತ್ತು ಅದರ ಕಾರ್ಯದ ವೈಶಿಷ್ಟ್ಯತೆಯನು ಗುರುತಿಸಲು ನಿರ್ದೇಶನ ನೀಡುವುದು.

(3) ಕೆಲವು ಜೀವಿಗಳಲ್ಲಿ ಕೆಲವು ರಚನಾಂಗಗಳ ಇರುವಿಕೆ ಮತ್ತು ಕೆಲವು ಜೀವಿಗಳಲ್ಲಿ ಇಲ್ಲದಿರುವಿಕೆಯನ್ನು ಸಕಾರಣವಾಗಿ ಗುರುತಿಸುವುದು.

(4) ಯಾವುದೋ ಒಂದು ನಿರ್ದಿಷ್ಟ ಕಾರ್ಯಕ್ಕಾಗಿಯೇ ಕೆಲವು ರಚನಾಂಗಗಳ ಸುಧಾರಣೆಯಾಗಿರುವುದನ್ನು ಗಮನಿಸುವುದು.

(5) ಕೆಲವು ನಿರ್ದಿಷ್ಟ ನಿಯೋಜಿತ ಕಾರ್ಯಗಳನ್ನು ಪೂರ್ಣಗೊಳಿಸಲೋಸುಗ ಲಘುಪ್ರವಾಸ (field trips) ಗಳನ್ನು ಏರ್ಪಡಿಸುವುದು.

ಕೊನೆಯಲ್ಲಿ ಮತ್ತೊಮ್ಮೆ ರಚನೆ ಹಾಗೂ ಕಾರ್ಯಗಳಿಗಿರುವ ಸಂಬಂಧದ ಬಗೆಗೆ ಗ್ರಹಿಕೆಯುಂಟಾಗಿರುವುದನ್ನು ಅಳೆಯಲು ಮೊದಲು ಪ್ರಯೋಗಿಸಿದ ಪರೀಕ್ಷೆಯನ್ನೇ ಕೊಡಲಾಗುತ್ತದೆ. (ಅಂತಿಮ ಪರೀಕ್ಷೆ–post or final test)

ಕ್ರಿಯಾತ್ಮಕ ಕಾರ್ಯಕ್ರಮದ ಮೌಲ್ಯಮಾಪನ : ಕೈಗೊಂಡ ಕ್ರಿಯಾತ್ಮಕ ಕಾರ್ಯಕ್ರಮ ಫಲಪ್ರದವಾಗಿದೆಯೋ ಇಲ್ಲವೇ ಎಂಬುದನ್ನು ಮೌಲ್ಯಮಾಪನ ಮಾಡಲು ಈ ಕಾರ್ಯಕ್ರಮದಿಂದ ಪಡೆದ ದತ್ತಾಂಶಗಳನ್ನು ವಿಶ್ಲೇಷಿಸಿ ವಿಮರ್ಶಿಸಲಾಗುವುದು. ಪೂರ್ವ ಹಾಗೂ ಅಂತಿಮ ಪರೀಕ್ಷೆಗಳ ಅಂಕಗಳನ್ನು ಹೋಲಿಸುವುದು, ಸರಾಸರಿ ಮತ್ತು ಮಾನಕ ವಿಚಲನೆ ಹಾಗೂ ಸರಾಸರಿಗಳ ವ್ಯತ್ಯಾಸದ ಮಹತ್ವವನ್ನು ಕಂಡುಹಿಡಿಯುವುದು—ಮೇಲ್ಕಂಡ ಸಂಖ್ಯಾಶಾಸ್ತ್ರಾತ್ಮಕ ವಿಶ್ಲೇಷಣೆಯಿಂದಾಗಿ ಬಂದ ಫಲಿತಾಂಶಗಳನ್ನು ವಿಮರ್ಶಿಸಿ ಅಂತಿಮ ನಿರ್ಧಾರಗಳನ್ನು ನಿರ್ಧರಿಸುವುದು. ಫಲಿತಾಂಶಗಳು ಫಲಪ್ರದವಾಗಿದ್ದರೆ ಇದೇ ದಿಸೆಯಲ್ಲಿ ಕಾರ್ಯಕ್ರಮವನ್ನು ಮುಂದುವರಿಸಿಕೊಂಡು ಹೋಗುವುದು, ಇಲ್ಲದಿದ್ದಲ್ಲಿ ಸಮಸ್ಯೆಯನ್ನು ಪುನರಾವಲೋಕಿಸುವುದು.

ಕ್ರಿಯಾತ್ಮಕ ಸಂಶೋಧನೆಯ ಇತಿಮಿತಿಗಳು

ಶಿಕ್ಷಣದ ಕಾರ್ಯವು ಸಫಲತೆಯನ್ನು ಪಡೆದು ವಿದ್ಯಾರ್ಥಿಗಳ ಶ್ರೇಯೋಭಿವೃದ್ಧಿಗಾಗಿ ಶ್ರಮಿಸುವ ಪಥದಲ್ಲಿ ಕ್ರಿಯಾತ್ಮಕ ಸಂಶೋಧನೆ ಶಿಕ್ಷಕ ವರ್ಗದವರಿಗೂ ಆಡಳಿತ ವರ್ಗದವರಿಗೂ ಒಂದು ಉತ್ತಮ ಸಾಧನವಾಗಿದ್ದರೂ, ನ್ಯೂನತೆಗಳಿಂದ ಮುಕ್ತವಾಗಿದೆ ಎನ್ನಲಾಗುವುದಿಲ್ಲ ; ತನ್ನದೇ ಆದ ಇತಿಮಿತಿಗಳಿಂದ ಬಂಧಿತವಾಗಿದೆ. ಅವುಗಳನ್ನು ಈ ಕೆಳಗೆ ಕೊಡಲಾಗಿದೆ.

(1) ಮಿತವಾದ ಕೊಡುಗೆ : ಕ್ರಿಯಾತ್ಮಕ ಸಂಶೋಧನಾ ಕಾರ್ಯವು ಸ್ಥಳೀಯವಾದ ತಾತ್ಕಾಲಿಕ ಸಮಸ್ಯೆಗಳಿಗೆ ಸಂಬಂಧಿಸಿರುವುದರಿಂದ ಫಲಿತಾಂಶಗಳೆಲ್ಲವೂ ಸೀಮಿತವಾದ ಅನುಕೂಲತೆಯನ್ನು ಹೊಂದಿದ್ದು ಸಾರ್ವತ್ರಿಕತೆಯಿಂದ ದೂರ ನಿಲ್ಲುತ್ತವೆ. ಅಂತೆಯೇ ಶಿಕ್ಷಣವು ಒಂದು ವಿಧಾನವಾಗಿ ವಿಕಸನ ಹೊಂದುವ ದಿಸೆಯಲ್ಲಿ ಗಣನೀಯವಾದ ಕೊಡುಗೆಯಾಗುವುದಿಲ್ಲ.

(2) ಗರಿಷ್ಠತಮ ಅನುಕೂಲತೆಗಳನ್ನು ಪಡೆಯಲಾಗುವುದಿಲ್ಲ : ಸಾಂಪ್ರದಾಯಬದ್ಧವಲ್ಲದ ಕ್ರಿಯಾತ್ಮಕ ಸಂಶೋಧನೆಯಿಂದ ನಿರೂಪಿಸಲಾದ ತೀರ್ಮಾನಗಳನ್ನು ಸಾರ್ವತ್ರೀಕರಿಸಲೂ, ಯಾವುದೇ ತಾತ್ವಿಕ ಅಂಶದೊಡನೆ ಸಂಘಟಿಸಲೂ ಸಾಧ್ಯವಾಗದಿರುವುದರಿಂದ ಪೂರ್ಣಪ್ರಯೋಜನ ಪಡೆಯಲಾಗುವುದಿಲ್ಲ.

(3) ಕಡಿಮೆ ಗುಣಮಟ್ಟವುಳ್ಳದಾಗಿರುತ್ತವೆ : ಕ್ರಿಯಾತ್ಮಕ ಸಂಶೋಧನೆ ಕೈಗೊಳ್ಳುವ (ಬೋಧಕರು, ಆಡಳಿತ ವರ್ಗದವರು) ಸಂಶೋಧಕರು ಬಹುಶಃ ಸಂಶೋಧನಾರಂಗದಲ್ಲಿ ಅಭ್ಯಾಸ ಮಾಡದವರೂ ಅನುಭವ ಪಡೆಯದವರೂ ಆಗಿರುವುದರಿಂದ ಸಂಶೋಧನಾಕ್ರಮದಲ್ಲಿ ನ್ಯೂನತೆಗಳು ಕಂಡುಬರಬಹುದು. ಸಂಶೋಧನಾ ಕಾರ್ಯದಲ್ಲಿ ಎದುರಿಸಬೇಕಾದ ಅನೇಕ ಸಮಸ್ಯೆಗಳನ್ನು ಅರಿಯಲಾಗದೆ ಉತ್ತಮ ಫಲಿತಾಂಶಗಳನ್ನು ಪಡೆಯುವಲ್ಲಿ ಪರಾಜಿತರಾಗಬಹುದು. ಅಲ್ಲದೆ ಪ್ರಾಯೋಗಿಕ ಹಂತದಲ್ಲಿ ಸಂಪ್ರದಾಯಬದ್ಧ ಕ್ರಮಗಳನ್ನು ಅಳವಡಿಸದಿರಬಹುದು. ತೀರ್ಮಾನಗಳನ್ನು

ಕೈಗೊಳ್ಳುವಾಗ ಆಯ ತಪ್ಪಬಹುದು. ಆದ್ದರಿಂದ ಸಾಮಾನ್ಯವಾಗಿ ಕ್ರಿಯಾತ್ಮಕ ಸಂಶೋಧನೆಯ ಫಲಿತಾಂಶದ ಗುಣಮಟ್ಟ ಉನ್ನತವಾಗಿರಲಾರದು ಎಂದು ಅಭಿಪ್ರಾಯ ಪಡಲಾಗುತ್ತದೆ.

ಇದು ಕ್ರಿಯಾತ್ಮಕ ಸಂಶೋಧನೆಯಲ್ಲಿ ಸಹಜವಾಗಿರುವ ನ್ಯೂನತೆಯಲ್ಲ ಎನ್ನಬಹುದು. ಸಂಶೋಧನಾ ಕಾರ್ಯದಲ್ಲಿ ಅವಶ್ಯಕವಾದ ತರಬೇತಿ ಹಾಗೂ ಅರ್ಹತೆ ಪಡೆದು ಕ್ರಿಯಾತ್ಮಕ ಸಂಶೋಧನೆಯಲ್ಲಿ ಪಾಲ್ಗೊಂಡರೆ ಮೇಲೆ ಹೇಳಿದ ಟೀಕೆಯನ್ನು ಅಪಷ್ಟು ಮಟ್ಟಿಗೆ ತೊಡೆದು ಹಾಕಬಹುದಾಗಿದೆ. ತಾವು ಮಾಡುವ ಕಾರ್ಯದಲ್ಲಿ ಆಸಕ್ತರಾಗಿ, ಉತ್ತಮ ಫಲಾಭಿಲಾಷಿಗಳಾಗಿ ನಿಷ್ಠೆಯಿಂದ ಸಂಶೋಧನಾ ಕಾರ್ಯ ನಡೆಸಿದಲ್ಲಿ ತಾತ್ಕಾಲಿಕವಾದರೂ ಉತ್ತಮ ಗುಣಮಟ್ಟವುಳ್ಳದಾಗಿರುತ್ತದೆ ಎನ್ನಬಹುದು.

(4) ಫಲಿತಾಂಶಗಳನ್ನು ಸಾರ್ವತ್ರೀಕರಿಸಲಾಗುವುದಿಲ್ಲ: ಸಂಶೋಧನೆಗಾಗಿ ಆಯ್ಕೆ ಮಾಡಿಕೊಳ್ಳುವ ಪ್ರತಿದರ್ಶಗಳು ಯಾವುದೇ ಒಂದು ಸಮಸ್ತ ಗುಂಪನ್ನು ಅಥವಾ ವಿಶ್ವವನ್ನು ಪ್ರತಿನಿಧಿಸಲು ಅರ್ಹವಾಗಿಲ್ಲದಿರುವುದರಿಂದ ಫಲಿತಾಂಶಗಳನ್ನು ನಿರ್ದಿಷ್ಟವಾದ ಗುಂಪಿಗೆ ಮಾತ್ರ ಅನ್ವಯಿಸಿಕೊಳ್ಳಬೇಕಾಗುತ್ತದೆಯೇ ವಿನಾ ಸಾರ್ವತ್ರೀಕರಿಸಲಾಗದು.

(5) ಬೋಧಕರಿಗೆ ಕೆಲಸದ ಹೆಚ್ಚಳವಾಗುತ್ತದೆ: ಈಗಿರುವ ಪಠ್ಯಸೂಚಿ ಹಾಗೂ ಪರೀಕ್ಷಾ ಕ್ರಮಗಳಿಂದಾಗಿ ಪ್ರಸಕ್ತ ಶಾಲೆಗಳಲ್ಲಿ ಅನುದಿನವೂ ಬೋಧಕ ಅವಿರತವಾಗಿ ದುಡಿಯಬೇಕಾಗಿದೆ. ವಿದ್ಯಾರ್ಥಿಗಳ ಏಳಿಗೆಗಾಗಿ ಶ್ರಮಿಸುವ ಬೋಧಕ ಸಮಯದ ಅಭಾವದಿಂದ ತತ್ತರಿಸುತ್ತಾನೆ. ಈ ಶ್ರಮದ ಜೊತೆಗೆ ಕ್ರಿಯಾತ್ಮಕ ಸಂಶೋಧನೆಯನ್ನೂ ಕೈಗೊಳ್ಳಬೇಕು ಎಂದರೆ ಜವಾಬ್ದಾರಿಯುತ ಬೋಧಕನಿಗೆ ಒಂದು ಹೊರೆಯೇ ಸರಿ. ಕ್ರಿಯಾತ್ಮಕ ಸಂಶೋಧನೆಯಿಂದ ಪರಿಣಾಮಕಾರೀ ಪ್ರಯೋಜನ ಪಡೆಯಬೇಕಾದರೆ ಬೋಧಕನಿಗೆ ಅಗತ್ಯವಾದಷ್ಟು ವಿರಾಮ ವೇಳೆಯ ಸೌಲಭ್ಯವಿರಬೇಕು.

ಅಂತಿಮವಾಗಿ ಜಾರ್ಜ್ ಜೆ. ಮೌಲಿಯವರ ವಾಕ್ಯಗಳನ್ನು ಇಲ್ಲಿ ಉಲ್ಲೇಖಿಸಬಹುದಾಗಿದೆ. “ಇತಿಮಿತಿಗಳಿದ್ದರೂ ಕ್ರಿಯಾತ್ಮಕ ಸಂಶೋಧನಾ ಕಾರ್ಯವನ್ನು ಖಂಡಿತವಾಗಿಯೂ ಪ್ರೋತ್ಸಾಹಿಸಬೇಕು. ತಮ್ಮ ಸಮಸ್ಯೆಗೆ ಪರಿಹಾರ ಕಂಡುಕೊಳ್ಳುವ ಕ್ರಿಯೆಯಲ್ಲಿ ಬೋಧಕರು ಪಾಲ್ಗೊಳ್ಳುವುದನ್ನು ಪ್ರೋತ್ಸಾಹಿಸಬೇಕು. ಕ್ರಿಯಾತ್ಮಕ ಸಂಶೋಧನೆಯು ತರಗತಿಯ ಹಲವಾರು ಸಮಸ್ಯೆಗಳಿಗೆ ಪರಿಹಾರಗಳನ್ನೊದಗಿಸುವುದರಿಂದ ಮತ್ತು ತತ್‌ಕ್ಷಣದ ಪ್ರಯೋಗಾರ್ಹತೆ ಪಡೆದಿರುವ ತಾತ್ಕಾಲಿಕ ಪ್ರಾಕ್ಕಲ್ಪನೆಗಳು ಹಾಗೂ ನಿರ್ಣಯ ನಿರೂಪಣೆಗಳನ್ನು ಒದಗಿಸುವುದರಿಂದ ಶಿಕ್ಷಣದ ಪ್ರಗತಿಗೆ ಸಹಕಾರಿಯಾಗಿದೆ. ಇವರಲ್ಲಿ ಪಾಲ್ಗೊಳ್ಳುವವರ ವೃತ್ತಿ ಸಾಮಾರ್ಥ್ಯವನ್ನು (professional callibre) ಅಭಿವೃದ್ಧಿಗೊಳಿಸುತ್ತದೆ .... ಶಿಕ್ಷಣವನ್ನು ಒಂದು ವಿಜ್ಞಾನದ ಮಟ್ಟಕ್ಕೆ ಏರಿಸುವಲ್ಲಿ ಕ್ರಿಯಾತ್ಮಕ ಸಂಶೋಧನೆಯ ಕೊಡುಗೆ ಅನುಷಂಗಿಕವಾಗಿದೆ. ಆದ್ದರಿಂದ

ಕ್ರಿಯಾತ್ಮಕ ಸಂಶೋಧನೆಯನ್ನು ಪ್ರೋತ್ಸಾಹಿಸುವ ಜೊತೆಜೊತೆಯಲ್ಲಿಯೇ ಮೂಲ ಭೂತ ಸಂಶೋಧನೆಯ ಪ್ರಾಮುಖ್ಯತೆಯನ್ನು ಪರಿಗಣಿಸಬೇಕಾಗಿದೆ.”

ಒಟ್ಟಿನಲ್ಲಿ ಶೈಕ್ಷಣಿಕ ಪ್ರಗತಿಗೆ ಕೇವಲ ಕ್ರಿಯಾತ್ಮಕ ಸಂಶೋಧನೆಯನ್ನು ಮಾತ್ರ ಪ್ರೋತ್ಸಾಹಿಸದೆ ಮೂಲಭೂತ ಸಂಶೋಧನೆಗೂ ಆದ್ಯತೆ ನೀಡಬೇಕೆಂಬುದು ಗಮನಾರ್ಹ.

ಅಡಿಟಿಪ್ಪಣಿಗಳು

1 Corey, Stephen M : *Action Research to Improve School Practices*, Teachers College, Columbia University, New York, 1953, P. 6

2 Good, Carter V. : *Dictionary of Education*, Mcgraw Hill Book Co. 1959, P. 464

3 Best, John W. : *Research in Education*, Printice Hall of India P. Ltd. (Ind. Ed.) New Delhi 1963. P. 10

4 Mouly, George J. : *The Science of Educational Research*, Eurasia Publishing House (Ind. Ed) N. Delhi 1964, P. 406

ಇತರ ಆಧಾರ ಗ್ರಂಥಗಳು

1 Chaube S. P. : *Modern Psychology in the New Education* Ramprasad & Sons, Agra. 1966

2 Mouly G. J. : *The Science of Educational Research* (2nd Ed.) Litton Educational Publishing Inc. 1970

3 Galfo, Armand J. : *Interpreting Educational Research* (3rd Ed.) W.M.C. Brown Company Publishers 1975

4 Mathur S. S.—Educational Pyschology, Vinod Pustak Mandir, Agra 1971

5 Singh L. C. et-al—*Experimentation and Innovation in Schools*, N.C.E.R.T., N. Delhi, Sept. 1979

6 —*Recearch in Education*, National Institute of Basic Education, N.C,E.R.T., 1966

ಮೂಲಭೂತ ಹಾಗೂ ಅನ್ವಯಿಕ ಸಂಶೋಧನೆ

ಮೂಲಭೂತ ಸಂಶೋಧನೆಯು ಯಾವುದೇ ಒಂದು ಘಟನೆ ಹೇಗೆ ನಡೆಯುತ್ತದೆ ಎಂಬುವನ್ನು ತಿಳಿಯುವ ಪ್ರಯತ್ನವಾದರೆ, ಅನ್ವಯಿಕ ಸಂಶೋಧನೆಯು ಪ್ರಾಯೋಗಿಕವಾಗಿ ಏನು ನಡೆಯುತ್ತದೆ ಎಂಬುದನ್ನು ತಿಳಿಯುವ ಪ್ರಯತ್ನ ಎನ್ನಬಹುದು. ಮೂಲಭೂತ ಸಂಶೋಧನೆಯಲ್ಲಿ ಯಾವುದೇ ಒಂದು ವಿಷಯದ ಬಗೆಗೆ ಆಳವಾದ ಅಧ್ಯಯನ ಮಾಡುವ ಸೂಕ್ಷ್ಮದರ್ಶಕ ದೃಷ್ಟಿಯಿದ್ದರೆ, ಅನ್ವಯಿಕ ಸಂಶೋಧನೆಯು ತರಗತಿಗಳಲ್ಲಿ ಯಾವುದೇ ಒಂದು ಕ್ರಿಯೆ ಹೇಗೆ ನಡೆಯಬಹುದೆಂಬುದನ್ನು ತಿಳಿದುಕೊಳ್ಳುವ ದುರ್ಬೀನು ದೃಷ್ಟಿಯನ್ನು (binocular vision) ಪಡೆದಿರುತ್ತದೆ ಎನ್ನಬಹುದು.

ಮೂಲಭೂತ ಸಂಶೋಧನೆ ಹಾಗೂ ಅನ್ವಯಿಕ ಸಂಶೋಧನೆಗಳಿಗಿರುವ ವ್ಯತ್ಯಾಸವನ್ನು ನಿಖರವಾಗಿ ಗುರುತಿಸಲು ಬಾರದು. ಅಧ್ಯಯನಕ್ಕೆ ಆಯ್ಕೆ ಮಾಡಿಕೊಂಡ ಯಾವುದೇ ಒಂದು ಸಮಸ್ಯೆ ಈ ಎರಡೂ ರೀತಿಯ ಸಂಶೋಧನಾ ಅಂಗಗಳನ್ನೂ ಒಳಗೊಂಡಿರುತ್ತದೆ. ಒಂದು ಸಮಸ್ಯೆಗೆ ಪರಿಹಾರ ಕಂಡುಕೊಂಡಾಗ ಅದು ಯಾವುದೇ ಸಿದ್ಧಾಂತಕ್ಕೆ ಸಂಬಂಧಿಸಿರಬೇಕಾಗಿಲ್ಲ ಅಥವಾ ನಿಯಮವನ್ನಾಧರಿಸಬೇಕಾಗಿಲ್ಲ ಎಂದು ಹೇಳಲು ಬಾರದು. ಸಿದ್ಧಾಂತಕ್ಕೆ ಪ್ರಾಮುಖ್ಯತೆ ಕೊಡದೆ ಪ್ರಾಯೋಗಿಕವಾಗಿ ಸಮಸ್ಯೆಗೆ ಪರಿಹಾರಕ್ರಮಗಳನ್ನು ಕಂಡುಕೊಂಡರೂ ಅದು ಅಜ್ಞಾತವಾಗಿಯಾದರೂ ಒಂದಿಲ್ಲೊಂದು ಸಿದ್ಧಾಂತವನ್ನಾಧರಿಸಿರಬೇಕು. ಮೂಲಭೂತ ಸಂಶೋಧನೆಯಲ್ಲಿ ಸಿದ್ಧಾಂತ ನಿರೂಪಣೆಯೇ ಪ್ರಮುಖವಾದರೂ ಪ್ರಾಯೋಗಿಕವಾಗಿ ಪ್ರಯೋಜನಕಾರಿಯಾಗದಿದ್ದಲ್ಲಿ ಅರ್ಥಹೀನವಾಗುತ್ತದೆ. ಅಂತೆಯೇ ಅಧ್ಯಯನದಲ್ಲಿ ಆದ್ಯತೆ ಪಡೆದಿರುವ ಅಂಶವನ್ನಾಧರಿಸಿ ಅವನ್ನು ಮೂಲಭೂತ ಸಂಶೋಧನೆಯೋ ಅಥವಾ ಅನ್ವಯಿಕ ಸಂಶೋಧನೆಯೋ ಎಂಬುದನ್ನು ನಿರ್ಧರಿಸಲಾಗುತ್ತದೆ.

ಆಧಾರ: Johnson M. Clemens: *A Review of Research Methods in Education* (Rand Mc. Nally College Publishing Co., Chicago), 1977.

ಡಾ. ಎಚ್. ಆರ್. ರಘುನಾಥ ಭಟ್

ಶಿವಮೊಗ್ಗದ ಕೋಟೆ ಆಂಜನೇಯ ದೇವಾಲಯದ ಶಾಸನ

ಶಾಸನ ಸಂಖ್ಯೆ, ವಿಷಯ ವೈವಿಧ್ಯ, ಐತಿಹಾಸಿಕ–ಸಾಂಸ್ಕೃತಿಕ ಮಹತ್ವಗಳ ದೃಷ್ಟಿಯಿಂದ ಹಲವು ಗಮನಾರ್ಹ ಶಾಸನಗಳನ್ನು ಶಿವಮೊಗ್ಗ ಜಿಲ್ಲೆ ಈಗಾಗಲೇ ನೀಡಿದೆ. ಇವುಗಳ ಸಂಖ್ಯೆ ಸುಮಾರು ಎರಡು ಸಾವಿರದ ನೂರ್ವೈವತ್ತಕ್ಕೂ ಹೆಚ್ಚಾದೀತು. ಇವುಗಳಲ್ಲಿ ಮಧ್ಯಕಾಲೀನ ಶಾಸನಗಳೇ ಅಧಿಕವಾಗಿವೆ. ಹೊಯ್ಸಳ ಶಾಸನಗಳೆಂದು ಹೇಳಬೇಕಾದವೂ ಇವುಗಳಲ್ಲಿ ಸಾಕಷ್ಟಿವೆ. ಈ ಸಾಲಿಗೆ ಇದೀಗ ಸೇರಬೇಕಾದ ಮತ್ತೊಂದು ಹೊಸ ಶಾಸನ ನನ್ನ ಇತ್ತೀಚಿನ ಸಂಶೋಧನ ಕಾರ್ಯದಲ್ಲಿ ಪತ್ತೆಯಾಗಿದ್ದು ಮೊದಲ ಬಾರಿಗೆ ಇಲ್ಲಿ ಪ್ರಕಟವಾಗುತ್ತಿದೆ.[2]

ಶಾಸನ ದೊರೆತ ಸ್ಥಳ

ಶಿವಮೊಗ್ಗ ನಗರದಲ್ಲಿರುವ ಪ್ರಸಿದ್ಧವಾದ ಕೋಟೆ ಆಂಜನೇಯ ದೇವಾಲಯದ ನವರಂಗ ಮಂಟಪದ ಒಂದು ತೊಲೆಯ ಮೇಲೆ ಈ ಶಾಸನವಿದೆ.[3] ಇದನ್ನು ಈಗಿನ ಅಂತರಾಳ ದ್ವಾರದ ಮೇಲ್ಭಾಗದಲ್ಲಿ, ಪೂರ್ವಾಭಿಮುಖವಾಗಿ ತೆರೆದುಕೊಂಡಿರುವ ತೊಲೆಯ ಕೆಳಭಾಗದಲ್ಲಿ ನೋಡಬಹುದಾಗಿದೆ. ಹಿಂದಿನಿಂದಲೂ ಹಚ್ಚುತ್ತ ಬಂದಿರುವ ಸುಣ್ಣದ ದಪ್ಪ ಲೇಪನವನ್ನು ಕೆರೆಸಲು ಹೊರಟಾ ಅರ್ಚಕರಿಗೆ ಮೊದಲು ಅಸ್ಪಷ್ಟ ಅಕ್ಷರಗಳು ಕಂಡು ಬಂತು; ಅಷ್ಟಕ್ಕೇ ಆದನ್ನು ಬಿಡಲಾಗಿತ್ತು. ಆ ಸುಳಿವನ್ನಾಧರಿಸಿ ನಾವು ಮತ್ತಷ್ಟು ಆಳವಾಗಿ ಕೆರೆಸುತ್ತ ಹೋದಂತೆ ಇಡೀ ಶಾಸನ ಪತ್ತೆಯಾಯಿತು. ತೊಲೆಯ ಉದ್ದಕ್ಕೂ ಕೊರೆದಿರುವ ಈ ಶಾಸನದ ನಾಲ್ಕು ಸಾಲುಗಳು ಸಾಕಷ್ಟು ದೀರ್ಘವಾಗಿವೆ. (ಸುಮಾರು 1·63 ಮೀ.x12 ಸೆಂ.ಮೀ.). ಶಾಸನದ ಆರಂಭದಲ್ಲಿ ಮಂಗಳ ಚಿಹ್ನೆಯಿದೆ; ಕೊನೆಯಲ್ಲಿ ದಂಡಕ–ಪೂರ್ಣ ವಿರಾಮವಿದೆ.

ಲಿಪಿ ಲಕ್ಷಣ

'ಸ್ವಸ್ತಿಶ್ರೀ'ಯಿಂದ ಆರಂಭವಾಗುವ ಈ ಶಾಸನದ ಲಿಪಿಲಕ್ಷಣಗಳು ಹೊಯ್ಸಳ ಕಾಲದ ಮಧ್ಯ ಅವಧಿಗೆ ಸೇರುವಂಥವು. ಮೇಲಾಗಿ ಹೊಯ್ಸಳ ಅರಸನಾದ ಬಲ್ಲಾಳ

ದೇವನ ಉಲ್ಲೇಖವಿದೆ; ಈತನ ರಾಜಗುರು ವಾಮಶಕ್ತಿಯ ಹೆಸರೂ ಸ್ಪಷ್ಟವಾಗಿದೆ. ಇವನ್ನಾಧರಿಸಿ ಈ ಶಾಸನವನ್ನು ಹನ್ನೆರಡನೆಯ ಶತಮಾನಕ್ಕೊಯ್ಯಬಹುದು.

ಹೊಯ್ಸಳ ಶೈಲಿಯ ಶಿಲಾಲಿಪಿ ಸೌಂದರ್ಯ ಇಲ್ಲಿ ಅಷ್ಟಾಗಿ ಎದ್ದು ಕಾಣದು. ಅಕ್ಷರ ತುಂಬಾ ಗುಂಡಗಿಲ್ಲ, ಹೆಚ್ಚು ಅಲಂಕಾರಿಕವಾಗಿಲ್ಲ. ಅಕ್ಷರಗಳನ್ನು ಸ್ಪಷ್ಟವಾಗಿ, ವಿರಳವಾಗಿ ಕೆತ್ತಲಾಗಿದೆ. ಅರ್ಧಚಂದ್ರಾಕೃತಿಯ ತಲೆಕಟ್ಟು, ಅನುಸ್ವಾರ, ಒತ್ತಕ್ಷರಗಳ ಪ್ರಮಾಣ ಪ್ರಧಾನವಾದ ಅಕ್ಷರ ಪ್ರಮಾಣಕ್ಕಿಂತ ಚಿಕ್ಕದಾಗಿರುವುದು, ಕ, ರ, ಯ–ಮುಂತಾದ ಅಕ್ಷರಗಳ ಪ್ಪಿಕಟ್ಟು ವೃತ್ತಾಕಾರವಾಗಿರುವುದು ಪ್ರಸ್ತುತ ಶಾಸನಲಿಪಿಗಳಲ್ಲಿ ಎದ್ದು ಕಾಣುವ ಕೆಲವು ಲಕ್ಷಣಗಳಾಗಿವೆ. ಕನ್ನಡ ಲಿಪಿಯ ಬೆಳವಣಿಗೆಯ ಮುಖ್ಯವಾದ ಹಂತವನ್ನು ಇವು ಪ್ರತಿನಿಧೀಕರಿಸುತ್ತವೆ. ಮಟ್ಟಸವಾದ ಹಾಗೂ ನುಣುಪಾದ ಬಳಪದ ಕಲ್ಲಿನ ಹಲಗೆಯ ಮೇಲೆ ಒಂದೇ ಪ್ರಮಾಣದಲ್ಲಿ ಮುದ್ದಾಗಿ ಕೊರೆದಿರುವ ಅಕ್ಷರಗಳಂತೆ ಇವು ಕಾಣಲಾರವು. ಕಾರಣ ಕಟ್ಟಿದ ದೇಗುಲದ ಎತ್ತರವಾದ, ನುಣುಪಿರದ ಗೋಡೆಯ ಮೇಲೆ ಅಕ್ಷರಗಳನ್ನು (ಅನಂತರದಲ್ಲಿ) ಕಂಡರಿಸುವುದು ತುಸು ಕಷ್ಟಕರವಾದ ಕೆಲಸ. ಅಕ್ಷರಗಳು ವಿರಳವಾಗಿದ್ದರೂ ಪ್ರಮಾಣದಲ್ಲಿ ಸುಮಾರು ಎರಡರಿಂದ ಎರಡೂವರೆ ಸೆಂಟಿಮೀಟರಿನಷ್ಟಿವೆ; ಪಂಕ್ತಿಗಳೂ ಅಷ್ಟೇನೂ ನೇರವಾಗಿಲ್ಲ. ಬರೆದವನ ಅಥವಾ ಕಂಡರಿಸಿದವನ ಕಲೆಗಾರಿಕೆಯ ಸೊಬಗು ಈ ಶಾಸನದಲ್ಲಿ ಎದ್ದು ಕಾಣುವುದಿಲ್ಲ.4

ಶಾಸನ ಭಾಷೆ

ಪ್ರಸ್ತುತ ಶಾಸನ ಭಾಷೆ "ನಡುಗನ್ನಡ"ವಾಗಿದ್ದು ಆ ಕಾಲದ ಭಾಷೆಯ ಸ್ವರೂಪವನ್ನು ಪ್ರತಿನಿಧೀಕರಿಸುತ್ತದೆ. ಗದ್ಯ ಶೈಲಿಯಲ್ಲಿರುವ ಈ ಶಾಸನದಲ್ಲಿ ನೇರ ನಿರೂಪಣಾ ಕ್ರಮವಿದೆ. ಆದರೆ ಭಾಷಿಕ ದೋಷಗಳಿಲ್ಲದಿಲ್ಲ. 'ಬಲ್ಲಾಳ' ಎಂಬುದನ್ನೂ 'ಬಲ್ಲಾಳು' (ಸಾ. ೧), 'ಎಕ್ಕೋಟಿ' ಎಂಬ ಶಬ್ದವನ್ನೂ ಎಕ್ಕೊಟ್ಟಿ' (ಸಾಲು ೧, ೨), 'ಎಕೊಟ್ಟಿ' (ಸಾಲು ೨) ಎಕೋಟಿ (ಸಾಲು. ೨) ಎಂದೂ, 'ಮಾದಯ್ಯ' ಎಂಬುದಕ್ಕೆ ಬದಲಾಗಿ 'ಮಾದೆಯ' (ಸಾಲು ೧), 'ಬಸವ್ವೆಯ' ಎಂಬುವನ್ನು 'ಬಸ್ಸವೆಯ' ಎಂದೂ (ಸಾಲು ೧), 'ಮಲ್ಲಿಕಜೀಯನು' ಎಂಬುದನ್ನು 'ಮಲ್ಲಿಕಜಿನು' (ಸಾಲು ೨) 'ಎಂದೂ, ಜಿನಾಲಯ' ಎಂಬುವಕ್ಕೆ ಬದಲಾಗಿ 'ಜಿನಾಲೆಯ' (ಸಾಲು ೩) ಎಂದೂ, 'ಕೊಟ್ಟು 'ಎಂಬುದನ್ನು 'ಕೊಟ್ಟ' (ಸಾಲು ೩), 'ಮಾರಿದಾತಂ' ಎಂಬುದನ್ನು 'ಮರಿದತಂ' (ಸಾಲು ೪) ಎಂದೂ 'ಪಾತಕ' ಎಂಬುದನ್ನು 'ಪತಕಂ' (ಸಾಲು ೪) ಎಂದೂ ಬರೆಯಲಾಗಿದೆ. ಇವನ್ನೆಲ್ಲ ಗಮನಿಸಿದರೆ ಶಾಸನ ಬರೆದವ ಓದು ಬರಹ ಬಲ್ಲ ಒಬ್ಬ ಸಾಮಾನ್ಯನೇ ಹೊರತು ಪೂರ್ಣ ಪಾಂಡಿತ್ಯದ ಪ್ರತಿಷ್ಠಿತ ಕವಿಯಲ್ಲ ಎಂಬುದು ವೇದ್ಯವಾದೀತು. ಅದೇನಿದ್ದರೂ ಹೆಚ್ಚು ವಿವರಣೆಗಳಿಲ್ಲದ ವಸ್ತುನಿಷ್ಠ ನಿರೂಪಣಾಭಾಷೆ/ಶೈಲಿ ಶಾಸನೋದ್ದೇಶ್ಯವನ್ನು ಈಡೇರಿಸುತ್ತದೆ.

ಶಾಸನ ವಿಷಯ

ಇದೊಂದು ಸ್ಮಾರಕ–ದಾನ ಶಾಸನ ; ಮಧ್ಯಕಾಲೀನ ಜೈನ–ಕಾಳಾಮುಖ ಮತಕ್ಕೆ ಸಂಬಂಧಿಸಿದೆ. ಸಮಕಾಲೀನ ರಾಜಕೀಯ ಇತಿಹಾಸಕ್ಕಿಂತ ಹೆಚ್ಚಾಗಿ ಸಾಂಸ್ಕೃತಿಕ ಮಹತ್ವ ಪಡೆದಿರುವ ಈ ಶಾಸನದಲ್ಲಿ ಅಡಕವಾಗಿರುವ ವಿಷಯಗಳನ್ನು ಮುಖ್ಯವಾಗಿ ಹೀಗೆ ವಿವರಿಸಬಹುದು :

೧. ಹೊಯ್ಸಳ ವೀರಬಲ್ಲಾಳನ 'ರಾಜಗುರು' ವಾಮಶಕ್ತಿಯ ಉಲ್ಲೇಖ ;

೨. ಈತ "ಏಕ್ಕೋಟಿ ಚಕ್ರವರ್ತಿ" ಹಾಗೂ "ಮಾಳೇಶ್ವರ"ದವ ಎಂಬ ವಿಚಾರ ;

೩. ಈತ ಆರು ಜನ 'ಏಕ್ಕೋಟಿ'ಗಳ ಮತ್ತು ಅಸಂಖ್ಯಾತ 'ಗಣೇಶ್ವರ'ರ ಸಮ್ಮುಖದಲ್ಲಿ ದತ್ತಿ ನೀಡಿದ ಸಂಗತಿ ;

೪. (ಗಂಗ) ಜಿನಾಲಯಕ್ಕೆ "ಏಕ್ಕೋಟಿ ಜಿನಾಲಯ" ಎಂದು ಹೆಸರಿಟ್ಟದ್ದು ;

೫. ಅದಕ್ಕೆ 'ಜೋಗವಟ್ಟಿಗೆ', 'ನಂದಿಕೋಲು' ಹಾಗೂ 'ದೇವ ಭೋಗ'ಗಳನ್ನು ಕೊಟ್ಟಿದ್ದು ;

೬. ಮಾಳೇಶ್ವರ, ಮಾಕನಹಳ್ಳಿ, ಕಾಂತಊರು, ಗಂಗನಾಡು, ನೀತಿ, ಕಲ್ಯಾಣ, ಮತ್ತು ಮಲ್ಲಿಕೆ ಎಂಬ ಏಳು ಸ್ಥಳನಾಮಗಳನ್ನೂ 'ಏಕ್ಕೋಟಿ', 'ಜೀಯ' 'ಗಣೇಶ್ವರ' ಮುಂತಾದ ಮತೀಯ ನಾಮಗಳನ್ನು ಉಲ್ಲೇಖಿಸಿದ್ದು ; ಮತ್ತು

೭. ಕೊನೆಯಲ್ಲಿರುವ ಶಾಪಾಶಯದಲ್ಲಿ ಪಂಚಮಹಾಪಾತಕದೊಟ್ಟಿಗೆ 'ಶಿವ ದ್ರೋಹ' ಎಂದಿರುವುದು.

ಐತಿಹಾಸಿಕ ಮಹತ

ದೇಗುಲ–ತೊಲೆಯ ಶಾಸನ ಮೊದಲಿಗೆ ಶ್ರೀಮತ್ ಬಲ್ಲಾಳು (ಬಲ್ಲಾಳ) ದೇವ ನನ್ನು ಹೆಸರಿಸುತ್ತದೆ. ಈತ ಹೊಯ್ಸಳರಲ್ಲೇ ಅತ್ಯಂತ ಪ್ರಮುಖನಾದ ಚಕ್ರವರ್ತಿ. ಮೊದಲನೆಯ ನರಸಿಂಹ–ಏಚಲದೇವಿಯರ ವೀರಪುತ್ರ. ಸುಮಾರು ನಲವತ್ತೇಳುವರ್ಷ (೧೧೭೩–೧೨೨೦) ಗಳು ಪರಿಣಾಮಕಾರಿಯಾಗಿ ಆಳಿದ ಗಣನೀಯ ಅರಸ. ಈತನ ಕಾಲ ದಲ್ಲಿ ಅತ್ಯಂತ ಹೆಚ್ಚಿನ ಸಂಖ್ಯೆಯ ಹೊಯ್ಸಳಾಲಯಗಳು ನಿರ್ಮಿತವಾದವು. ದೇಗುಲಗಳ ಜೀರ್ಣೋದ್ಧಾರ, ನಿರ್ವಹಣೆ ಹಾಗೂ ವ್ಯವಸ್ಥೆಗಳಲ್ಲಿ ಕೂಡ ಈತನ ಕಾಲದಲ್ಲಿ ಗಣನೀಯವಾದ ಕಾರ್ಯ ಆಗಿದ್ದುಂಟು. ಶೈವಮತೀಯ ಚಟುವಟಿಕೆಗಳು ವ್ಯಾಪಕವಾಗಿ ಹಮ್ಮಿಕೊಂಡಿದ್ದುಂಟು. ಈತನ ಕಾಲದಲ್ಲಿ ಸುಮಾರು ಎಂಬತ್ತು ಶೈವಾಲಯಗಳ ಶಾಸನೀಯ ಉಲ್ಲೇಖಗಳಿವೆಯೆಂಬುದು ಇದನ್ನು ಪುಷ್ಟೀಕರಿಸುತ್ತದೆ.5 ಶಿವಪುರಗಳೂ,

ಮಠಗಳೂ ಅಂದಿನ ಸಮಾಜದಲ್ಲಿ ಗಣ್ಯ ಪಾತ್ರವಹಿಸಿದ್ದವು. ಶೈವಾಚಾರ್ಯರಿಗೆ ಹೆಚ್ಚಿನ ಮನ್ನಣೆಯಿದ್ದಿರಬೇಕು. ಈ ಹಿನ್ನೆಲೆಯಲ್ಲಿ ವೀರಬಲ್ಲಾಳನ "ರಾಜಗುರು"ಗಳಾಗಿ ವಾಮಶಕ್ತಿಯಿದ್ದನೆಂಬುದು ಸ್ವಾರಸ್ಯಕರವಾಗಿದೆ.

ಸಾಂಸ್ಕೃತಿಕ ಮಹತ್ವ

ಮಧ್ಯಕಾಲೀನ ಕರ್ನಾಟಕದಲ್ಲಿ ಶೈವಮತ—ಕಾಳಾಮುಖ ಶೈವಪಂಥ ಸಾಕಷ್ಟು ಪ್ರಭಾವಶಾಲಿಯಾಗಿತ್ತು. ಸಮಕಾಲೀನ ದೇವಾಲಯಗಳಿಗೆ ಹೊಂದಿಕೊಂಡಂತೆ ಕೆಲವು ಕಡೆಯಾದರೂ ಮಠಗಳಿದ್ದು, ಅವುಗಳಲ್ಲಿ ಕಾಳಾಮುಖಸ್ಥಾನಾಚಾರ್ಯ(ಮಠಾಧಿಪತಿ)ರ, ಕಾರ್ಯ ನಿರ್ವಹಿಸುತ್ತಿದ್ದರು. ಬಳ್ಳಿಗಾವೆಯ ಕೇದಾರೇಶ್ವರ, ಅಬಲೂರಿನ ಬ್ರಹ್ಮೇಶ್ವರ ಮುಂತಾದವು ಇವರ ಹೆಸರುವಾಸಿ ಕೇಂದ್ರಗಳಾಗಿದ್ದವು. ಇವರಲ್ಲಿ ಕೆಲವರು ಪ್ರಭಾವಶಾಲಿ ವಿದ್ವಾಂಸರೂ, ಸಮಾಜ ಸುಧಾರಕ ಕಾರ್ಯ ನಿರ್ವಾಹಕರೂ ರಾಜಗುರುಗಳೂ ಆಗಿದ್ದರು. ವಾಮಶಕ್ತಿ ಅಂಥವರಲ್ಲಿ ಖ್ಯಾತನಾಮನಾಗಿದ್ದನು. ಬಳ್ಳಿಗಾವೆಯ ಕೇದಾರೇಶ್ವರ ಮಠದ ಸ್ಥಾನಾಚಾರ್ಯನಾಗಿ ಅತಿದೀರ್ಘಕಾಲ (ಸುಮಾರು ಐವತ್ತು ವರ್ಷ) ಆಡಳಿತ ನಡೆಸಿದನು. ಖ್ಯಾತ ವಿದ್ವಾಂಸನೂ ಸಮಕಾಲೀನ ಸಾಮಾಜಿಕ–ಧಾರ್ಮಿಕ ಚಟುವಟಿಕೆಗಳಲ್ಲಿ ಸಕ್ರಿಯ ಪಾತ್ರವಹಿಸಿದವನೂ ಆದ ಈತನನ್ನು ಶಾಸನಗಳು 'ರಾಜಗುರು' 'ಜೀಯ' ಎಂದೇ ಸಂಬೋಧಿಸಿವೆ.[6] ವಾಮಶಕ್ತಿಯ ಬಂದಿ(ಡಿ)ಯ ಹಿಡಿದಲ್ಲಿ ಕಾಳಗಗಳೂ ನಡೆದದ್ದುಂಟು.[7] ಈತನ ಬಂಧುಗಳ ಮೇಲೆ ದಾಳಿಮಾಡಿದಾಗ ಊರವೀರರು ಕಾದಾಡಿದ್ದುಂಟು.[8] ಈತ ಕೆಲವು ಗಣ್ಯರಿಗೆ, ಸಂಸ್ಥೆಗಳಿಗೆ ದಾನದತ್ತಿ ನೀಡಿದ ಉದಾಹರಣೆಗಳೂ ಇವೆ. ಕಳಚುರಿ ಬಿಜ್ಜಳ, ಹೊಯ್ಸಳ ಇಮ್ಮಡಿ ಬಲ್ಲಾಳ ಮುಂತಾದ ಪ್ರಸಿದ್ಧ ಅರಸರ ಹಾಗೂ ಬಲ್ಲಾಳನ ಸಾಮಂತನಾದ ಎರೆಯಣ್ಣ ಚಮೂಪತಿ (ದಂಡನಾಯಕ), ಬಿಜ್ಜಳನ ಸಾಮಂತನಾದ ಸಿಂದರ ಈಶ್ವರದೇವ ಮುಂತಾದ ಸಾಮಂತರಸರ ಮೇಲೆ ಸಾಕಷ್ಟು ಪ್ರಭಾವ ಬೀರಿದ 'ರಾಜಗುರು' ವಾಮಶಕ್ತಿಯಾಗಿದ್ದನೆಂಬುದು "ಆಜ್ಞಾರಾಜ್ಞಾಂ ಶಿರಸಿ ವಿಭವೋ ವಿದ್ವತಾಂ . . ." ಎಂಬ ಬಳ್ಳಿಗಾವೆ ಶಾಸನೋಲ್ಲೇಖ ರುಜುವಾತುಪಡಿಸುತ್ತದೆ.[9] ಶಿವಮೊಗ್ಗದಲ್ಲಿ ಇದೀಗ ದೊರೆತ ಶಾಸನದಿಂದ ವಾಮಶಕ್ತಿ ಬಲ್ಲಾಳದೇವನ ರಾಜಗುರುವಾಗಿದ್ದನೆಂಬುದು ಸ್ಪಷ್ಟವಾಗುತ್ತದೆ. ಅಲ್ಲದೆ ಈತನನ್ನೂ "ಎಕ್ಕೋಟಿ ಚಕ್ರವರ್ತಿ" ಎಂದು ಹೇಳಲಾಗಿದೆ. ವಾಮಶಕ್ತಿ ಪ್ರತಿನಿಧೀಕರಿಸಿದ ಕಾಳಾಮುಖ ಸಮಯವನ್ನು 'ಎಕ್ಕೋಟಿ ಸಮಯ'ವೆಂತಲೂ, ಕಾಳಾಮುಖ ಮಠವನ್ನು 'ಎಕ್ಕೋಟಿಮಠ'ವೆಂತಲೂ ಹೇಳುವುದುಂಟು. ಇದರ ಸ್ಥಾನಪತಿಗಳನ್ನು 'ಎಕ್ಕೋಟಿ ಸಮಯ ಚಕ್ರವರ್ತಿ', 'ಎಕ್ಕೋಟಿ ಮುನೀಂದ್ರ'ರೆಂದೂ ಹೆಸರಿಸುವುದುಂಟು.[10] ಇಲ್ಲಿ ಬರುವ 'ಎಕ್ಕೋಟಿ' ಏಳುಕೋಟಿ ಮಂತ್ರೇಶ್ವರರ ಸಂಕ್ಷಿಪ್ತನಾಮ. 'ಮಹೇಶ್ವರದರ್ಶನ'ದಲ್ಲಿ ಬರುವ ಅಸಮಾಪ್ತ ಕಲುರು ಮಂತ್ರಗಳಾಗಿದ್ದು ಅಥವಾ ಮಂತ್ರೇಶ್ವರರಾಗಿದ್ದು ಅವರ ಸಂಖ್ಯೆ 'ಏಳು ಕೋಟಿ' ಇರುವುದರಿಂದ

ಏಳ್ಕೋಟಿ–'ಎಕ್ಕೋಟಿ' ಆಯಿತು. ಆ ಸಮೂಹ 'ಎಕ್ಕೋಟಿ ಸಮಯ'ವಾಯಿತು.11 ವಾಮಶಕ್ತಿಯನ್ನೊಳಗೊಂಡಂತೆ ಏಳು ಜನ 'ಎಕ್ಕೋಟಿ'ಗಳನ್ನು (ಜೀಯರನ್ನು) ಪ್ರಸ್ತುತ ಶಾಸನ ಹೆಸರಿಸಿದೆ :

೧. 'ಎಕ್ಕೋಟಿ ಚಕ್ರವರ್ತಿ' ರಾಜಗುರು ವಾಮಶಕ್ತಿ ;
೨. ಎಕ್ಕೋಟಿಯ ಕುಮಾರನಪ್ಪ ಮಾಕನಹಳ್ಳಿಯ ಜೀಯ ;
೩. ಶಾಂತಪುರದ ಸೋಮೇಶ್ವರದೇವರು ;
೪. ಗಂಗನಾಡ ಬಸವ್ವೆಯ ಜೀಯ ;
೫. ನೀತಿಯ ಜೀಯ ;
೬. ಕಲ್ಯಾಣಿಯ ಜೀಯ ;
೭. ಮಲ್ಲಿಕ ಜೀಯ ;

ಇಲ್ಲಿ ಕಂಡುಬರುವ 'ಜೀಯ' ಎಂಬುದೂ ಕಾಳಾಮುಖ ಶೈವ ಅನುಯಾಯಿಗಳನ್ನು ಸೂಚಿಸುವ ಒಂದು ಪದವಾಗಿದ್ದು ಇವರನ್ನು ಜೀಯರು, ಜೀರರು, ಜೀಯ್ಯ ಎಂದೂ 'ಗೊರವ' ಎಂದು ಕರೆಯಲಾಗಿದೆ. ಇವರು ಮಧ್ಯಕಾಲೀನ ಕರ್ನಾಟಕದಲ್ಲಿ ಎಷ್ಟು ಪ್ರಭಾವಶಾಲಿಗಳಾಗಿದ್ದರೆಂದರೆ ಕೆಲವು ಶಾಸನಗಳ ಶಾಪಾಶಯ ಭಾಗದಲ್ಲಿ 'ಏಳಿಕ್ಕೋಟಿತಪೋಜನ [ಮು] ಮನಳಿದ ಪಞ್ಚಮಹಾಪಾತಕನು ಪೋದ ಲೋಕಕ್ಕೆ ಪೋಕು',12 ಅಥವಾ 'ಎಕ್ಕೋಟಿಯನಳಿದಂ' ಎಂದು ಮುಂತಾಗಿ ಉಲ್ಲೇಖಿಸಿದೆ. ಈ ಶಾಸನದಲ್ಲಿ ಬರುವ ಆರು ಜನ ಜೀಯರ ಬಗೆಗೆ ಹೆಚ್ಚಿನ ವಿವರಗಳೇನೂ ದೊರಕುವುದಿಲ್ಲ. ಅವರು ಆ ಪ್ರದೇಶದ ಜೀಯರು. ಬೇರೆ ಬೇರೆ ಗ್ರಾಮದಿಂದ ಬಂದವರೆಂಬುದು ಅವರ ಹೆಸರಿನ ಹಿಂದಿರುವ ಸ್ಥಳನಾಮಗಳು ಸೂಚಿಸುತ್ತದೆ. ಅಲ್ಲದೇ ಅವರೆಲ್ಲ ವಾಮಶಕ್ತಿಯ ಸಮಕಾಲೀನರಾಗಿದ್ದು ದತ್ತಿ ಪ್ರದಾನ ಸಂದರ್ಭದಲ್ಲಿ ಹಾಜರಿದ್ದರೆಂಬುದೂ ಈ ಶಾಸನದಿಂದಲೇ ಗೊತ್ತಾಗುತ್ತದೆ.

ಇನ್ನು ಈ ಶಾಸನೋಕ್ತ ಗಣೇಶ್ವರರು ಯಾರು ? ಇವರನ್ನು ಇಲ್ಲಿ ಅಸಂಖ್ಯಾತ ಗಣೇಶ್ವರರು ಎಂದೇ ಉಲ್ಲೇಖಿಸಲಾಗಿದೆ. ಇವರು ಗಣನಾಥರು ಅಥವಾ ಗಣನಾಯಕರಾಗಿದ್ದು, ಜೈನಮುನಿ, ಆರ್ಯಿಕೆ, ಶ್ರಾವಕ ಮತ್ತು ಶ್ರಾವಿಕೆಯರ ನಾಲ್ಕು ಸಂಘಗಳಿಗೆ ನಾಯಕರಾಗಿದ್ದರೆ ? ಎಂಬ ಅನುಮಾನ ಹುಟ್ಟುತ್ತದೆ.13 ಆದರೆ ಶಾಸನದಲ್ಲಿ ಅಸಂಖ್ಯಾತ ಗಣೇಶ್ವರರು ಎಂದಿರುವುದರಿಂದ ಆ ಕಾಲದಲ್ಲಿ ಜೈನಗಣೇಶ್ವರರು ಅಷ್ಟೊಂದು ಭಾರಿ ಸಂಖ್ಯೆಯಲ್ಲಿದ್ದರೆ ? ಎಂಬ ಗುಮಾನಿಯೂ ಸಹಜವಾಗಿ ಮೂಡುತ್ತದೆ. 'ಅಸಂಖ್ಯಾತ' ಎಂಬುದನ್ನು ಬಹಳ ಎಂಬ ಸರಳ ಅರ್ಥದಲ್ಲಿಟ್ಟುಕೊಂಡರೆ ತಪ್ಪೇನಿಲ್ಲ ಎಂದು ಅನ್ನಿಸುತ್ತದೆ.

ರಾಜಗುರು ವಾಮಶಕ್ತಿ ಈ ಎಕ್ಕೋಟಿ, ಗಣೇಶ್ವರರ ಸಮ್ಮುಖದಲ್ಲಿ (ಸಭೆ ಸೇರಿಸಿ) ಕುರುಳಿತೀರ್ಥದ ಗಂಗಜಿನಾಲಯಕ್ಕೆ 'ಜೋಗವಟ್ಟಿಗೆ'ಯನ್ನು (ಯೋಗಪಟ್ಟಿಕೆ ಅಥವಾ ಹೊದಕೆ) ಕೊಟ್ಟು, ಅದಕ್ಕೆ 'ಎಕ್ಕೋಟಿಜಿನಾಲಯ' ಎಂದು ಪುನರ್ ನಾಮಕರಣ

ಮಾಡುತ್ತಾರೆ. ಇದು ಆ ಕಾಲದ ಸಂಪ್ರದಾಯದ ಒಂದು ಭಾಗವಾಗಿದ್ದಂತೆ ಸಮಕಾಲೀನ ಶಾಸನಗಳಿಂದಲೂ ದೃಢಪಡಿಸಬಹುದು.[14] ಇಲ್ಲಿ 'ಎಕ್ಕೋಟಿ ಜಿನಾಲಯ' ಎಂಬುದು ಕಾಳಾಮುಖ ಶೈವಮತದ ಪ್ರಭಾವ ಸಂಬಂಧವನ್ನು ಸೂಚಿಸುತ್ತದೆಯೆಂದು ಪ್ರತ್ಯೇಕವಾಗಿ ಹೇಳಬೇಕಾಗಿಲ್ಲ. ಪ್ರಸ್ತುತ ಶಾಸನ ಈ ಬಗೆಯ ಮತೀಯ ಪ್ರಭಾವ ಸಂಬಂಧವನ್ನು ಶಿವಮೊಗ್ಗ ಪ್ರದೇಶದಲ್ಲಿ ಗುರುತಿಸಲು ತುಂಬ ಸಹಾಯಕಾರಿಯಾಗಿದೆ.

ಕುರುಳಿತೀರ್ಥದ ಬಸದಿ ಮೂಲತಃ ಗಂಗ ಜಿನಾಲಯವಾಗಿತ್ತು. ಇದನ್ನು ಹೊಯ್ಸಳ ನರಸಿಂಹ (I)ನ ಆಳಿತ ಕಾಲದಲ್ಲಿ ಆಸಂದಿಯ ಗಂಗರಸ ಸತ್ಯಗಂಗ ದೇವನು ನಿರ್ಮಿಸಿರಬೇಕು. ಎಡೆಹಳ್ಳಿ ನೆಲೆವೀಡಿನಲ್ಲಿ ಸುಖದಿಂದ ರಾಜ್ಯಭಾರ ಮಾಡುತ್ತಿರುವಾಗ (ಕುರುಳಿತೀರ್ಥದಲ್ಲಿ) ಗಂಗಜಿನಾಲಯವನ್ನು ೧೧೬೩ರಲ್ಲಿ ಈತ ನಿರ್ಮಿಸಿದನೆಂದು ಶಿವಮೊಗ್ಗದಲ್ಲಿರುವ ವಸ್ತು ಸಂಗ್ರಹಾಲಯದ ಶಿಲಾಶಾಸನ ಸ್ಪಷ್ಟಪಡಿಸುತ್ತದೆ.[15] ಈ ಬಸದಿಗೆ ಕಾಲಕ್ರಮದಲ್ಲಿ, ಅಂದರೆ ವೀರ ಬಲ್ಲಾಳನ ಕಾಲದಲ್ಲಿ (೧೧೭೩–೧೨೨೦), ಆತನ ರಾಜಗುರು ವಾಮಶಕ್ತಿ ಇತರ ಎಕ್ಕೋಟಿ, ಗಣೇಶ್ವರರ ಸಮ್ಮುಖದಲ್ಲಿ 'ಎಕ್ಕೋಟಿ ಜಿನಾಲಯ' ಎಂದು ಪುನರ್ ನಾಮಕರಣ ಮಾಡುತ್ತಾರೆ. ಒಂದು ಶತಮಾನದೊಳಗೇ ಜಿನಾಲಯದ ಹೆಸರು ಬದಲಾಗುವುದನ್ನು ಗಮನಿಸುತ್ತೇವೆ. ಇದಕ್ಕೆ ಮುಖ್ಯ ಕಾರಣ ಕಾಳಾಮುಖ ಶೈವಗುರು ಸಂಬಂಧ. ಈ ಮತದವರು ಜೈನಮತದ ದೇಗುಲಕ್ಕೆ ದೇವಭೋಗ (ದತ್ತಿ) ನೀಡಿ, ತಮ್ಮ ಮತೀಯ ಸಂಪ್ರದಾಯದಂತೆ 'ಜೋಗವಟ್ಟಿಗೆ',[16] 'ನಂದಿಯಕೋಲ'ನ್ನು ಕೊಟ್ಟಿರುವುದು ನಿಜಕ್ಕೂ ಸ್ವಾರಸ್ಯಕರವಾಗಿದೆ. ಜೋಗವಟ್ಟಿಗೆಯನ್ನೇನೋ ಜೈನಮತೀಯ ಯೋಗಪಟ್ಟಿಕೆ ಎಂದು ಸರಳವಾಗಿ ಅರ್ಥಮಾಡಿಕೊಳ್ಳಬಹುದಾದರೂ[17], ನಂದಿಯ ಕೋಲು ದಿಗಂಬರ ಜೈನ ಸಂಪ್ರದಾಯದ ಬಸದಿಯಲ್ಲಿ ಸಾಮಾನ್ಯವಾಗಿ ಕಂಡು ಬರುವುದಿಲ್ಲವೆಂದು ಹೇಳಲಾಗಿದೆ.[18] ನಂದಿಯ ಕೋಲ (ಕಂಬ)ನ್ನು ಮೆರೆಸುತ್ತ ಒಯ್ಯುವುದು, ನಂದಿಯ ಕೋಲಿನ ಪ್ರಮಾಣವನ್ನು ಆಧರಿಸಿ ಭೂಮಿಯನ್ನು ಅಳೆಯುವುದು ಆಗಿನ ಕಾಲದಲ್ಲಿತ್ತೆಂದೂ ಈ ಮೂಲಕ ಸೂಚಿಸಬಹುದು [19]

ಮಧ್ಯಕಾಲೀನ ಕರ್ನಾಟಕದಲ್ಲಿದ್ದ ಕಾಳಾಮುಖಶೈವರು ತಮ್ಮ ಉದಾರ ಸಿದ್ಧಾಂತ ನೀತಿಯಿಂದಾಗಿ ಇತರ ಮತಗಳೊಂದಿಗೆ ಸಹಬಾಳ್ವೆಗೆ ಎಷ್ಟರಮಟ್ಟಿನ ಅನುಕೂಲತೆಯನ್ನುಂಟುಮಾಡಿದರೆಂಬುದು ಶಿವಮೊಗ್ಗ ಶಾಸನದಿಂದಲೂ ರುಜುವಾತಾಗುತ್ತದೆ. ಅಲ್ಲದೆ ಕಾಳಾಮುಖ ಶೈವ ಸ್ಥಾನಾಪತಿಗಳಲ್ಲಿ ವಾಮಶಕ್ತಿಯಂಥಾ 'ರಾಜಗುರು' ಎಷ್ಟು ಪ್ರಭಾವಶಾಲಿಯಾಗಿದ್ದರೆಂಬುದನ್ನು, ಆರ್ಥಿಕವಾಗಿ ಎಷ್ಟು ಬಲಾಢ್ಯರಿದ್ದರೆಂಬುದನ್ನು ಈ ಮೂಲಕ ಊಹಿಸಬಹುದಾಗಿದೆ. ಸಮಕಾಲೀನ ಧಾರ್ಮಿಕ–ಸಾಮಾಜಿಕ–ಆರ್ಥಿಕ ಜೀವನದಲ್ಲಿ ಕಾಳಾಮುಖಶೈವರ ಪಾತ್ರ ಎಷ್ಟಿತ್ತೆಂಬುದರ ಸಮಗ್ರ ಸವಿಸಾಕ್ಷ್ಯ ಅಗತ್ಯದ ಹಿನ್ನೆಲೆಯಲ್ಲಿ ಈಗ ನಮಗೆ ದೊರೆತಿರುವ ಕೋಟೆ ಆಂಜನೇಯ ದೇವಾಲಯದ ಶಾಸನ ತುಂಬ ಉಪಯುಕ್ತವಾಗಿದೆ.

ಭೌಗೋಳಿಕ ಮಹತ್ವ

1) ಕುರುಳಿತೀರ್ಥ : ಪ್ರಸ್ತುತ ಶಾಸನೋಕ್ತ ಸ್ಥಳನಾಮಗಳಲ್ಲಿ 'ಕುರುಳಿಯ ತೀರ್ಥ' ಪ್ರಮುಖವಾಗಿದೆ. ಇದರ ಉಲ್ಲೇಖ ಶಿವಮೊಗ್ಗ ಜಿಲ್ಲೆಯ ಇನ್ನೂ ಕೆಲವು ಶಾಸನಗಳಲ್ಲಿ ಈಗಾಗಲೆ ಕಂಡುಬಂದಿದೆ.20 ತುಂಗಾಭದ್ರಾ ನದಿ ತೀರದಲ್ಲಿರುವ ಒಂದು ಪವಿತ್ರ ತೀರ್ಥ ಕ್ಷೇತ್ರವಿದು. ಶಿವಮೊಗ್ಗೆಯ ದಕ್ಷಿಣಕ್ಕೆ ಸುಮಾರು ೯-೧೦ ಕಿ.ಮಿಾ. ದೂರದಲ್ಲಿ, ತುಂಗಭದ್ರಾ ನದಿಯ ಬಲದಂಡೆಯ ಪ್ರದೇಶದಲ್ಲಿ ಕೊರ್ಲಹಳ್ಳಿ (ಕೊರಲಳ್ಳಿ) ಎಂಬ ಊರಿದೆ. ಇದೇ ಮಧ್ಯಕಾಲೀನ ತೀರ್ಥಕ್ಷೇತ್ರವಾಗಿರಬಹುದಾದ ಕುರುಳಿ ಆಗಿರಬೇಕು : ಕುರುಳಿ > ಕುರುಳಿಹಳ್ಳಿ > ಕೊರಳಿಹಳ್ಳಿ > ಕೊರಲಹಳ್ಳಿ > ಕೊರ್ಲಹಳ್ಳಿ ಇದು ಉತ್ತರ ಕರ್ನಾಟಕದ ಕೊಪಣ ತೀರ್ಥದ ಹಾಗೆ (ಕೊಪ್ಪಳ) ದಕ್ಷಿಣ ಕರ್ನಾಟಕದಲ್ಲಿ ಜೈನರ ಒಂದು ಪವಿತ್ರ ತೀರ್ಥವಾಗಿದ್ದಿರಬಹುದು. ಈಗ ಅಲ್ಲಿ ಜೈನ ಬಸದಿಯಿಲ್ಲ. ಆ ಬಸದಿಯ ಭಾಗಗಳನ್ನೇ ಶಿವಮೊಗ್ಗದ ಕೋಟೆ ಆಂಜನೆಯ ದೇವಾಲಯ ನಿರ್ಮಾಣ ಕಾರ್ಯದಲ್ಲಿ ಬಳಸಿಕೊಂಡಿರಬಹುದೆಂದೂ ಅಲ್ಲೇ ಲಭ್ಯವಿರುವ ಈ ಶಾಸನದಿಂದಾಗಿ ಊಹಿಸಬಹುದು.

ಮಾಕನಹಳ್ಳಿ : ಇದು ಶಿವಮೊಗ್ಗದ ವಾಯುವ್ಯಕ್ಕೆ ಸುಮಾರು ಇಪ್ಪತ್ತೊಂದು ಕಿ.ಮಿಾ. ಅಂತರದಲ್ಲಿರುವ ಮಾಚೆನಹಳ್ಳಿ ಆಗಿರಬಹುದು. ತಾಲವ್ಯೀಕರಣದಿಂದಾಗಿ ಮಾಕನ> ಮಾಚಿನ (ಕೆಂಗುಲಾಬಿ> ಚೆಂಗುಲಾಬಿ) ಆದಂತೆ ಆಗಿರಬಹುದು ಇದರ ಉಲ್ಲೇಖ ಬಾಬನಹಳ್ಳಿ ಶಾಸನದಲ್ಲೂ ಕಂಡುಬಂದಿದೆ.

ಕಾಂತವೂರು : ಇದು ಸೊರಬ ತಾಲ್ಲೂಕಿನ ಕುಪ್ಪಗಡ್ಡೆ ಹೋಬಳಿಯಲ್ಲಿರುವ ಕಾತೂರು ಆಗಿರಬೇಕು. ಕಾಂತ+ಊರು> ಕಾಂತವೂರು ; ಕಾಂತೂರು> ಕಾತೂರು (ದಾಂಟು> ದಾಟು) ಆದಂತೆ ಎಂದಾಗಿರಬಹುದು. ಇದೇ ಸೊರಬ ತಾಲ್ಲೂಕಿನ ಆನವಟ್ಟಿ ಹೋಬಳಿಯಲ್ಲೂ ಕಾತವಳ್ಳಿ ಎಂಬ ಊರಿದ್ದು ಹಳ್ಳಿ/ಊರು ಬದಲಾವಣೆಯಾಗಿದೆಯೆಂದಿಟ್ಟುಕೊಂಡಲ್ಲಿ ಅದರೊಟ್ಟಿಗೂ ಸಮಿಾಕರಿಸಬಹುದು. ಆದರೆ ಈಗಿನ ಕಾತೂರು ಶಾಸನದ ಕಾಂತವೂರು ಆಗಿದ್ದಿರಬಹುದಾದ ಸಾಧ್ಯತೆಯೇ ಹೆಚ್ಚೆನ್ನಿಸುತ್ತದೆ.

(4) ಗಂಗನಾಡು : ಗಂಗರ ರಾಜಕೀಯ-ಧಾರ್ಮಿಕ ಚಟುವಟಿಕೆಗಳು ಶಿವಮೊಗ್ಗ ಪ್ರದೇಶದಲ್ಲಿ (ಮಂಡಲಿ ರಾಜ್ಯ) ಸಾಕಷ್ಟು ವ್ಯಾಪಕವಾಗಿದ್ದವು ಎಂಬುದನ್ನು ಪ್ರತಿಬಿಂಬಿಸುವ ಗಂಗನನಾಡು/ಗಂಗನಾಡು ಎಂಬುದು ಶಿವಮೊಗ್ಗದ ಉತ್ತರಕ್ಕೆ ಸುಮಾರು ಐದು ಕಿ.ಮಿಾ. ದೂರದಲ್ಲಿರುವ ಬಸವನ ಗಂಗೂರು ಅಥವಾ ಸುಮಾರು ಆರು ಕಿ.ಮಿಾ. ದೂರದಲ್ಲಿರುವ ಕಲ್ಲಗಂಗೂರು ಇರಬಹುದು. ಭದ್ರಾವತಿ ತಾಲ್ಲೂಕಿನಲ್ಲೂ ಗಂಗೂರು ಎಂಬ ಊರಿದ್ದು ಇದನ್ನೂ ಒಳಗೊಂಡ ಒಟ್ಟು ಪ್ರದೇಶ (ಮಂಡಳಿಯ) ಗಂಗನಾಡು ಆಗಿದ್ದಿರಬೇಕು.21

(5) ನೀಲಿ : ಶಿವಮೊಗ್ಗದ ಉತ್ತರಕ್ಕೆ ಸುಮಾರು ಮೂರು ಕಿ.ಮಿಾ. ಅಂತರದಲ್ಲಿರುವ ನವಿಲೆ ಎಂಬ ಊರಿದೆ. ಅಲ್ಲದೆ ನೈದಿಲೆ ಎಂಬ ಮತ್ತೊಂದು ಊರು ಕಂಡು

ಬರುತ್ತವೆ. ಇವೆರಡರಲ್ಲಿ ಒಂದು (ನೈದಿಲೆ) ಶಾಸನ ಕಾಲದ ನೀಲೆಯಾಗಿದ್ದಿರಬೇಕು. ನೀಲೆ> (ನೀಯಿಲೆ) > (ನೇಯಿಲೆ) > (ನೇದಿಲೆ) > ನೈದಿಲೆ.

(6) ಕಲ್ಯಾಣಿ22/ಕಲ್ಯಾಣ : ಮಧ್ಯಕಾಲದ ಕರ್ನಾಟಕದಲ್ಲಿ ಪ್ರಸಿದ್ಧವಾದ ಕಲ್ಯಾಣ ಚಾಳುಕ್ಯ, ಕಳಚುರಿ ರಾಜಧಾನಿ ನಗರ ಹಾಗೂ ಸಾಂಸ್ಕೃತಿಕ ಕೇಂದ್ರವಾಗಿದ್ದ ಕಲ್ಯಾಣ ಬೀದರ್ ಜಿಲ್ಲೆಯ ಇಂದಿನ ಬಸವಕಲ್ಯಾಣವಾಗಿರಬೇಕು.

ಮಲ್ಲಿಕ23 : ಶಿವಮೊಗ್ಗದ ವಾಯುವ್ಯಕ್ಕೆ ಸುಮಾರು ಐದು ಕಿ.ಮೀ. ಅಂತರದಲ್ಲಿರುವ ಮಲ್ಲಿಗೆನಳ್ಳಿ ಆಗಿದ್ದಿರಬೇಕು ಇದೇ ಸಂಕ್ಷೇಪಗೊಂಡು ಮಲ್ಲಿಕವಾಗಿದ್ದಿರಬಹುದು. ಮಲ್ಲಿಕ > ಮಲ್ಲಿಗೆ ಮಲ್ಲಿಗೆ + ಹಳ್ಳಿ > ಮಲ್ಲಿಗೆನಳ್ಳಿ.

ಶಾಪಾಶಯ (ಶಾಪವಚನ)

ದಾನಶಾಸನದ ಅವಿಭಾಜ್ಯ ಅಂಗವಾಗಿ ಬಂದಿರುವ ಶಾಪಾಶಯ ಅಥವಾ ಫಲಶ್ರುತಿ ವಾಕ್ಯಗಳಲ್ಲಿ ಕೊಟ್ಟ ದಾನ ನೆಲ (ಭೂಮಿ) ಚಂದ್ರರಿರುವ ತನಕ ಸಲ್ಲುವಂತಾಗಲೆಂದು ಹಾರೈಸಿ ಕೊನೆಯಲ್ಲಿ ಈ ಮರ್ಯಾದೆಯನ್ನು ಮೀರಿದವನು ಶಿವದ್ರೋಹಿ ಹಾಗೂ ಪಂಚಮಹಾಪಾತಕಿ ಎಂದು ಶಪಿಸಲಾಗಿದೆ. ಜೈನ ಬಸದಿಗೆ ಸಂಬಂಧಿಸಿದ ಸ್ಮಾರಕ-ದಾನ ಶಾಸನವಿದಾದರೂ ಕೊನೆಯಲ್ಲಿ ಇರುವ 'ಶಿವದ್ರೋಹಿ' ಎಂಬ ಮಾತು ಕಾಳಾಮುಖ ಶೈವಮತದ ಪ್ರಭಾವದ ಹಿನ್ನೆಲೆಯಲ್ಲಿ ನೋಡಿದರೆ ಆಶ್ಚರ್ಯವನ್ನುಂಟುಮಾಡುವಂಥದ್ದಲ್ಲ. ಈ ಶಾಸನ-ಶಾಪಾಶಯದ ಹಿಂದಿರುವ ಉದ್ದೇಶ ಸ್ಪಷ್ಟವಾಗಿದೆ; ಇದು ಸಾಮಾಜಿಕ-ಧಾರ್ಮಿಕ ನೈತಿಕ ಒತ್ತಡವನ್ನು ಜನಪದದಲ್ಲಿ ತರುವುದೇ ಆಗಿದೆ.

ಒಟ್ಟಿನಲ್ಲಿ ಕೋಟೆ ಆಂಜನೇಯ ದೇವಾಲಯದ ಒಂದು ತೊಲೆ ಹೊತ್ತುಕೊಂಡು ಬಂದಿರುವ ಈ ಶಾಸನ ಮಧ್ಯಕಾಲೀನ ಕರ್ನಾಟಕದ ಅದರಲ್ಲೂ ಶಿವಮೊಗ್ಗದ ಇತಿಹಾಸ, ಸಂಸ್ಕೃತಿ, ಧರ್ಮ ಹಾಗೂ ಸ್ಥಳನಾಮಗಳನ್ನು ಅಭ್ಯಾಸ ಮಾಡುವವರಿಗೆ ಅಮೂಲ್ಯ ಮಾಹಿತಿಯನ್ನೊಂದೆಡೆ ಒದಗಿಸುವುದು. ಅಲ್ಲದೆ ಇಂದಿನ ಕೋಟೆ ಆಂಜನೇಯ ದೇವಾಲಯಕ್ಕೆ ಬಳಸಿದ ಕೆಲವು ವಾಸ್ತು ಭಾಗಗಳಾದರೂ ಮೂಲತಃ ಜಿನಾಲಯದ್ದಾಗಿರಬೇಕೆಂಬುದನ್ನು ದೃಢಪಡಿಸುತ್ತದೆ. ಈಗಿರುವ ಆಂಜನೇಯ ದೇಗುಲದ ಗರ್ಭಗೃಹದ ಬಾಗಿಲುವಾಡ, ನವರಂಗದ ಕಡಚಲು ಕಂಬಗಳು, ತೊಲೆ, ನವರಂಗದ ಬಾಗಿಲು ಚೌಕಟ್ಟುಗಳೆಲ್ಲ ಜೈನ ಬಸದಿಯ ಭಾಗಗಳಾಗಿದ್ದಂತೆ ತೋರುತ್ತವೆ. ಗರ್ಭಗೃಹ ದ್ವಾರದ ಲಲಾಟ ಬಿಂಬದ ಮೇಲಿರುವ ಉಬ್ಬುಗೆತ್ತನೆ ಶಿಲ್ಪ ಮುಕ್ಕೊಡೆಯಡಿ ಕುಳಿತು ತಪೋನಿರತನಾದ ಪ್ರಭಾವಲಯ ಸಹಿತವಾದ ಜೈನತೀರ್ಥಂಕರನದಾಗಿತ್ತು. ಇದನ್ನು ಭಿನ್ನಗೊಳಿಸಲಾಗಿದೆ. ಇದರ ಅಚೀಚೆ ರಾಜಪುರುಷ ಲಕ್ಷಣಗಳಿಂದ ಶೋಭಿಸುವ ಚಾಮರಧಾರಿಗಳ ಕೆತ್ತನೆಗಳಿವೆ. ದ್ವಾರ ಶಾಖೆಗಳ ಬುಡ ಭಾಗದಲ್ಲೂ ಕ್ರಮವಾಗಿ (ಬಲದಿಂದ ಎಡಕ್ಕೆ) ದರ್ಪಣ ಸುಂದರಿ, ಚತುರ್ಭುಜ ಸಹಿತ ದ್ವಾರಪಾಲಕ (ಅಂಕುಶ-ಪಾಶ-ಗದಾ-ಪದ್ಮಧಾರಿಯಾಗಿ), ನೃತ್ಯಗಾತಿಯು ಅಂಕುಶ-ಪಾಶ, ಅಭಯ ಅಕ್ಷ

ಮೂಲ ಸಹಿತ (ಇನ್ನೊಂದು ಕೈ ಮುರಿದಿದೆ) ಚತುರ್ಭುಜೆಯಾಗಿ ನಿಂತಿರುವುದು, ಕಂಡು ಬರುತ್ತದೆ. ಈ ದ್ವಾರಕ್ಕೆ ಸಂಬಂಧಿಸಿದಂತೆ ಪಾರ್ಶ್ವ ಜಾಲಂಧ್ರಗಳಿದ್ದು ಅವು ಶಿಲ್ಪಾಲಂಕಾರ ಸಹಿತವಿವೆ. ನವರಂಗದ ದ್ವಾರ ಐದು ಶಾಖೆಗಳಿಂದ ಕೂಡಿದ್ದು ಇವರ ಲಲಾಟ ಬಿಂಬದ ಮೇಲೆ ಕೂಡ ಮುಕ್ಕೊಡೆ ಅಡಿಯಲ್ಲಿ ಚಾಮರಧಾರಿ, ಯಕ್ಷ-ಯಕ್ಷಿ ಸಹಿತ ಪದ್ಮಾಸನದಲ್ಲಿ ಕುಳಿತು ತಪೋನಿರತನಾದ ಜೈನತೀರ್ಥಂಕರನ ಉಬ್ಬು ಶಿಲ್ಪವಿತ್ತು. ಇಲ್ಲೂ ಕೂಡ ಜಿನಬಿಂಬವನ್ನು, ಮಾತ್ರ ಕೆರಸಿಬಿಡಲಾಗಿದೆ. ದ್ವಾರಶಾಖೆಯ ಬುಡ ಭಾಗದಲ್ಲಿ ಚಾಮರಧಾರಿಣಿ, ರತಿ-ಮನ್ಮಥ, ತುಂಬುರು, ಶಂಖವಾದಕ ಶಿಲ್ಪಗಳನ್ನು ಕಂಡರಿಸಲಾಗಿದೆ. ಇವೆಲ್ಲವೂ 'ಹೊಯ್ಸಳ ಶೈಲಿ' ಯಲ್ಲಿವೆ.24 ಈ ಎಲ್ಲ ಬಾಹ್ಯ ಆಧಾರಗಳ ಮೇಲಿಂದ ಡಾ ಅ. ಸುಂದರವರು ಈ ದೇವಾಲಯ ಮೂಲತಃ ಒಂದು ಜೈನ ಬಸದಿಯೆಂಬುದು ನಿಸ್ಸಂಶಯವೆಂದಿದ್ದಾರೆ25 ಆದರೆ ಈಗ ಪತ್ತೆಯಾಗಿರುವ ಶಾಸನದಿಂದ ಈಗಿರುವ ಕೋಟಿ ಆಂಜನೇಯ ದೇವಾಲಯಕ್ಕೆ ಬಳಸಿರುವ ಅಂಗಭಾಗಗಳು ಮಾತ್ರ ಮೂಲತಃ ೧೧೩೨ರ ಕುರುಳಿತೀರ್ಥದ (ಗಂಗ) ಜಿನಾಲಯಕ್ಕೆ ಅಥವ ಎಕ್ಕೋಟಿ ಜಿನಾಲಯಕ್ಕೆ ಸಂಬಂಧಿಸಿದ್ದೆಂದು ಗೊತ್ತಾಗುತ್ತದೆ. ಹಳೆಯ ದೇಗುಲ ಭಾಗಗಳನ್ನು ಬೇರೆಡೆಯಿಂದ ತಂದು ಅದನ್ನೂ ಬಳಸಿ ಇಲ್ಲವೆ ಕೆಲವೊಮ್ಮೆ ಮಾರ್ಪಡಿಸಿ (ರೂಪಾಂತರಿಸಿ ಕೂಡ) ಹೊಸ ದೇವಾಲಯ ಕಟ್ಟಿರುವುದಕ್ಕೇನೆ ಹಲವು ನಿದರ್ಶನಗಳಿವೆ.26 ಅವುಗಳ ಸಾಲಿಗೆ ಇಂದು ಬೃಹತ್ ಸಂಕೀರ್ಣವಾಗಿ ಬೆಳೆದಿರುವ ಕೋಟಿ ಆಂಜನೇಯ ಅಥವಾ ಸೀತಾರಾಮಾಂಜನೇಯಸ್ವಾಮಿ ದೇವಸ್ಥಾನವನ್ನೂ ಸೇರಿಸಬಹುದಾಗಿದೆ. ಇದರ ಮೂಲ ವಾಸ್ತುಶಿಲ್ಪದ ಇತಿಹಾಸವನ್ನು ಕಾಲದ ಚೌಕಟ್ಟಿನಲ್ಲಿ ತಿಳಿಯುವಲ್ಲಿ ಕೂಡ ಪ್ರಸ್ತುತ ಶಾಸನ ಸಹಾಯಕವಾಗಿದೆ.

ಗಂಗ-ಹೊಯ್ಸಳರ ಕಾಲದಲ್ಲಿ ಶಿವಮೊಗ್ಗ ದಕ್ಷಿಣ ಭಾಗವಾದ ಮಂಡಳಿನಾಡು-ಎಡತೊರೆ ಪ್ರದೇಶದಲ್ಲಿ ಜೈನಧರ್ಮ ಸಾಕಷ್ಟು ವ್ಯಾಪಕವಾಗಿ ಹಬ್ಬಿತ್ತೆಂಬುದು ಸಮಕಾಲೀನ ಶಾಸನ, ಶಿಲ್ಪಗಳಿಂದ ವೇದ್ಯವಾಗಿದೆ. ಜೈನರು ಶಿವಾಲಯಕ್ಕೆ ದಾನ ನೀಡಿದ ನಿದರ್ಶನವನ್ನು ಹಿರಿಯೂರು ಶಾಸನದಲ್ಲಿ ದಾಖಲುಪಡಿಸಲಾಗಿದೆ. ಮಂಡಳಿ-ಸಾವಿರ ನಾಡಪ್ರಭು, ಮಹಾವ್ಯಾಪಾರಿ ಜಿನೇಂದ್ರಪಾದಾರಾಧಕ ಹೊಯ್ಸಳ ಗೊಯ್ದಸೆಟ್ಟಿ ಶಿವಧರ್ಮ ಕಥಕ್ಕಳಿ ಸಿದ್ದೇಶ್ವರ ದೇವಾಲಯಕ್ಕೆ ಭೂಮಿದಾನ ನೀಡಿದನೆಂದು ತಿಳಿದುಬರುತ್ತದೆ.27 ಹಾಗೆಯೇ ಕಾಳಾಮುಖ ಶೈವರು ಜಿನಾಲಯಕ್ಕೆ ದತ್ತಿ ನೀಡಿ ಆ ಪ್ರದೇಶದ ಗಂಗ ಜಿನಾಲಯವನ್ನು ಎಕ್ಕೋಟಿ ಜಿನಾಲಯವಾಗಿಸಿದ್ದ ಅಪೂರ್ವ ಸಂಗತಿ ಪ್ರಸ್ತುತ ಶಾಸನ ಶೋಧನೆಯಿಂದಾಗಿ ತಿಳಿಯುವಂತಾಯಿತು. ಮಧ್ಯಕಾಲೀನ ಕರ್ನಾಟಕದ ಸಾಮಾಜಿಕ ಧಾರ್ಮಿಕ ಜೀವನಸಲ್ಲಿ ಭಿನ್ನಮತೀಯರ ಸಹಬಾಳ್ವೆಯ ಮೇಲೆ ಹೊಸ ಬೆಳಕು ಚೆಲ್ಲಿದಂತಾಯಿತು. ವಾಸ್ತುಶಿಲ್ಪದ ಅಧ್ಯಯನದ ದೃಷ್ಟಿಯಿಂದ ಗಂಗಜಿನಾಲಯವೊಂದು ಎಕ್ಕೋಟಿ ಜಿನಾಲಯವಾಗಿ ನಾಮಾಂತರಗೊಂಡಿದ್ದಷ್ಟೇ ಅಲ್ಲ, ಆ ಎಕ್ಕೋಟಿ ಜಿನಾಲಯದ ಭಾಗಗಳು ಸ್ಥಳಾಂತರಗೊಂಡು ಕೋಟಿ ಆಂಜನೇಯ ದೇವಸ್ಥಾನದ ಅಂಗ

ಭಾಗಗಳಾಗಿ ತುಸು ರೂಪಾಂತರ ಹೊಂದಿರುವ ಸಂಗತಿಯನ್ನು ತಿಳಿಯುವಲ್ಲೂ ನಂಬಲರ್ಹ ಶಾಸನಾಧಾರವೊಂದು ಬೆಳಕಿಗೆ ಬಂದಂತಾಯಿತು.

ಶಾಸನ ಪಾಠ[28]

1. ಸ್ವಸ್ತಿ ಶ್ರೀಮತು ಬಲ್ಲಾಳು ದೇವನ ರಾಜಗುರುಗಳುಂ ಎಕ್ಕೋಟಿ ಚಕ್ರವರ್ತ್ತಿಗಳಪ್ಪ ಮಾಳೇಶ್ವರದ ವಾಮಶಕ್ತಿ ದೇ[ವ]ರುಂ ಎಕೊಟ್ಟಿಯ ಕೊಮಾರನಪ್ಪ ಮಾಕನ ಹಳ್ಳಿಯ ಮಾದೆಯ ಜಿಯರುಂ ಕಾಂತ.

2. ಊರವ ಸೋಮೇಸ್ವರ ದೇವರುಂ ಗಂಗನಾಡ ಬಸ್ವವೆಯ ಜಿಯನುಂ ಸೀಲೆಯ ಜಿಯನುಂ ಕಲ್ಯಾಣಿ ಜಿಯನುಂ ಮಲ್ಲಿಕ ಜಿ [ಯ] ನುಂ ಮೊದಲಾದ ಸಮಸ್ತ ಎಕೊಟ್ಟಿಗಳುಂ

3. ಅಸಂಖ್ಯಾತ ಗಣೇಸ್ವರರು ಮಿರ್ದ್ದು ಕುರುಳಿಯ ತೀರ್ತ್ಥದ ಬಸದಿಗೆ ಜೋಗವಟ್ಟಿಗೆಯನಿಕ್ಕಿ ಏಕ್ಕೋಟ್ಟಿ ಜಿನಾಲಿಯಮಂದು ಹೆಸರಂ ಕೊಟ್ಟು ದೇವಭೋಗಮುಮಂ ನನ್ದಿಯ ಕೋಲು.

4. ಮಂ ಕೊಟ್ಟ ನೆಲಸುಂ ಚಂದ್ರನುಂ ವುಳ್ಳನ್ನವರಂ ಸಲುವಂತಾಗಿ ಈ ಮರಿಯಾದೆಯುಂ ಮಿಾರಿದ [ದಾ] ತಂ ಸಿವದ್ರೋಹಂ ಪಂಚಮಹಾಪ [ಪಾ] ತಕಂ ||

ಶಾಸನದ ಭಾವಾರ್ಥ

ಮಂಗಳವಾಗಲಿ ಶ್ರೀಮತ್ (ಇಮ್ಮಡಿ) ಬಲ್ಲಾಳದೇವನ ರಾಜಗುರುಗಳೂ
'ಏಳುಕೋಟಿ' ಚಕ್ರವರ್ತಿಗಳೂ ಮಾಳೇಶ್ವರದವರು ಆದ (ಇಮ್ಮಡಿ)
ವಾಮಶಕ್ತಿ ದೇವರು
'ಏಳುಕೋಟಿ' ಕುಮಾರನಾದ ಮಾಕನಹಳ್ಳಿಯ ಜೀಯರು
ಕಾಂತವೂರಿನ ಸೋಮೇಶ್ವರ ದೇವರೂ
ಗಂಗನಾಡಿನ ಬಸವ್ವೆಯ [ಮಗ] ಜೀಯನೂ,
ಸೀಲೆಯ ಜೀಯನೂ, ಕಲ್ಯಾಣ ಜೀಯನೂ
ಮಲ್ಲಿಕ ಜೀಯನೂ ಮೊದಲಾದ ಸಮಸ್ತ 'ಏಳುಕೋಟಿ'ಗಳೂ ಅಸಂಖ್ಯಾತ
'ಗಣೇಶ್ವರ'ರೂ ಇರಲಾಗಿ, ಕುರುಳಿಯ ತೀರ್ಥದ ಬಸದಿಗೆ 'ಜೋಗವಟ್ಟಿಗೆ'
ಕೊಟ್ಟು, 'ಏಕ್ಕೋಟಿ ಜಿನಾಲಯ' ಎಂದು ಹೆಸರಿಟ್ಟು, 'ದೇವಭೋಗ'ವನ್ನೂ
'ನಂದಿಯಕೋಲ'ನ್ನೂ, ಕೊಟ್ಟರು. ಅದನ್ನು ಈ ಭೂಮಿ–ಚಂದ್ರರಿರುವವರೆಗೆ
ಸಲಹುವಂತಾಗಬೇಕು. ಈ ರೀತಿ ಮಾಡಿದ [ಗೌರವ] ದಾನವನ್ನು ಮೀರಿದವನು
ಶಿವದ್ರೋಹಿ ಹಾಗೂ ಪಂಚಮಹಾಪಾತಕಿ ಆಗುವನು.

ಅಡಿ ಟಿಪ್ಪಣಿಗಳು

1 ಶಿವಮೊಗ್ಗ ಜಿಲ್ಲೆಯಲ್ಲಿ ಇದುವರೆಗೆ ಪ್ರಕಟವಾದ ಒಟ್ಟು ೨೧೨೫ ಶಾಸನಗಳ ತಾಲೂಕುವಾರುಯಾದಿಯನ್ನು ಹೀಗೆ ಸೂಚಿಸಬಹುದು. [ಇತ್ತೀಚಿನ ಕ್ಷೇತ್ರಕಾರ್ಯಗಳಲ್ಲಿ ದೊರೆತಿರುವ ಶಾಸನಗಳನ್ನೂ ಸೇರಿಸಿದರೆ ಈ ಸಂಖ್ಯೆ ಸುಮಾರು ೨೧೫೦ ಆದೀತು].

೧. ಸೊರಬ–೬೬೭	೬. ಹೊನ್ನಾಳಿ–೧೩೨
೨. ಶಿಕಾರಿಪುರ–೪೫೫	೭. ಹೊಸನಗರ–೧೨೧
೩. ಸಾಗರ–೨೫೪	೮. ಚನ್ನಗಿರಿ–೧೦೧
೪. ತೀರ್ಥಹಳ್ಳಿ–೨೪೦	೯. ಭದ್ರಾವತಿ–೨
೫. ಶಿವಮೊಗ್ಗ–೧೫೩	

2 ಸಂಶೋಧನ ಕಾರ್ಯದಲ್ಲಿ ಸಹಾಯಮಾಡಿದ ಶ್ರೀ ಹೊ. ಅ. ನರಸಿಂಹಮೂರ್ತಿ ಅಯ್ಯಂಗಾರ್ ಮತ್ತು ಅವರ ಕುಟುಂಬದವರೆಲ್ಲರಿಗೂ, ಶ್ರೀ ದೇವರಾಜ್ ಮತ್ತು ಶ್ರೀ ಭಟ್ಟಸೂರಿಯವರಿಗೂ ನನ್ನ ಹೃತ್ಪೂರ್ವಕ ಕೃತಜ್ಞತೆಗಳು.

3 ಇದು ಈಗ ಶ್ರೀ ಸೀತಾರಾಮಾಂಜನೇಯ ಸ್ವಾಮಿ ದೇವಸ್ಥಾನವಾಗಿದೆ. ನಗರದಲ್ಲೇ ಅತ್ಯಂತ ಪ್ರಸಿದ್ಧವಾದ 'ದೇವಾಲಯ–ಸಂಕೀರ್ಣ'ವಾಗಿದೆ. ವಿಜಯನಗರ ಹಾಗೂ ಕೆಳದಿ ನಾಯಕರ ಕಾಲದಲ್ಲಿ ವೀರ ಆಂಜನೇಯ ದೇಗುಲ ನಿರ್ಮಾಣ, ವಿಗ್ರಹಸ್ಥಾಪನೆ ಗಣನೀಯ ಸಂಖ್ಯೆಯಲ್ಲಾಯಿತಷ್ಟೆ. ಈ ದೇಗುಲ ಬೆಳೆದಿದ್ದರೂ ಹದಿನಾರು–ಹದಿನೇಳನೆಯ ಶತಮಾನದಲ್ಲಿರಬೇಕು. ಮೂಲ ಆಂಜನೇಯ ವಿಗ್ರಹ, ದೇವಾಲಯದ ಕೆಲವು ಅಂಗಭಾಗಗಳು ಈ ಕಾಲದ ಶೈಲಿಯಲ್ಲಿ ರಚಿತವಾದುವು. ಈ ಶತಮಾನದಲ್ಲಿ ಸಾಕಷ್ಟು ಜೀರ್ಣೋದ್ಧಾರಗೊಂಡು, ಹೊಸ ಸೇರ್ಪಡೆಗಳನ್ನು ಪಡೆದವು. ೧೯೩೭ರಲ್ಲಿ ಸೀತಾರಾಮಲಕ್ಷ್ಮಣರ ಸ್ಥಿರಬಿಂಬ ಪ್ರತಿಷ್ಠೆ ಮತ್ತು ದೇವಾಲಯ ನಿರ್ಮಾಣ, ೧೯೭೧ರಲ್ಲಿ ಶ್ರೀಮದನಂತ ಗೋಪುರ ನಿರ್ಮಾಣ ಮುಂತಾದವುಗಳು ಸೇರಿ ಇಂದಿಗೆ ಒಂದು ಮೇಜರ್ ಮುಜರಾಯಿ ಮಂದಿರವಾಗಿ ಕಂಗೊಳಿಸುತ್ತಿದೆ. ಜೀನರಲ್ಲೂ ಹನುಮಂತನ ಆರಾಧನೆಯಿದ್ದು ಅವನನ್ನೂ ಜೈನ ವಿದ್ಯಾಧರನೆಂದು "ಅಣುಮಾನ್" ಎಂದೂ ಕರೆಯಲಾಗುತ್ತದೆ. ಆದರೆ ಈ ದೇಗುಲದಲ್ಲಿರುವ ವಿಗ್ರಹ ಆ ಸಂಪ್ರದಾಯದಲ್ಲ.

4 ಮೇಲಾಗಿ ತೊಲೆಯ ಒಂದು ಭಾಗವನ್ನು [ತಗ್ಗುಮಾಡಿ ಕೆತ್ತಿದ ಭಾಗವನ್ನು] ಶಾಸನ ಬರೆಯಲು ಬಳಸಿದ್ದು, ಇಲ್ಲಿ ಕಂಡರಿಸುವುದು ಇನ್ನು ಕಷ್ಟವಾದ ಕೆಲಸವೆನ್ನಬೇಕು.

5 ಹನ್ನೆರಡನೆಯ ಶತಮಾನದ ವೀರಶೈವ [ಸಾಮಾಜಿಕ ಧಾರ್ಮಿಕ ಸುಧಾರಣೆ] ಚಳವಳಿಯ ಹಿನ್ನೆಲೆ ಒಂದೆಡೆ, ಕಾಳಾಮುಖ, ಲಾಕುಳ ಶೈವ ಮುಂತಾದ ಇತರ

ಶೈವರ ಚಟುವಟಿಕೆಗಳ ಹಿನ್ನೆಲೆ ಇನ್ನೊಂದೆಡೆ ಇಲ್ಲಿ ಗಮನಾರ್ಹ. ಶಿವಮೊಗ್ಗ ಜಿಲ್ಲೆಯ ನಾಡಕಲಸಿ, ಬಳ್ಳಿಗಾವೆಗಳಲ್ಲದೆ ಹೊಯ್ಸಳನಾಡಿನ ಹಲವು ಶೈವಾಲಯಗಳನ್ನು ಹೆಸರಿಸಬಹುದು. ಹಿರಿಯೂರು, ಕೊರವಂಗಲ, ಮೂಡುಗೆರೆ, ಸಣ್ಣೇಹಳ್ಳಿ, ಬೇಲೂರು, ಒಕ್ಕಘಟ್ಟ, ನಂದಿ, ಹುಲ್ಲೇನಹಳ್ಳಿ, ಕಲ್ಲುಕೆರೆ, ಚನ್ನರಾಯಪಟ್ಟಣ, ಹಿರೇಹಳ್ಳಿ, ದುಗ್ಗಲಾಪುರ, ಅತ್ತಿಗೆರೆ, ಅರಸಿಕೆರೆ, ಆಸಂದಿ, ಒಕ್ಕಲುಗೆರೆ, ನಂದಿಗಟ್ಟ, ಹೆಜ್ಜೆಕಲು, ಮತ್ತಿಹಳ್ಳಿ, ಸಾತೇನಹಳ್ಳಿ, ಹೊನ್ನಕಟ್ಟೆ, ಕಂಚಿಗಲ್ಲು, ಹಳೇಬೀಡು, ಶಿವನೆಯಹಳ್ಳಿ, ಉಯ್ಯಗವುಂಡನಹಳ್ಳಿ, ಬಾಣಾಪುರ ಮುಂತಾದ ಊರುಗಳಲ್ಲಿದ್ದ ಶಿವಾಲಯಗಳ ಶಾಸನೋಲ್ಲೇಖವನ್ನು ಗಮನಿಸಬಹುದು.

ನೋಡಿ S. Settar: *Hoysala Sculptures in the National Museum, Copenhagen*, Copenhagen, 1975, ಪುಟ 23.

6 *EC* VII SK 123 (1159), 92 (1168), 150 (1171), 96 (1181), 101 (1181), 97 (1186–87), 105 (1193)

7 ಅದೇ Sk 139 (ಸು 1160)

8 ಅದೇ Sk 150 (1171)

9 ಅದೇ Sk 105 (1193)

10 *SII* IX–i, 235 (1141) *EC* VIII, Sb 276 (1070) ; *SII* IV, 784 (1200) (ಏಕ್ಕೋಟಿಗಣಾಲು)

11 ಕಪಟರಾಳ ಕೃಷ್ಣರಾಯ: ಕರ್ನಾಟಕ ಲಾಕುಳಶೈವರ ಇತಿಹಾಸ, ಧಾರವಾಡ, 1955, ಪುಟಗಳು 85–6

ನೋಡಿ, ಎಂ. ಚಿದಾನಂದಮೂರ್ತಿ, ಕನ್ನಡ ಶಾಸನಗಳ ಸಾಂಸ್ಕೃತಿಕ ಅಧ್ಯಯನ ಮೈಸೂರು, 1979, ಪು. 137.

12 *IA* XII, 257–22 ; 873 : *EC* XI Dg 134–59 (1108)

13 ಕಸಾಪನಿ II, ಬೆಂಗಳೂರು, 1976, 240 30, ಆದಿಪುರಾಣ 1–39 ;

14 ನೋಡಿ *EC* Ng 31 (XIV, Ng 131–3 (1200) Ng 170 (IV Ng 95) ; *EC* Y–i (XX) 12ನೆಯ ಶ. Bl. 139 (1255) *MAR* 1915, ಪು. 67 ; *KI*–V, 98 (1181) ; *EC* 14 (1976) ಪು. 19, 1 69, 459, 543 ಇತ್ಯಾದಿ.

15 *EC* Sh. 64 (1132)
ARIE (1970–1) B20D } ಸತ್ಯಗಂಗದೇವನೆಡೆಹಳ್ಳಿಯ ನೆಲೆವೀಡಿನೊಳು ಸುಖದಿಂ ರಾಜ್ಯಂಗೆಯ್ಯುತ್ತಿರ್ದ್ದಲ್ಲಿ ಕುರುಳಿ ತೀರ್ತ್ಥದಲು ಗಂಗ ಜಿನಾಲಯಮಂ ಮಾಡಿ ಸಕವರ್ಷ ೧೦೫೪ನೆಯ ನಂದನ ಸಂವತ್ಸರದ ಚೈತ್ರ ಸುಪುಣ್ಣಮಿ ಯಾಡಿವಾರ

ಸೋಮಗ್ರಹಣದಂದು . . . (ಈ ಕಾಲವಿವರ ವ್ಯವಸ್ಥಿತವಾಗಿಲ್ಲ). ಶಿವಮೊಗ್ಗ ವಸ್ತು ಸಂಗ್ರಹಾಲಯದ ಇನ್ನೊಂದು 12ನೆಯ ಶ.ದ ಶಾಸನದಲ್ಲಿ ಬಿಸದಿಹಳ್ಳಿ, ಪಟ್ಟಿನ ಬಸದಿ [ಇದನ್ನು ಸನ್ನಿಯ ಗಂಗನ ಪಟ್ಟದರಸಿ ಕಾಂಚಲದೇವಿ ಕಲ್ಲಿನಲ್ಲಿ ಕಟ್ಟಿಸಿದಳು.] ಕುರುಳಿಯ ಬಸದಿಗಳ ಉಲ್ಲೇಖಗಳವೆ.

16 ಧ್ಯಾನಕಾಲದಲ್ಲಿ ಕುಳಿತುಕೊಳ್ಳಲು ಅನುಕೂಲವಾಗುವಂತೆ ಯೋಗಿಯ ಬೆನ್ನು ಮತ್ತು ಮೊಳಕಾಲುಗಳನ್ನು ಸೇರಿಸಿ ಸುತ್ತಿಕೊಳ್ಳುವ ಬಟ್ಟೆ; ಯೋಗಿಗಳ ಹೊದುಕೆ ಕಸಾಪನಿ III, ಬೆಂಗಳೂರು, 1977 ಪು. 3109.

17 ನಿಡುಗಲ್ಲಿನ ಜಿನಾಲಯವನ್ನು "ಜೋಗವಟ್ಟಿಯ ಬಸದಿ" ಎಂದೇ ಹೆಸರಿಸಲಾಗಿದೆ *MAR* 1918, ಪು. 11 *E*C Pg 52 (1232)

18 ಜೈನ ಸಂಪ್ರದಾಯದಲ್ಲಿ ನಂದಿಗಣ, ನಂದಿಪಾದ, ನಂದಿಸೂತ್ರ ಮುಂತಾದವುಗಳು ಸಾಮಾನ್ಯವಾಗಿ ನೋಡ ಸಿಗುವುದಾದರೂ, ದಿಗಂಬರ ಜೈನ ಸಮಾಜದಲ್ಲಿ ನಂದಿ ಕೋಲನ್ನು ಹೊತ್ತು ಮೆರೆಯುವ ವಾಡಿಕೆಯಿಲ್ಲವೆಂದು ಹೇಳುತ್ತಾರೆ. ಮೈಸೂರು ನಗರದಲ್ಲಿರುವ ಶ್ವೇತಾಂಬರ ಜೈನ ಸಮಾಜದವರನ್ನು ಕೇಳಲಾಗಿ, ಈ ಬಗೆಯ ನಂದಿಕೋಲಿನ ಪರಿಚಯ ತಮಗಿಲ್ಲವೆಂದರೂ, "ಇಂದ್ರಧ್ವಜ"ವೆನ್ನುವ ಅಲಂಕೃತ ಕಂಬ (ಅದಕ್ಕೆ ಪುಟ್ಟ ಗಾಲಿಗಳುಳ್ಳ ಗಾಡಿ ಸಹಿತ) ವಿದ್ದುದನ್ನು ತೋರಿಸಿದರು. ಬಹುಶಃ ಮಧ್ಯಕಾಲೀನ ಸಮಾಜದಲ್ಲಿದ್ದ (ನಂದಿಯೇ ಲಾಂಛನವಾಗುಳ್ಳ ಕಂಬ) ನಂದಿಕೋಲನ್ನು ಇದು ಸೂಚಿಸುತ್ತದೆ. *E*C XVI, gb. 74-21 (ಸು 1672)

19 ನೋಡಿ ಕಸಾಪನಿ IV ಬೆಂಗಳೂರು, 1979, ಪು. 4280.

20 *E*C VIII, Sh. 64 (1132) ; Sh 3, (1671) ಕೊರ್ಲಹಳಿ (ಗಾಜನೂರು ಸೀಮೆ) ; Sh 26 (1524) ಕೊರಲಹಳ್ಳಿ.

21 ಮಂಡಳಿನಾಡು ಶಿವಮೊಗ್ಗದ ದಕ್ಷಿಣ ಭಾಗವಾಗಿದ್ದು ಪ್ರಾಚೀನ ಗಂಗರ ಕಾಲ ದಿಂದಲೂ ಪ್ರಾಮುಖ್ಯವನ್ನು ಪಡೆದಿತ್ತು ಈ ನಾಡಿನಲ್ಲಿ "ಗಂಗಮಂಡಲಿ ರಾಜ್ಯ" ವೆಂದು ಹದಿಮೂರನೆಯ ಶತಮಾನದ ಶಾಸನವೊಂದು ತಿಳಿಸುತ್ತದೆ. *E*C VII, Sh. 78 (1291) ; ಇದೇ ಶಾಸನ ಗಂಗ ನಾಡನ್ನೂ ಉಲ್ಲೇಖಿಸು ತ್ತದೆ ; EC VII 117 (1204)

22 ಇದನ್ನು ಸಾಮಾನ್ಯವಾಗಿ 'ಕಲ್ಯಾಣಿ' ಎಂದು ಕರೆದರೂ ವಾಸ್ತವವಾಗಿ ಇದು ಕಲ್ಯಾಣ. ಆದರೆ ಈ ಶಾಸನದಲ್ಲಿ 'ಕಲ್ಯಾಣಿ' ಎಂದೇ ಉಲ್ಲೇಖಿಸಿದೆ. ಬೀದರ ಜಿಲ್ಲೆಯ ಕಲ್ಯಾಣವಲ್ಲದೆ ಶಿವಮೊಗ್ಗದ ಬಳಿ ಮತ್ತೊಂದು 'ಕಲ್ಯಾಣಿ' ಏನಾದರೂ ಇತ್ತೋ [ಸದ್ಯಕ್ಕೆ ತಿಳಿಯದು].

23 ಇತ್ತೀಚೆಗೆ ಶಿವಮೊಗ್ಗ ಜಿಲ್ಲೆಯ ಸೊರಬ ತಾಲ್ಲೂಕಿನ ಕೆಲಗುಂಡ್ಲಿಯಲ್ಲಿ ಬನವಾಸಿ ಕದಂಬರಸನಾದ ರವಿವರ್ಮನ ಕಾಲದ ಕನ್ನಡ ಶಾಸನವೊಂದು ನನಗೆ ದೊರೆತಿದ್ದು, ಅದರಲ್ಲಿ "ಮನ್ನೆಗೆ ಆ ಅರಸರು" ಎಂದಿದೆ. ಈ ಮನ್ನೆಗೆಯೇ ಪ್ರಸ್ತುತ ಶಾಸನದ ಮನ್ನೆಕ ಇರಬಹುದೆ? ನೋಡಿ ಕನ್ನಡ ನುಡಿ, ಸಂಪುಟ 46, ಸಂಚಿಕೆ 20

24 ಹೊಯ್ಸಳ ಶೈಲಿಯ ಶಿಲ್ಪಗಳಿದ್ದು ಕೆಲವಂತಿಕೆ ಹಾಗೂ ಜಾಲಂಧ್ರ, ಬಾಗಿಲು ವಾಡದ ವಾಸ್ತು ಶಿಲ್ಪಕ್ಕೆ ನಿದರ್ಶನವಾಗಿದೆ. ಇವು ಅತಿ ಅಲಂಕರಣೆಯಿಂದ ತುಂಬಿಲ್ಲ ವಾದರೂ [ಸ್ವಾಲಂಕೃತ ಜೈನ ಬಸದಿಯ ಚೌಕಟ್ಟಿನಲ್ಲಿ ನೋಡಿದರೆ ಸಾರ್ಥಕವೆನ್ನಬೇಕು.

25 ಅ. ಸುಂದರ, ಶಿವಮೊಗ್ಗ ಜಿಲ್ಲೆ : ದರ್ಶನ, ಬೆಂಗಳೂರು, 1978. ಪು. 49. ಈಗಿರುವ ಕೋಟಿ ಶಂಕರದೇವ ದೇವಾಲಯವು "ಮೂಲತಃ ಜೈನ ಬಸದಿಯಾಗಿದ್ದಿತು ನಿರ್ಮಿತಿಯು" ಎನ್ನುವ ಮಾತನ್ನು ಈಗ ಪುನಃ ಪರಿಶೀಲಿಸಬೇಕಾಗಿದೆ. ಇದರ ವಿವರ ಪೂರ್ಣ ಅಧ್ಯಯನವನ್ನು ಪ್ರತ್ಯೇಕವಾಗಿ ಮಾಡುತ್ತಿದ್ದು, ಅದರ ಫಲಿತಾಂಶವನ್ನು ಇನ್ನೊಂದು ಲೇಖನದಲ್ಲಿ ಪ್ರಕಟಿಸಲಾಗುವುದು.

26 ಶಿರಾ ತಾಲೂಕು [ತು.ಕ.] ಗುಡ್ಡಪುರದಲ್ಲಿರುವ ಒಂದು ಜಿನಾಲಯವನ್ನು ಈಗ ವೀರಭದ್ರ ದೇವಾಲಯವನ್ನಾಗಿ ರೂಪಾಂತರಿಸಲಾಗಿದ್ದನ್ನು ಇಲ್ಲಿ ಉದಾಹರಿಸಬಹುದು : ಧಾರವಾಡ ಜಿಲ್ಲೆ ಹಿರೇಕೆರೂರು ತಾಲೂಕಿನ ಅಬ್ಬಲೂರಿನ ಜಿನಾಲಯವನ್ನು ಕೆಡಹಿ, ಜಿನಬಿಂಬವನ್ನು ಒಡೆದು ಸೋಮೇಶ್ವರಾಲಯವನ್ನು ನಿರ್ಮಿಸಿದ್ದು ಸಮಕಾಲೀನ ಶಾಸನ–ಸಾಹಿತ್ಯಗಳಲ್ಲಿ ಉಲ್ಲೇಖಿಸಲಾಗಿದ್ದು, ಆ ದೇವಾಲಯದ ಕಕ್ಷಾಸನದಲ್ಲೂ, ಜಾಲಂಧ್ರಗಳಲ್ಲೂ ಶಿಲ್ಪಿಸಲಾಗಿದೆ.

27 EC VIII, Sh 40 [1180]

28 ಶಾಮಿಯಾಂದ ಕೆರೆಯ ಪ್ರತಿಯನ್ನಾಧರಿಸಿ ಓದಿದ ಶಾಸನ ಪಾಠ.

ಅಂಬಳಿಕೆ ಹಿರಿಯಣ್ಣ

ಸಂಸ್ಕೃತಿ ಅಧ್ಯಯನ ಮತ್ತು ಜಾನಪದ

ಮಾನವ ಸಂಸ್ಕೃತಿಯನ್ನು ಅಧ್ಯಯನ ಮಾಡುವ ಶಾಸ್ತ್ರಗಳಲ್ಲಿ ಜಾನಪದ ಪ್ರಮುಖವಾದುದು. ಬಹಳ ಕಾಲದವರೆಗೆ ಭಾಷಾಶಾಸ್ತ್ರದಂತೆ ಜಾನಪದ ಕೂಡ ಸಾಂಸ್ಕೃತಿಕ ಮಾನವಶಾಸ್ತ್ರದ ಒಂದು ಅಂಗವಾಗಿಯೇ ಪರಿಗಣಿತವಾಗಿತ್ತು. ಹತ್ತೊಂಬತ್ತನೆಯ ಶತಮಾನದ ಕಡೆಯ ದಶಕದಲ್ಲಿ ಅದು ಸಾಂಸ್ಕೃತಿಕ ಮಾನವಶಾಸ್ತ್ರದಿಂದ ಬೇರೆಯಾಗಿ ಸ್ವತಂತ್ರ ಅಸ್ತಿತ್ವವನ್ನು ಪಡೆದುಕೊಂಡಿತು. ಮಾನವನನ್ನು ಕುರಿತು ಅಧ್ಯಯನ ಮಾಡುವ ಮಾನವಿಕ ಹಾಗೂ ಸಮಾಜ ವಿಜ್ಞಾನಗಳಿಗೆ, ಇಂದು ಜಾನಪದವು ಮೂಲ ಸಾಮಗ್ರಿಯನ್ನು ಒದಗಿಸುವ ದೊಡ್ಡ ಆಕರವೆನಿಸಿದೆ. ಬಹುತೇಕ ಶಾಸ್ತ್ರ ವಿಷಯಗಳಿಗೆ ಉಪಯುಕ್ತವಾದ ಸಾಮಗ್ರಿಗಳನ್ನು ಅದು ಒದಗಿಸಿಕೊಡುವುದರಿಂದ ಸಂಸ್ಕೃತಿಯ ಅಧ್ಯಯನದಲ್ಲಿ ಜಾನಪದದ ಪಾತ್ರ ಮಹತ್ತ್ವದ್ದಾಗಿದೆ. ಜಾನಪದವನ್ನು ಬಳಸಿಕೊಳ್ಳದ ಯಾವುದೇ ಮಾನವಕುಲ ಶಾಸ್ತ್ರೀಯ ಅಧ್ಯಯನ ಒಟ್ಟು ಸಂಸ್ಕೃತಿಯ ಕಲ್ಪನೆಯ ದೃಷ್ಟಿಯಿಂದ ಅಪೂರ್ಣವಾದದ್ದೆನಿಸುತ್ತದೆ.[1]

ಮಾನವ ವಿಜ್ಞಾನಿಗಳ ಪ್ರಕಾರ ಜಾನಪದವು ಸಂಸ್ಕೃತಿಯ ಒಂದು ಭಾಗಮಾತ್ರವೇ ಹೊರತು ಸಮಗ್ರ ಸಂಸ್ಕೃತಿಯಲ್ಲ[2]ವಾದ್ದರಿಂದ ಇಲ್ಲಿ ಸಂಸ್ಕೃತಿಯ ಸ್ವರೂಪವೇನು ಎಂಬುದನ್ನು ಸ್ಥೂಲವಾಗಿ ವಿವೇಚಿಸುವ ಅಗತ್ಯವಿದೆ. ಸಂಸ್ಕೃತಿ ಬೇರೆ ಪ್ರಾಣಿವರ್ಗಗಳಿಗಿಲ್ಲದ ಮಾನವ ವರ್ಗಕ್ಕೆ ಮಾತ್ರ ಸೀಮಿತವಾಗಿರುವ ವಿಷಯ. ಮೊಟ್ಟಮೊದಲ ಬಾರಿಗೆ ಆದಿವಾಸಿಗಳ ಸಂಸ್ಕೃತಿಯ ಅಧ್ಯಯನ ಮಾಡಿದ ಇ.ಬಿ. ಟೈಲರ್ ಅವರು culture ಪದಕ್ಕೆ ಶಾಸ್ತ್ರೀಯವಾದ ವಿವರಣೆ ನೀಡಿ ಸಂಸ್ಕೃತಿಯ ಸ್ವರೂಪವನ್ನು ಸೂತ್ರರೂಪದಲ್ಲಿ ಹೇಳಿದ್ದಾರೆ: Culture or Civilization is that complex whole which includes knowledge, belief, art, morals, law, customs and any other capabilities acquired by man as a member of Society.[3] ಒರದು ಗೊತ್ತಾದ ಪರಂಪರೆಗೆ ಸೇರಿದ ಜನ ಕಲಿಯುವ, ಹರಡಿಕೊಳ್ಳುವ ಮತ್ತು ಗೌರವಿಸುವ ಕಾರ್ಯಗಳ, ಭಾವನೆಗಳ ಹಾಗೂ ಮಾನವ ನಿರ್ಮಿತ ವಸ್ತು ವಿಶೇಷಗಳ ಮೊತ್ತವನ್ನೇ ಸಂಸ್ಕೃತಿ

ಎಂದು ಕರೆಯುವುದು ಎಂದು ಕೇಸಿಂಗ್ ಹೇಳಿದ್ದಾರೆ.[4] ಹೆರ್ಸ್ಕೊವಿಟ್ಸ್ ಅವರು ಸುತ್ತಲಿನ ಪರಿಸರದಲ್ಲಿ ಮಾನವನ ನಿರ್ಮಿತವಾದ ಭಾಗವನ್ನೇ ಸಂಸ್ಕೃತಿ ಎಂದು ಕರೆಯುವುದು ಎಂದು ಅಭಿಪ್ರಾಯಪಟ್ಟಿದ್ದಾರೆ.[5] ಇದೇ ರೀತಿಯಲ್ಲಿ ಸುಮಾರು ನೂರರವತ್ತಕ್ಕೂ ಹೆಚ್ಚು ಮಂದಿ ಮಾನವ ವಿಜ್ಞಾನಿಗಳು ಸಂಸ್ಕೃತಿಯ ಸ್ವರೂಪವನ್ನು ಸೂತ್ರರೂಪದಲ್ಲಿ ಹೇಳಲು ಯತ್ನಿಸಿದ್ದಾರೆ. ಆದರೆ ಈ ವ್ಯಾಖ್ಯೆಗಳು ಕೂಡ 'ಜಾನಪದ'ವನ್ನು ಕುರಿತ ವಿವರಣೆಗಳಂತೆ ಅವ್ಯಾಪ್ತಿ ಅತಿವ್ಯಾಪ್ತಿ ದೋಷಕ್ಕೆ ಒಳಗಾಗಿದೆ. ಇಷ್ಟಾಗಿಯೂ ಆ ಎಲ್ಲ ವ್ಯಾಖ್ಯೆಗಳು ಸಂಸ್ಕೃತಿಯ ಸ್ವರೂಪವನ್ನು ಅರಿಯಲು ಸಹಕಾರಿಯಾಗಿವೆ. ಆ ಎಲ್ಲ ಅಭಿಪ್ರಾಯಗಳ ಸಾರ: ಮಾನವ ವರ್ತನೆಗಳ ಮೊತ್ತವೇ ಸಂಸ್ಕೃತಿ.

'ಸಂಸ್ಕೃತಿ' ಎಂಬುದು ವ್ಯಾಪಕವಾದ ಒಂದು ಪರಿಕಲ್ಪನೆ. ಮಾನವ ಇತಿಹಾಸ ಕಾಲದ ಮತ್ತು ಇತಿಹಾಸ ಪೂರ್ವಕಾಲದ ಎಲ್ಲ ಸಾಂಸ್ಕೃತಿಕ ಅವಶೇಷಗಳನ್ನೂ ಅದು ಒಳಗೊಳ್ಳುತ್ತದೆ. ಆದಿವಾಸಿ ಸಂಸ್ಕೃತಿ [Primitive Culture] ಗ್ರಾಮೀಣ ಸಂಸ್ಕೃತಿ [Rural Culture] ನಗರ ಸಂಸ್ಕೃತಿ [Urban Culture] ಎಂಬ ಹಾಗೆ ಸಂಸ್ಕೃತಿಯ ವಿಕಾಸದ ಮೂರು ಹಂತಗಳನ್ನು ಗುರುತಿಸಲಾಗಿದೆ. ಆದಿವಾಸಿ ಸಂಸ್ಕೃತಿಯ ಕೆಲವು ಅಂಶಗಳನ್ನು ಉಳಿಸಿಕೊಂಡು ನಗರ ಸಂಸ್ಕೃತಿಯ ಕೆಲವು ಅಂಶಗಳನ್ನು ರೂಢಿಸಿಕೊಂಡು ಮಧ್ಯಮ ಸ್ಥಿತಿಯಲ್ಲಿರುವ ಗ್ರಾಮೀಣ ಸಂಸ್ಕೃತಿಯನ್ನು ಜನಪದ ಸಂಸ್ಕೃತಿ [Folk Culture] ಎಂದೂ ಆದಿವಾಸಿ ಸಂಸ್ಕೃತಿಗೆ ವಿರುದ್ಧವಾದ ಲಕ್ಷಣಗಳನ್ನು ಹೊಂದಿರುವ ನಗರ ಸಂಸ್ಕೃತಿಯನ್ನು ಶಿಷ್ಟ ಸಂಸ್ಕೃತಿ [Sophisticated Culture] ಎಂದೂ ಕರೆಯುವುದು ವಾಡಿಕೆಯಾಗಿದೆ.[6]

ಸಂಸ್ಕೃತಿಯ ಒಂದು ಮುಖ ಜಾನಪದ. ಯಾವುದೇ ಜನಸಮೂಹದ ಬೇಸಾಯ ಮೀನುಗಾರಿಕೆ, ಬೇಟೆ, ಮಡಿಕೆ ಮಾಡುವುದು, ಆಸ್ತಿ ವರ್ಗಾವಣೆಯ ಕ್ರಮ, ಬಂಧುತ್ವದ ವಿಚಾರ, ವಿವಾಹ ಮತ್ತು ಕುಟುಂಬ ವ್ಯವಸ್ಥೆಯಂಥ ಸಾಮಾಜಿಕ ರಚನೆ, ರಾಜಕೀಯ ಮತ್ತು ಆರ್ಥಿಕ ವ್ಯವಸ್ಥೆ, ಧರ್ಮ ಭಾಷೆ ಮುಂತಾದವು ಸಂಸ್ಕೃತಿಯ ಇತರ ಮುಖಗಳು. ಜಾನಪದ, ಕಥೆ ಗೀತೆ, ಗಾದೆಗಳಂತಹ ಶಾಬ್ದಿಕ ಅಭಿವ್ಯಕ್ತಿಗಳನ್ನೂ ನಂಬಿಕೆ ಆಚರಣೆ ಸಂಗೀತ ನೃತ್ಯಗಳಂತಹ ಶಾಬ್ದಿಕವಲ್ಲದ ರೂಪಗಳನ್ನೂ ಒಳಗೊಂಡದ್ದೆಂದು ಅಭಿಪ್ರಾಯ.[7] ಹೀಗೆ ಎರಡರಲ್ಲೂ ಹೆಚ್ಚುಕಡಿಮೆ ಒಂದೇ ಬಗೆಯ ವಿಷಯಗಳು ಕಾಣಿಸಿಕೊಳ್ಳುತ್ತವೆ. ಆದರೆ ಜಾನಪದ ವಿಷಯಗಳು ಸಂಸ್ಕೃತಿಯ ಮೂಲ ವಸ್ತುಗಳಾಗುವಂತೆ ಸಂಸ್ಕೃತಿಯ ಮೂಲವಸ್ತುಗಳೆಲ್ಲ ಜಾನಪದವಾಗುವುದಿಲ್ಲ.[8] ಇದರಿಂದ, ಜಾನಪದವಿಲ್ಲದ ಯಾವ ಸಂಸ್ಕೃತಿಯೂ ಅಸ್ತಿತ್ವದಲ್ಲಿಲ್ಲ ಎನಿಸಿದರೂ ಯಾವುದೇ ಸಂಸ್ಕೃತಿಯಲ್ಲಿ ಜಾನಪದದ ಜೊತೆಗೆ ಇತರ ವಿಷಯಗಳೂ ಇರುತ್ತವೆ ಎಂಬುದು ಸ್ಪಷ್ಟವಾಗುತ್ತದೆ.

ಸಂಸ್ಕೃತಿ ಮಾನವನಿಗೆ ಸಂಬಂಧಿಸಿದುದರಿಂದ ಅದರ ಅಧ್ಯಯನ ಮಾನವಶಾಸ್ತ್ರದ ವ್ಯಾಪ್ತಿಯಲ್ಲಿ ಬರುತ್ತದೆ. ಮಾನವ ಮತ್ತು ಅವನ ಸಂಸ್ಕೃತಿಯ ಸಮಗ್ರ ಅಧ್ಯಯನ ನಡೆಸುವುದು ಮಾನವಶಾಸ್ತ್ರದ ಗುರಿ. ಮಾನವಶಾಸ್ತ್ರದಲ್ಲಿ ಭೌತಿಕ ಮಾನವಶಾಸ್ತ್ರ

[Physical Anthropology] ಮತ್ತು ಸಾಂಸ್ಕೃತಿಕ ಮಾನವಶಾಸ್ತ್ರ [Cultural Anthropology] ಎಂಬ ಎರಡು ಪ್ರಮುಖ ಶಾಖೆಗಳಿವೆ. ಭೌತಿಕ ಮಾನವಶಾಸ್ತ್ರ ಮಾನವನ ಭೌತಿಕ ಲಕ್ಷಣಗಳನ್ನು ಕುರಿತು ಅಧ್ಯಯನ ಮಾಡಿದರೆ ಸಾಂಸ್ಕೃತಿಕ ಮಾನವಶಾಸ್ತ್ರ ಮಾನವನ ಸಂಸ್ಕೃತಿಯ ಅಧ್ಯಯನ ಮಾಡುತ್ತದೆ. ಸಾಂಸ್ಕೃತಿಕ ಮಾನವಶಾಸ್ತ್ರದಲ್ಲಿ ನಾಲ್ಕು ಉಪಶಾಖೆಗಳಿವೆ: [1] ಪ್ರಾಕ್ತನಶಾಸ್ತ್ರ [Pre historic Archaeslogy] [2] ಭಾಷಾ ವಿಜ್ಞಾನ [Linguistics] [3] ಮಾನವಕುಲಶಾಸ್ತ್ರ [Ethnology] [4] ಸಾಮಾಜಿಕ ಮಾನವ ಶಾಸ್ತ್ರ [Social Anthropology] ಇವು ಒಂದೊಂದೂ ಒಂದೊಂದು ಅಧ್ಯಯನ ಗುರಿ ಹೊಂದಿವೆ. ಇತಿಹಾಸ ಪೂರ್ವಕಾಲದ ಸಂಸ್ಕೃತಿಯನ್ನು ಅಧ್ಯಯನ ಮಾಡುವುದು ಪ್ರಾಕ್ತನಶಾಸ್ತ್ರದ ಗುರಿಯಾದರೆ ಮಾನವ ಭಾಷೆಯ ಸ್ವರೂಪವನ್ನು ಅಭ್ಯಸಿಸುವುದು ಭಾಷಾ ವಿಜ್ಞಾನದ ಉದ್ದೇಶ. ಮಾನವಕುಲ ಶಾಸ್ತ್ರದಲ್ಲಿ ಮಾನವ ಕುಲ ವಿವರಣ ಶಾಸ್ತ್ರ [Ethnography] ಎಂಬ ಇನ್ನೊಂದು ಉಪವಿಭಾಗವಿದೆ. ಸಂಪ್ರದಾಯಗಳ ವಿವರಣಾತ್ಮಕ ಅಧ್ಯಯನ ಮಾನವಕುಲ ವಿವರಣ ಶಾಸ್ತ್ರದ ಉದ್ದೇಶವಾದರೆ ಬೇರೆ ಬೇರೆ ಸಂಸ್ಕೃತಿಗಳಿಗಿರುವ ಸಾಮ್ಯ ವೈಷಮ್ಯಗಳನ್ನು ಚಾರಿತ್ರಿಕ ವಿಧಾನದಿಂದ ಅಭ್ಯಸಿಸುವುದು ಮಾನವ ಕುಲ ಶಾಸ್ತ್ರದ ಗುರಿ. ಸಾಮಾಜಿಕ ಮಾನವಶಾಸ್ತ್ರದಲ್ಲಿ ಮಾನವನ ಸಾಮಾಜಿಕ ಸಂಬಂಧಗಳ ಅಧ್ಯಯನ ನಡೆಸುವುದು ವಾಡಿಕೆ. ಈ ಸಾಮಾಜಿಕ ಮಾನವಶಾಸ್ತ್ರ ಪ್ರಪಂಚದ ಸಂಸ್ಕೃತಿಗಳ ಅಧ್ಯಯನವನ್ನು ಗುರಿಯಗಿ ಹೊಂದಿದ್ದಾದರೆ ಮಾನವಕುಲಶಾಸ್ತ್ರ ಆದಿವಾಸಿ ಸಂಸ್ಕೃತಿಗಳ ಅಧ್ಯಯನಕ್ಕೆ ಸೀಮಿತ. ಒಂದೇ ವಿಷಯ ಸಾಮಗ್ರಿಯನ್ನು ಒಳಸಿಕೊಳ್ಳುವ ಈ ಎರಡು ಶಾಸ್ತ್ರಗಳು ಬೇರೆ ಬೇರೆ ಅಧ್ಯಯನ ಕ್ರಮಗಳನ್ನು ರೂಪಿಸಿಕೊಂಡಿರುವುದು ಒಂದು ವಿಶೇಷ. ಜಾನಪದ ಮತ್ತು ಭಾಷಾವಿಜ್ಞಾನಗಳು ಸ್ವತಂತ್ರ ಅಸ್ತಿತ್ವವನ್ನು ಸಾಧಿಸಿಕೊಳ್ಳುವವರೆಗೂ ಈ ಮಾನವಕುಲ ಶಾಸ್ತ್ರದ ಅಂಗಗಳೇ ಆಗಿದ್ದವು.

ಜಾನಪದ, ಸಂಸ್ಕೃತಿಯ ಒಂದು ಭಾಗವಾಗಿರುವುದರಿಂದ ಸಾಂಸ್ಕೃತಿಕ ಮಾನವಶಾಸ್ತ್ರದೊಡನೆ ಅದು ಸಂಬಂಧವನ್ನು ಹೊಂದಿದೆ. ಅದರಲ್ಲೂ ಮಾನವಕುಲಶಾಸ್ತ್ರ ಮತ್ತು ಸಾಮಾಜಿಕ ಮಾನವ ಶಾಸ್ತ್ರಗಳೊಡನೆ ಅದರ ಸಂಬಂಧ ನಿಕಟವಾದುದು. ಮೊದಲಿಗೆ ಆ ಶಾಸ್ತ್ರಗಳು ಜಾನಪದವನ್ನು ಪ್ರತ್ಯೇಕಿಸಿ ಅಭ್ಯಸಿಸುತ್ತಿರಲಿಲ್ಲ. ಭಾಸ್ಕಮ್ ಅವರು ಮಾನವಶಾಸ್ತ್ರ ಮತ್ತು ಜಾನಪದಗಳ ನಡುವಿನ ಸಂಬಂಧವನ್ನು ಕುರಿತು ಚರ್ಚಿಸುತ್ತ ಮಾನವಶಾಸ್ತ್ರಜ್ಞ ಸಂಗ್ರಹಿಸಬಹುದಾದ ಸಾಮಗ್ರಿಗಳ ಒಂದು ಪಟ್ಟಿಯನ್ನೇ ಕೊಡುತ್ತಾರೆ.9 ಆ ಪಟ್ಟಿಯನ್ನು ನೋಡಿದರೆ ಜಾನಪದದ ಸಾಹಿತ್ಯಿಕ ಬಗೆಗಳನ್ನುಳಿದು ಮಿಕ್ಕೆಲ್ಲ ಸಾಮಗ್ರಿಗಳನ್ನು ಸಾಂಸ್ಕೃತಿಕ ಮಾನವಶಾಸ್ತ್ರಜ್ಞನೂ ಅಭ್ಯಸಿಸುತ್ತಾನೆಂಬುದು ಸ್ಪಷ್ಟವಾಗುತ್ತದೆ. ಜಾನಪದ ಸಂಗ್ರಹಕ ಇನ್ನಷ್ಟು ವ್ಯಾಪಕವಾಗಿ ಅದೇ ವಿಷಯಗಳನ್ನು ಕೆಲವು ಹೊಸ ಪ್ರಕಾರಗಳೊಡನೆ ಸಂಗ್ರಹಿಸುತ್ತಾನೆ. ಬಹಳ ಸಂದರ್ಭಗಳಲ್ಲಿ

9

ಅವರಲ್ಲೂ ಆದಿವಾಸಿಗಳ ಅಧ್ಯಯನದಲ್ಲಿ ಮಾನವಶಾಸ್ತ್ರ ಹಾಗೂ ಜಾನಪದಗಳ ನಡುವಿನ ಅಂತರವನ್ನು ಬೇರ್ಪಡಿಸುವುದು ಕಷ್ಟವಾಗುತ್ತದೆ. ಅನುಕರಣೆ ಹಾಗೂ ಕಂಠಸ್ಥ ಸಂಪ್ರದಾಯದಲ್ಲಿ ಬೆಳೆದು ಬಂದ ಪರಂಪರಾಗತ ಸರ್ವಜ್ಞಾನವನ್ನೂ ಜಾನಪದ ಸ್ವೀಕರಿಸುವುದರಿಂದ ಅಂಥ ಕಡೆಗಳಲ್ಲಿ ಎಲ್ಲವೂ ಜಾನಪದವೇ ಆಗುತ್ತದೆ. ಮಾನವಶಾಸ್ತ್ರಜ್ಞ ಇಂಥ ಶುದ್ಧ ಜನಪದ ಸಂಸ್ಕೃತಿಯ ಘಟ್ಟದಲ್ಲೇ ನಿಂತು ಬಿಡುತ್ತಾನೆ. ಜಾನಪದ ವಿಜ್ಞಾನಿ ತನ್ನ ಕ್ಷೇತ್ರವನ್ನು ಮಧ್ಯಸ್ಥ ಸಂಸ್ಕೃತಿ, ನಗರ ಸಂಸ್ಕೃತಿಗಳಿಗೂ ವಿಸ್ತರಿಸಿಕೊಂಡು ಜಾನಪದದ ವ್ಯಾಪ್ತಿಯನ್ನು ನೋಡುತ್ತಾನೆ. ಅದರ ವಿಶ್ವವ್ಯಾಪಕತೆಯನ್ನು ಸಮಗ್ರ ವಿಶ್ವದ ಸಾಮಗ್ರಿಯೊಡನೆ ಹೋಲಿಸಿ ಅಧ್ಯಯನ ಮಾಡುತ್ತಾನೆ. ಮಧ್ಯಸ್ಥ ಸಂಸ್ಕೃತಿಗೆ ಬಂದಾಗ ನವನಾಗರಿಕ ವಿಷಯಗಳಿಂದ ಗ್ರಂಥಸ್ಥ ಜ್ಞಾನದಿಂದ ದೂರವಾದ ಪರಂಪರಾನುಗತ ವಿಷಯಗಳನ್ನು ಮಾತ್ರ ಪ್ರತ್ಯೇಕಿಸಿಕೊಂಡು ಅಭ್ಯಸಿಸುತ್ತಾನೆ. ನಗರ ಜೀವನದಲ್ಲಿಯೂ ಅಲ್ಪಪ್ರಮಾಣದಲ್ಲಿ ಲಭ್ಯವಾಗುವ ಸಾಂಪ್ರದಾಯಿಕ ವಿಷಯಗಳ ಪದರಗಳನ್ನು ಬಿಡಿಸಲು ಪ್ರಯತ್ನಿಸುತ್ತಾನೆ. ಮಾನವಶಾಸ್ತ್ರಜ್ಞ ಜನಪದ ಸಂಸ್ಕೃತಿ, ಪ್ರೌಢಸಂಸ್ಕೃತಿ ಎಂಬ ಭೇದವಿಲ್ಲದೆ ಸಮಗ್ರ ಸಂಸ್ಕೃತಿಯನ್ನು ಅವಲೋಕಿಸುತ್ತಾನೆ.[10] ಸಾಮಗ್ರಿಯನ್ನು ಬಳಸಿಕೊಳ್ಳುವ ಬಗೆಯಲ್ಲೂ ಎರಡೂ ಶಾಸ್ತ್ರಗಳು ವೈವಿಧ್ಯತೆಯನ್ನು ತೋರುತ್ತವೆ. ಮಾನವಶಾಸ್ತ್ರ ಇತರ ಶಾಸ್ತ್ರಗಳಂತೆ ತನ್ನ ಅಧ್ಯಯನಕ್ಕೆ ಬೇರೆ ಬೇರೆ ಮೂಲಗಳನ್ನು ಅವಲಂಬಿಸದೆ ನೇರವಾಗಿ ಅನಕ್ಷರಸ್ಥ ಸಮಾಜದ ಮಾನವನನ್ನೇ ಅಧ್ಯಯನ ಮಾಡುತ್ತದೆ. ಜಾನಪದ ಕೂಡ ತನ್ನ ಅಧ್ಯಯನವನ್ನು ನೇರವಾಗಿ ಹೀಗೆಯೇ ಆರಂಭಿಸಿದರೂ ಅದು ತನಗೆ ಬೇಕಾದ ಸಾಮಗ್ರಿಯನ್ನು ಬೇರೆ ಬೇರೆ ಮೂಲಗಳಿಂದಲೂ ಆರಿಸಿಕೊಳ್ಳುತ್ತದೆ.[11] ಮಾನವಶಾಸ್ತ್ರ ಮತ್ತು ಜಾನಪದದ ಅಧ್ಯಯನ ಗುರಿ, ಸ್ವರೂಪಗಳನ್ನು ಕುರಿತು ಬರೆಯುತ್ತ ಕೆನೆತ್ ಮತ್ತು ಮೇರಿಕ್ಲಾರ್ಕ್ ಅವರು ವ್ಯಕ್ತಮಾಡಿರುವ ಅಭಿಪ್ರಾಯಗಳು ಇಲ್ಲಿ ಗಮನಾರ್ಹ: However, the focus of anthropology is man. The methods and materials used by anthropologists enhance understanding of their subject physical man or his culture. Folklore is one of the many artifacts of culture which many shed light on the nature of man. In contrast, the folklorist is concerned directly with folklore as the object of his study. The cultural anthropologist frequently has a strong secondary interest in academic folklore. Similarly the folklorist frequently has a a strong secondary interest in cultural Anthropology[12] ಮಾನವಶಾಸ್ತ್ರ ಇಡೀ ಮಾನವನ ಮೇಲೆ ಕೇಂದ್ರೀಕೃತವಾಗಿದ್ದರೆ. ಜಾನಪದ,

ಸಂಸ್ಕೃತಿಯ ಅನೇಕ ಕುಶಲ ವಸ್ತುಗಳಲ್ಲಿ ಒಂದಾಗಿದ್ದು ಮನುಷ್ಯನ ಸ್ವಭಾವದ ಮೇಲೆ ಬೆಳಕು ಚೆಲ್ಲುವುದೆಂದು ಹೇಳಿ ಸಾಂಸ್ಕೃತಿಕ ಮಾನವಶಾಸ್ತ್ರಜ್ಞ ಮತ್ತು ಜಾನಪದ ತಜ್ಞರು ಪರಸ್ಪರರ ವಿಷಯಗಳನ್ನು ಸಹಾಯಕ ಸಾಮಗ್ರಿಗಳಾಗಿ ಬಳಸಿಕೊಳ್ಳುತ್ತಾರೆಂಬುದನ್ನು ಸಮರ್ಪಕವಾಗಿಯೇ ವಿವರಿಸಿದ್ದಾರೆ. ಈ ಎಲ್ಲ ವಿವರಣೆಗಳಿಂದ, ಈಗ, ಸಾಂಸ್ಕೃತಿಕ ಮಾನವಶಾಸ್ತ್ರ ಮತ್ತು ಜಾನಪದದ ಅಧ್ಯಯನ ಉದ್ದೇಶಗಳನ್ನು ಹೀಗೆ ಗುರುತಿಸಬಹುದು: ಪ್ರಪಂಚದ ಎಲ್ಲ ಸಂಸ್ಕೃತಿಗಳ ಅಧ್ಯಯನ ಸಾಂಸ್ಕೃತಿಕ ಮಾನವ ಶಾಸ್ತ್ರದ ಗುರಿ. ಒಂದು ನಿರ್ದಿಷ್ಟ ಜನಪದ ವರ್ಗದ ಸಂಸ್ಕೃತಿಯ ಸಮಗ್ರ ಅಧ್ಯಯನ ಜಾನಪದದ ಉದ್ದೇಶ.

ಮಾನವ ಸಂಸ್ಕೃತಿಯ ಅಧ್ಯಯನವನ್ನೇ ಮೂಲ ಉದ್ದೇಶವಾಗಿಸಿಕೊಂಡಿರುವ ಜಾನಪದ, ಆಚರಣೆ, ನಂಬಿಕೆ, ಸಂಪ್ರದಾಯ ಇತ್ಯಾದಿಗಳ ಮೂಲಕ ಮಾನವ ಸಂಸ್ಕೃತಿಯನ್ನು ಪ್ರತಿಬಿಂಬಿಸುವ ಧ್ಯೇಯವನ್ನು ಹೊಂದಿದೆ. ಯಾವುದೇ ಒಂದು ಜನಪದ ವರ್ಗದ ಜಾನಪದವನ್ನು ಅಭ್ಯಸಿಸಿ ನೋಡಿದಾಗ ಆ ವರ್ಗದ ಜನರನ್ನು ಕುರಿತಾದ ಮಹತ್ತ್ವದ ಮಾನವ ಕುಲ ಶಾಸ್ತ್ರಕ್ಕೆ ಸಂಬಂಧಿಸಿದ ಅಂಶಗಳನ್ನೆಲ್ಲಾ ಅದು ಹೆಕ್ಕಿಕೊಂಡಿರುವುದು ಗಮನಕ್ಕೆ ಬರುತ್ತದೆ.13 ಆದ್ದರಿಂದ, ಜಾನಪದ ನಿಜವಾದ ಅರ್ಥದಲ್ಲಿ ಜನತೆಯ ಮಾನವಕುಲಶಾಸ್ತ್ರ ; ಇನ್ನೂ ಸರಿಯಾಗಿ ಹೇಳುವುದಾದರೆ, ನಿರ್ದಿಷ್ಟ ಜೀವನ ರೀತಿಯ ಸೂಕ್ಷ್ಮ ಚಿತ್ರವನ್ನು ಎಳೆಎಳೆಯಾಗಿ ಕೊಡುವಂಥದು.14 ಅದು ಆಯಾ ಜನಪದ ವರ್ಗದ ಪ್ರಾಚೀನ ಜೀವನ ರೀತಿನೀತಿಗಳನ್ನು ಪ್ರತಿಬಿಂಬಿಸುವುದರ ಜೊತೆಗೆ ಅವರ ಆಸೆ ಆಕಾಂಕ್ಷೆಗಳನ್ನೂ ಹೇಳುತ್ತದೆ. ಮುಖ್ಯವಾಗಿ, ಸಾಮಾಜಿಕವಾಗಿ ಕೆಳಸ್ತರದವರೆಂದು ಪರಿಗಣಿತವಾದ ಎಲ್ಲ ಜನಸಮೂಹಗಳ ಬದುಕನ್ನು, ಪ್ರಾಚೀನ ನಂಬಿಕೆಗಳ ಉಳಿಕೆಗಳನ್ನು ಪ್ರತಿನಿಧಿಸುತ್ತದೆಂಬುದು ಇದೆಲ್ಲದರ ತಿರುಳು.15

ಒಟ್ಟಿನಲ್ಲಿ, ಜಾನಪದ ಸಂಸ್ಕೃತಿಯ ಮಾದರಿಗಳನ್ನು ನೆನಪು ಮತ್ತು ಅನುಕರಣೆಯ ಮೂಲಕ ಉಳಿಸಿಕೊಂಡು ಬಂದಿದ್ದು ಅವುಗಳನ್ನು ಅಧ್ಯಯನ ಮಾಡುವುದರ ಮೂಲಕ ಸಂಸ್ಕೃತಿಯ ಆಶಯಗಳನ್ನೂ ಅರ್ಥವನ್ನೂ ಹೊರಗೆಡಹುತ್ತದೆ. ಮೊದಲೇ ಪ್ರತಿಪಾದಿಸಿರುವಂತೆ, ಜಾನಪದ, ಜನಪದ ಜೀವನದ ಸಮಸ್ತ ವಿಷಯಗಳನ್ನೂ ಅಭ್ಯಸಿಸುತ್ತದೆ. ‘ಇದರಲ್ಲಿ ಸಾಹಿತ್ಯ, ಕಲೆ, ಆಚರಣೆಗಳಿರುವಂತೆಯೇ ಜನಪದ ಅಡುಗೆ, ಉಡುಗೆ, ಧರ್ಮ, ವಾಸ್ತು, ವೈದ್ಯ, ಬೇಸಾಯಗಳೂ ಸೇರಿಕೊಂಡಿವೆ.16 ಮುಖ್ಯವಾಗಿ ಸಂಸ್ಕೃತಿಯ ಭೌತಿಕ, ಅಭೌತಿಕ ಮತ್ತು ಶಾಬ್ದಿಕ ವಿಷಯಗಳನ್ನು ಅದು ಒಳಗೊಳ್ಳುತ್ತದೆ.

ಅಡಿ ಟಿಪ್ಪಣಿಗಳು

1. Donn V. Hart : *Riddles in Filipino Folklore-An Anthropological Analysis*, p. 3.

2. Bascom W.R., in his article Folklore and Anthropology, in *The study of Folklore* p. 28.

3. Tylor E. B. : *Primitive Culture.*

4. Keesing Felix M. : *Cultural Anthropology*, New York, 1965, p. 25.

5. Herskovits Melville F. : *Cultural Anthropology*, New York, 1960, p. 223.

6. ವಿವರಗಳಿಗೆ ನೋಡಿ : Kroeber A. L. : *Anthropology*, Oxford, 1976.

7. ರಾಗೌ—ಜಾನಪದ ಸಮಾವೇಶ, ಕಅಸಂ., ಮೈಸೂರು, 1979, ಪು. 210.

8. Paulo de Carvalho Neto, *The Concept of Folklore*, Trans. Wilson, p. 91.

9. Bascom W.R.: in his article, Folklore and Anthropology in *The Study of Folklore* p. 26

10. ಪರಮಶಿವಯ್ಯ ಜೀ.ಶಂ. (ಡಾ.) ಜಾನಪದ ಕೆಲವು ಮುಖಗಳು, 1975, ಪು 18

11. ಅದೇ, ಪು 15-16

12. Kenneth aud Mary Clarke : *Introducing Folklore* 1966, p. 3.

13. Boaz Franz. : *Race Language and Culture*, p. 497

14. Herskovits J. Melville. : *Cultural Anthropology*, p. 269

15. Dorson R. M. : *Folklore and Folklife*, 1972, p. 38

16. ರಾಗೌ—ಜಾನಪದ ಸಮಾವೇಶ, ಕಅಸಂ, ಮೈಸೂರು, 1979, ಪು. 220.

ಮೈಸೂರು ವಿಶ್ವವಿದ್ಯಾನಿಲಯದ ತ್ರೈಮಾಸಿಕಗಳು

—o—

- ಮಾನವಿಕ ಕರ್ಣಾಟಕ
- ವಿಜ್ಞಾನ ಕರ್ಣಾಟಕ
- ಪ್ರಬುದ್ಧ ಕರ್ಣಾಟಕ

ವಾರ್ಷಿಕ ಚಂದಾ

(ಪ್ರತಿಯೊಂದಕ್ಕೂ ಅಂಚೆ ವೆಚ್ಚ ಸೇರಿ)

ವಿದ್ಯಾರ್ಥಿಗಳಿಗೆ	....	ನಾಲ್ಕು ರೂಪಾಯಿ
ಇತರರಿಗೆ	....	ಆರು ರೂಪಾಯಿ
ಸಂಸ್ಥೆಗಳಿಗೆ	....	ಎಂಟು ರೂಪಾಯಿ

(ಅಜೀವ ಸದಸ್ಯತ್ವ : ನೂರು ರೂಪಾಯಿಗಳು)
(ಪ್ರತಿಯೊಂದಕ್ಕೂ)

ಡೈರೆಕ್ಟರ್
'ಪ್ರಸಾರಾಂಗ'
ಮಾನಸಗಂಗೋತ್ರಿ, ಮೈಸೂರು–೫೭೦ ೦೦೬